ಜನಶಕ್ತಿ


ಮಿಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 31

5/-

ಆಗಸ್ಟ್ 02, 2009


ಕನ್ನಡ ವಾರಪತ್ರಿಕೆ



ಕೃಷ್ಣನ ಹೆಸರಿನಲ್ಲಿ ಮಕ್ಕಳ ಅನ್ನ ರೈತನ ನೆಲದ ಲೂಟಿ

AKSHAYA PĀTRA


Unlimited food for education





ಬೆಂಗಳೂರನ್ನು ಕಟ್ಟುತ್ತಿರುವ ವಲಸೆ ಕಾರ್ಮಿಕರ ಪಾಡು

ಗ್ರಾಮೀಣ ಉದ್ಯೋಗ ಖಾತ್ರಿಗಾಗಿ ಕೂಲಿಕಾರರ ಸೆಣಸಾಟ



ಕರಾವಳಿ :

ಮಳೆ ಹಾನಿಯೂ ನೈತಿಕ ಪೊಲೀಸರ ಗೂಂಡಾಗಿರಿಯೂ



ಗಂಗಜ್ಜ ಇನ್ನಿಲ್ಲ

ಜನಶಕ್ತಿ ಕನ್ನಡ ವಾರಪತ್ರಿಕೆ

ಆಗಸ್ಟ್ 02, 200

ಮಂಡ್ಯ ಗ್ರಾಮೀಣ ಪ್ರದೇಶದಲ್ಲಿನ ಬಡತನ, ನಿರುದ್ಯೋಗ, ಅರೆ ನಿರುದ್ಯೋಗಕ್ಕೆ ಒಂದು ಪರಿಣಾಮಕಾರಿ ಪರಿಹಾರವಾಗ ಬಹುದಾದ ಒಂದು ಸಾಧನ ಗ್ರಾಮೀಣ 'ಉದ್ಯೋಗ ಖಾತ್ರಿ ಯೋಜನೆ'. ಆದರೆ ಇದನ್ನು ಜಾರಿ ಮಾಡಲು ಸರ್ಕಾರಕ್ಕೆ, ಅಧಿಕಾರಿ ವರ್ಗಕ್ಕೆ 'ಯಾಕೋ' ಮನಸ್ಸೇ ಇಲ್ಲ. ಈ ಯೋಜನೆಯ ಸಮರ್ಪಕ ಜಾರಿಗಾಗಿ ಹೋರಾಟ ನಡೆಸುತ್ತಿರುವ ಬೇರೆ ಬೇರೆ ಜಿಲ್ಲೆಯ ಸಂಗಾತಿಗಳು ಗಮನಿಸಬೇಕಾದ ಅತ್ಯಂತ ಮಹತ್ವದ ಹೋರಾಟದ ಅನುಭವ ಮಂಡ್ಯ ಜಿಲ್ಲೆಯದು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಮಹತ್ವದ ಚಳುವಳಿ ಕುರಿತು ಕೃಷಿ ಕೂಲಿಕಾರರ ಸಂಘದ ಮಂಡ್ಯ ಜಿಲ್ಲಾ ಅಧ್ಯಕ್ಷರಾದ ಎಂ.ಪುಟ್ಟಮಾದು ಅವರ ಒಂದು ಸಂದರ್ಶನ.



'ಉದ್ಯೋಗ ಖಾತ್ರಿ'ಗಾಗಿ ಕೂಲಿಕಾರರ ಸೆಣಸಾಟ

ವಿಶಿಷ್ಟ ಅನುಭವಗಳು

ಸಂದರ್ಶನ

ಜನಶಕ್ತಿ : ಮಂಡ್ಯ ಜಿಲ್ಲೆಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಜಾರಿ ಹೇಗಿದೆ? ಈ ನಿಟ್ಟಿನಲ್ಲಿ ಕೂಲಿಕಾರರ ಸಂಘ ಏನು ಮಾಡಿತು?

ಪುಟ್ಟಮಾದು : ಎಡಪಕ್ಷಗಳ ಒತ್ತಾಯ ಒತ್ತಡದ ದೆಸೆಯಿಂದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ರೂಪುಗೊಳ್ಳುತ್ತಿರುವ ಹಂತದಲ್ಲೇ ಜಿಲ್ಲೆಯಲ್ಲಿ ಪ್ರಾಂತ ಕೃಷಿ ಕೂಲಿಕಾರರ ಸಂಘ ಇರುವ ಕಡೆಗಳಿಗೆ ಜನರಿಗೆ ಅದರ ಮಹತ್ವ ವಿವರಿಸುತ್ತಾ ಬಂದೆವು. ಕಾಯ್ದೆಯು ಏಪ್ರಿಲ್ 2008 ರಂದು ಅಂಗೀಕಾರವಾಯ್ತು. ಎಲ್ಲೆಲ್ಲಿ ಕೂಲಿಕಾರರ ಸಂಘದ ಘಟಕ ಇತ್ತೋ ಅಲ್ಲೆಲ್ಲಾ ಕೂಲಿಕಾರರ ನೊಂದಣಿ ಮಾಡಿಸಿದೆವು. ಮೊದಲ ಹಂತದಲ್ಲಿ 15 ಸಾವಿರ, ಆನಂತರ ಎರಡನೇ ಹಂತದಲ್ಲಿ 10 ಸಾವಿರ ಜನರ ನೊಂದಣಿ ಮಾಡಿಸಲಾಯಿತು. ಮುಖ್ಯವಾಗಿ ಮಳವಳ್ಳಿ, ಮದ್ದೂರು, ಮಂಡ್ಯ, ನಾಗಮಂಗಲ, ಪಾಂಡವಪುರ ತಾಲ್ಲೂಕುಗಳಲ್ಲಿ ಈ ನೊಂದಣಿ ನಡೆಯಿತು.

ಆದರೆ 3 ತಿಂಗಳಾದರೂ ಆಡಳಿತದ ವತಿಯಿಂದ ಯಾರಿಗೂ ಜಾಬ್ ಕಾರ್ಡ್ (ಉದ್ಯೋಗ ಚೀಟಿ) ಕೊಡಲಿಲ್ಲ. ಸಂಘಟನೆ ಈ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಂಡಿತು. ಉದ್ಯೋಗಖಾತ್ರಿ ಯೋಜನೆ ಜಾರಿ ಪ್ರಶ್ನೆ ಮೇಲೆ ಜಿಲ್ಲಾಮಟ್ಟದ ಕಾರ್ಯಾಗಾರ ನಡೆಸಿ ಪ್ರಮುಖ ಕಾರ್ಯಕರ್ತರಿಗೆ ತರಬೇತಿ ಕೊಡಲಾಯಿತು. ಜಿಲ್ಲಾ ಪಂಚಾಯತ್‌ನ ಸಿಇಒಗೆ ಕೆಲಸ ಕೊಟ್ಟಿಲ್ಲದಿರುವ ಬಗೆಗೆ ಮನವಿ ಕೊಡಲಾಯಿತು. ಜಿಲ್ಲಾಮಂತ್ರಿಗೆ ಮನವಿ ನೀಡಿ ಯೋಜನೆಯ ಮಹತ್ವ ವಿವರಿಸಲಾಯಿತು. ಒಬ್ಬ ಸಿಇಒ ಹೋಗಿ ಮತ್ತೊಬ್ಬರು ಬಂದರು. ಅವರದೂ ಅದೇ ಕತೆ.

ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಹಣ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಕೃಷಿ ಕಲಿಕಾರರ ಸಂಘದ ವತಿಯಿಂದ ಮಳವಳ್ಳಿ ತಾಲ್ಲೂಕು ಶೆಟ್ಟಹಳ್ಳಿ ಗ್ರಾಮ ಪಂಚಾಯತಿ ಕಛೇರಿ ಎದುರು ಪ್ರತಿಭಟನೆ



9 ಲಕ್ಷ ಪರಿಹಾರಕ್ಕೆ ಬೇಡಿಕೆ

ನಂತರ ಮಹಿಳಾ ಕೂಲಿಕಾರರ ಸಮಾವೇಶ ನಡೆಸಲಾಯಿತು. ನಂತರ 300 ರಿಂದ 400 ಮಹಿಳೆಯರು ಸೇರಿ ಮುತ್ತಿಗೆ ಹಾಕಲಾಯಿತು. ನಾಳೆಯಿಂದಲೇ ಜಾಬ್‌ಕಾರ್ಡ್ ಕೊಡುತ್ತೇವೆ ಎಂದರು. ಆದರೆ ಮದ್ದೂರು ಮಳವಳ್ಳಿಗಳಲ್ಲಿ ಕೆಲವು ಕಡೆ ಮಾತ್ರ ಜಾಬ್‌ಕಾರ್ಡ್ ಕೊಟ್ಟರು. ಜಾಬ್‌ಕಾರ್ಡ್ ಕೊಟ್ಟ ಕಡೆ ಹಾಗೂ ಕೊಡದ ಕಡೆ ಎರಡೂ ಕಡೆ ನಮೂನೆ 6 ನ್ನು ಅಂದರೆ ಕೆಲಸಕ್ಕಾಗಿ ಅರ್ಜಿಯನ್ನು ನೀಡಲಾಯಿತು. ಮೊದಲು ಹುಸ್ಕೂರು ಪಂಚಾಯ್ತಿಯಲ್ಲಿ ಅರ್ಜಿ ನೀಡಲಾಯಿತು. ಆದರೂ ಕೆಲಸ ಕೊಡಲಿಲ್ಲ. ಪ್ರತಿಭಟನೆ ಮಾಡಿದೆವು. ಅದಕ್ಕೂ ಬಗ್ಗಲಿಲ್ಲ. ಮಳವಳ್ಳಿ ತಾಲ್ಲೂಕಿನಲ್ಲಿ ಪಂಚಾಯ್ತಿ ಮುಂಭಾಗ ಧರಣ ನಡೆಸಿದೆವು. 15 ದಿನಗಳೊಳಗೆ ಕೆಲಸ ಕೊಡಬೇಕಿದ್ದದ್ದು 3 ತಿಂಗಳಾದರೂ ಕೆಲಸ ಕೊಟ್ಟಿಲ್ಲದಿರುವುದರಿಂದ 600 ಜನಕ್ಕೆ ಕಾನೂನಿನಂತೆ 9 ಲಕ್ಷ ಪರಿಹಾರ ಕೊಡಬೇಕೆಂದು ಪಟ್ಟುಹಿಡಿದೆವು. ಅದೇ ಮನವಿಯನ್ನು ಜಿಲ್ಲಾ ಪಂಚಾಯ್ತಿ ಸಿ.ಇ.ಒ ರಾಜ್ಯ ಉದ್ಯೋಗಖಾತ್ರಿ ಯೋಜನೆಯ ರಾಜ್ಯ ನಿರ್ದೇಶಕರಿಗೆ ನೀಡಿದೆವು. ಇದರಿಂದ ಹುಸ್ಕೂರು ಪಂಚಾಯ್ತಿ ಮೇಲೆ ಕ್ರಮವಹಿಸಬೇಕಾದ ಪರಿಸ್ಥಿತಿ ಬಂತು. ಆಗ ಕೆಲಸ ಕೊಡಲು ಶುರು ಮಾಡಿದರು. ಆಗ ನಮಗೆ 50 ಜನ ಬೇಕು 100 ಜನ ಬೇಕು ಅಂತ ಕೇಳಿದರು. (ಇ.ಒ ನಂತರದಲ್ಲಿ ಹುಸ್ಕೂರು ಪಂಚಾಯ್ತಿ ಕಾರ್ಯದರ್ಶಿ (ದಿವ್ಯಾನಂದ) ಅವರ ಮೇಲೆ ಕ್ರಮವಹಿಸಿ ಸಸ್ಪೆಂಡ್ ಮಾಡಬೇಕಾದ ಸನ್ನಿವೇಶ ಬಂತು. ಆಗ ಅವರು ಮುಂದೆ ಹೀಗೆ ಮಾಡುವುದಿಲ್ಲ ಎಂದು ಕ್ಷಮೆಕೇಳಿ ಕೃಷಿ ಕೂಲಿಕಾರರಿಗೆ 1 ಲಕ್ಷ ರೂ. ಪರಿಹಾರ ನೀಡಲು ಒಪ್ಪಿ ಪರಿಹಾರ ನೀಡಿದರು. ಈ ಘಟನೆ ವ್ಯಾಪಕ ಪ್ರಭಾವ ಬೀರಿತು.

ಕೆಲಸ ನೀಡಿಕೆ ವಿಳಂಬಕ್ಕಾಗಿ ಹುಸ್ಕೂರು ಪಂಚಾಯ್ತಿ ಕಾರ್ಯದರ್ಶಿ ಕ್ಷಮೆ ಕೋರಿ ಒಂದು ಲಕ್ಷ ದಂಡ ಕಕ್ಕಬೇಕಾಯಿತು

ಉಚಿತ ಖಾತೆ ತೆರೆಯಲು ಉಚಿತ ಕ್ಯಾತೆ

ಮತ್ತೊಂದು ಜಿಲ್ಲಾಮಟ್ಟದ ಕಾರ್ಯಾಗಾರಕ್ಕೆ ಜಿಲ್ಲಾ ಪಂಚಾಯ್ತಿಯ ಡಿ.ಎಸ್(ಜಿಲ್ಲಾ ಕಾರ್ಯದರ್ಶಿ 2) ಅವರನ್ನು ಕರೆದಿದ್ದೆವು. 'ಬೇಡಿಕೆ ಒಪ್ಪುತ್ತೇವೆ. ನಾನೇ ಬರುತ್ತೇನೆ' ಎಂದು ಡಿ.ಎಸ್ 2 ಸ್ಥಳ ಸಮೀಕ್ಷೆಗೆ ಬಂದರು. ಕಾರ್ಯದರ್ಶಿ ಜೊತೆ, ತಾಲ್ಲೂಕು ಪಂಚಾಯ್ತಿ ಇ.ಒ. ಹಾಗೂ ಮಳವಳ್ಳಿಯ ಸಹೋದರ ಸಂಘಟನೆಗಳ ಮುಖಂಡರೂ ಬಂದರು. ಪಂಚಾಯ್ತಿ ಮಟ್ಟಗಳಲ್ಲಿ ಉದ್ಯೋಗಾಕಾಂಕ್ಷಿಗಳ ನೊಂದಣಿಯೇ ಆಗಿರಲಿಲ್ಲ. ಇನ್ನು ಜಾಬ್‌ಕಾರ್ಡ್ ಕೊಡುವ ಮಾತಂತೂ ದೂರವೇ ಆಯ್ತು. ಸಹಕಾರಿ ಬ್ಯಾಂಕು, ಅಂಚೆ ಕಛೇರಿ, ಉದ್ಯೋಗಖಾತ್ರಿ ಯೋಜನೆ ವಿಷಯಕ್ಕಾಗಿ ಠೇವಣಿರಹಿತವಾದ ಉಚಿತ ಖಾತೆಯನ್ನು ತೆರೆಯಲು ಅವಕಾಶ ನೀಡಬೇಕೆಂಬ ಕಾನೂನಿದೆ. ಆದರೆ ಅದಕ್ಕೆ ಸಂಬಂಧಿಸಿದ ಸುತ್ತೋಲೆ ಬ್ಯಾಂಕು, ಅಂಚೆ ಕಛೇರಿಗಳಿಗೆ ತಲುಪಿರಲಿಲ್ಲ. ಹಿನ್ನೆಲೆಯಲ್ಲಿ ಕೆಲಸ ಬೇಕಾದವರು ಬ್ಯಾಂಕ್ ಖಾತೆ ಆರಂಭಿಸಲು ಆಗಿರಲೇ ಇಲ್ಲ. ಈ ಹಿನ್ನೆಲೆಯಲ್ಲಿ 'ಹಾಡ್ಲಿ' ಅಂಚೆ ಕಛೇರಿ ಮುಂಭಾಗ ಒಂದು ಹೋರಾಟ ನಡೆಯಿತು. ಮಾರನೇ ದಿನದಿಂದ ಖಾತೆ ತೆರೆಯಲು ಆರಂಭಿಸಿದರು. ಆಮೇಲೆ ಸುತ್ತೋಲೆಯೂ ಬಂತು. ಈಗಲೂ ಸಮಸ್ಯೆ ಪೂರ್ತಿ ಬಗೆಹರಿದಿಲ್ಲ. ಮದ್ದೂರು ತಾಲ್ಲೂಕು, ಮಾಚಳ್ಳಿಯ ಕೂಲಿಕಾರರಿಗೆ ಕೆಸ್ತೂರ್ ವಿಜಯಾ ಸಹಕಾರಿ ಬ್ಯಾಂಕ್ ಖಾತೆ ತೆರೆಯಲು ಒಪ್ಪಲಿಲ್ಲ. 300 ರೂ.ಠೇವಣಿ ಕೇಳುತ್ತಿದ್ದಾರೆ.

ಜನಶಕ್ತಿ : ಕೂಲಿಕಾರರ ಮೇಲೆ ಪ್ರಭಾವ ಭೀರಿದ ಇತರ ಹೋರಾಟ ಯಾವುದು?

ಪುಟ್ಟಮಾದು : ಯೋಜನೆ ಕುರಿತ ನಿರ್ಲಕ್ಷ್ಯಕ್ಕಾಗಿ ಹುಸ್ಕೂರು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಹಾಗೂ ಶೆಟ್ಟಳ್ಳಿ, ತಳಗವಾದಿ, ಬಿಜಿಪುರ ಕಾರ್ಯದರ್ಶಿಗಳಿಗೆ ಡಿ.ಎಸ್.2 ಛೀಮಾರಿ ಹಾಕಿದರು ಮತ್ತು ಸಸ್ಪೆಂಡ್ ಮಾಡುವ ಎಚ್ಚರಿಕೆ ನೀಡಿದರು. ಇದು ಇಡೀ ಜಿಲ್ಲೆಯಲ್ಲಿ ಸಂಚಲನ ಹುಟ್ಟಲು ಕಾರಣವಾಯ್ತು. ಮಳವಳ್ಳಿ ತಾಲ್ಲೂಕಿನಲ್ಲಿ ಕೆಲಸದ ಗುಚ್ಛದ ವಿಷಯದಲ್ಲಿ ಗೊಂದಲ ಮಾಡಿದರು. ಒಂದಕ್ಕೆ ಮೂರುಪಟ್ಟು ಕೆಲಸ ಮಾಡಬೇಕೆಂಬ ಹಾಕಿದ್ದರು, ಪಂಚಾಯತ್ ಕಾರ್ಯದರ್ಶಿಗಳು ಇಂಜಿನಿಯರ್‌ಗಳು ಹಾಡ್ಲಿ ಪಂಚಾಯತ್ ಲಿಂಗನಾಪುರ, ಪಂಡಿತಳ್ಳಿ ಪಂಚಾಯ್ತಿಯ ಹೊಸದೊಡ್ಡಿ ಹಾಗೂ ಬಾಚನಹಳ್ಳಿಗಳಲ್ಲಿ ಕೆಲಸಕ್ಕೆ ಬರದಂತೆ ನೋಡಿಕೊಂಡರು. "ಈ ಕೆಲಸಕ್ಕೆ ಯಾಕೆ ಬರ್ತೀರಿ? ಏನು ಪ್ರಯೋಜನ? ಎಷ್ಟೊಂದು ಗೆಯ್ಯಬೇಕು" ಎಂದೆಲ್ಲಾ ಮಾತನಾಡಿ ಕೂಲಿಕಾರರು ಬಡರೈತರು ಕೆಲಸ ಬರದಂತೆ ಮಾಡಿದ್ದರು.

ನಿರ್ಲಕ್ಷ್ಯ ತೋರಿದ ಪಂಚಾಯ್ತಿ ಕಾರ್ಯದರ್ಶಿಗಳನ್ನು ಸಸ್ಪೆಂಡ್ ಮಾಡಲೇಬೇಕಾದ ಪರಿಸ್ಥಿತಿ ಬದಾಗ ಕೂಲಿಕಾರರು, ಜನರಲ್ಲಿ ಹೊಸ ಸಂಚಲನ ಮೂಡಿತು.

ಪುಟ 4ಕ್ಕೆ

ಅಬ್ಬ! ಈ ಪರಿ ಕೂಲಿ ವಂಚನೆ

"ಮಂಡ್ಯ ತಾಲ್ಲೂಕಿನ, ತೂರೆಶೆಟ್ಟಹಳ್ಳಿಯಲ್ಲಿ ದಿನಕ್ಕೆ ಕೇವಲ 40 ರೂ. ಕೂಲಿಕೊಟ್ಟಿದ್ದರು. ಕೂಲಿ ಕೆಲಸ ನಿಲ್ಲಿಸಿದ್ದರು. ಅದೇ ರೀತಿ ಹಣ್ಣೂರಿನಲ್ಲಿಯೂ ಕೆಲಸ ಕೊಟ್ಟದ್ದನ್ನು ನಿಲ್ಲಿಸಿಬಿಟ್ಟಿದ್ದರು. ಕರ್ನಾಟಕ ಪ್ರಾಂತ ರೈತ ಸಂಘ ಈ ವಿಷಯದಲ್ಲಿ ಪ್ರತಿಭಟನೆ ನಡೆಸಿದ್ದರಿಂದ 40 ರೂ. ಕೂಲಿ ಬದಲಿಗೆ ನಿಗದಿತ 82 ರೂ. ಕೂಲಿ ನೀಡಿದರು. ತೂರೆಶೆಟ್ಟಹಳ್ಳಿ, ಹಣ್ಣೂರು ಎರಡೂ ಕಡೆ 82 ರೂ. ಕೂಲಿ ದೊರೆಯಿತು ಮತ್ತು ತೂರೆಶೆಟ್ಟಹಳ್ಳಿಯಲ್ಲಿ ಪ್ರತಿಭಟಿಸಿದ ದಿನದಂದೇ ಮತ್ತೆ ಕೆಲಸ ಪಡೆದುಕೊಳ್ಳುವುದು ಸಾಧ್ಯವಾಯಿತು.

400 ರೂ. ಕೆಲಸಕ್ಕೆ 60 ರೂ. ಕೂಲಿ

ಪಾಂಡವಪುರ ತಾಲ್ಲೂಕು ರೇಗಾ ಸಮಾವೇಶವನ್ನು ಮಾಡಿದನಂತರ ಗುಮ್ಮನಹಳ್ಳಿ ಪಂಚಾಯ್ತಿಯಲ್ಲಿ 60 ಜನರು ಅರ್ಜಿ ಹಾಕಿದರು. ಒತ್ತಾಯ ಮಾಡಿ ಇಲ್ಲಿ ಕೆಲಸ ಕೊಡಿಸಲಾಯಿತು. ಪಂಚಾಯ್ತಿ ಕಾರ್ಯದರ್ಶಿ ಮತ್ತು ಇಂಜಿನಿಯರ್‌ಗಳು 'ಕಡಿಮೆ ಕೆಲಸ ಮಾಡಿದ್ದೀರಿ' ಅಂತ ಹೇಳಿ ಒಂದು ತಿಂಗಳು ಕೂಲಿಯನ್ನೇ ಕೊಟ್ಟಿರಲಿಲ್ಲ. (ಸೋಮೇಗೌಡ ಕಾರ್ಯದರ್ಶಿ, ನಾಗರಾಜ್ ಇಂಜಿನಿಯರ್) ಅಧಿಕೃತವಾಗಿ ಕಾಯ್ದೆಯ ಲೆಕ್ಕಾಚಾರದಂತೆ 400 ರೂ. ಕೂಲಿ ಕೊಡಬೇಕಾದ ಕೆಲಸಕ್ಕೆ 60 ರೂ. ಕೊಡುತ್ತೇವೆಂದು ವಾದಿಸುತ್ತಿದ್ದರು. ನಮ್ಮ ಬಳಿ ಇದ್ದ ಉದ್ಯೋಗ ಖಾತ್ರಿ ಕಾಯ್ದೆಯ ಪ್ರತಿಯನ್ನು ತೋರಿಸಿದೆವು. ಅವರ ಬಳಿ ಕಾಯ್ದೆಯ ಪ್ರತಿ ಇರಲೇ ಇಲ್ಲ. ಆಮೇಲೆ ತೆಪ್ಪಗೆ ಬಾಯಿ ಮುಚ್ಚಿಕೊಂಡು ನಿಯಮದಂತೆ ಕೂಲಿ ನೀಡಿದರು. ಕೂಲಿಕಾರರಿಗೆ ಈಗ ಸಂಘಟನೆಯ ಮೇಲೆ ವಿಶ್ವಾಸ ಮಾಡಿದೆ."


○ ಪುಟ್ಟಮಾದು

ಕೃಷ್ಣನ ಹೆಸರಿನಲ್ಲಿ ಮಕ್ಕಳ ಅನ್ನ ರೈತರ ನೆಲದ ಲೂಟಿ

ಜಿ.ಎನ್.ನಾಗರಾಜ್

ವಿಧಾನಸಭೆಯಲ್ಲಿ ಜುಲೈ 23 ರಂದು ವಿಶೇಷ ಚರ್ಚೆಯೊಂದು ನಡೆದು ಇಸ್ಕಾನ್‌ನ ಬಿಸಿಯೂಟ ಹಾಗೂ ಭೂಗಳ್ಳತನದ ವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ಸದನ ಸಮಿತಿಯೊಂದನ್ನು ರಚಿಸಲಾಗುವುದೆಂದು ಸರ್ಕಾರ ಘೋಷಿಸಿದೆ. ಕೃಷ್ಣನ ಬಗ್ಗೆ ಜನರ ಭಕ್ತಿಯನ್ನು ದುರುಪಯೋಗಪಡಿಸಿಕೊಂಡು ಅದನ್ನೊಂದು ಲಾಭದ ವ್ಯವಹಾರವಾಗಿ ಮಾಡಿಕೊಂಡಿರುವ ಈ ಸಂಸ್ಥೆ ರಾಜಾಜಿನಗರ ಮೊದಲನೇ ಬ್ಲಾಕ್‌ನಲ್ಲಿ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಸರ್ಕಾರಿ ಜಾಗವಾದ ಗುಡ್ಡವೊಂದನ್ನು ಆಕ್ರಮಿಸಿಕೊಂಡು ಆಕರ್ಷಿಕವಾದ ದೇವಾಲಯ ನಿರ್ಮಿಸಿದೆ. ಕೃಷ್ಣನ ಹೆಸರು ಹಾಗೂ ಆ ದೇವಾಲಯದ ಸೌಂದರ್ಯವನ್ನೇ ಬಂಡವಾಳ ಮಾಡಿಕೊಂಡು ದುರ್ವ್ಯಾಪಾರ ಮತ್ತು ದುಲಾರ್ಭದ ಕೇಂದ್ರವಾಗಿದೆ. ಒಂದು ಕಡೆ ಬಿಸಿಯೂಟ ನೀಡುವ ಮಹಿಳೆಯರ ನೌಕರರಿಗೆ ಕುತ್ತು ತರುವ ಕೆಲಸ ಮಾಡುತ್ತಿದೆ. ಮತ್ತೊಂದು ಕಡೆ ದೇಶ ವಿದೇಶಗಳಲ್ಲಿ ಈ ಮಕ್ಕಳ ಹೆಸರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಹಣವನ್ನು ಎತ್ತುತ್ತಿವೆ. ಈ ಹಗರಣದ ವಿಚಾರವನ್ನು ವಿವರಗಳನ್ನು 4 ವರ್ಷಗಳ ಹಿಂದೆಯೇ ಕರ್ನಾಟಕದ ಜನರ ಮುಂದೆ ಇರಿಸಿದ್ದು, ಬಿಸಿಯೂಟ ನೌಕರರ ಸಂಘ, ಹಲವಾರು ಪತ್ರಿಕಾಗೋಷ್ಠಿಗಳಲ್ಲಿ ಇದನ್ನು ಬಯಲಿಗೆ ತಂದಿದೆ. 'ಜನಶಕ್ತಿ' ಪತ್ರಿಕೆಯೇ ಇದನ್ನು ಮೊದಲ ಬಾರಿಗೆ ಈ ಹಗಲು ದರೋಡೆಯ ಬಗ್ಗೆ ವಿವರಗಳನ್ನು ಪ್ರಕಟಿಸಿತ್ತು. ರಾಜ್ಯದ ಹಲವಾರು ಸಾಹಿತಿಗಳು ಶಿಕ್ಷಣ ತಜ್ಞರು ವಿಚಾರವಂತರಿಗೆ ಕೂಡಾ ಈ ಎಲ್ಲಾ ಮಾಹಿತಿ ನೀಡಿ, ಅವರು ಕೂಡಾ ಧ್ವನಿಗೂಡಿಸುವಂತೆ ಬಿಸಿಯೂಟನೌಕರರ ಒಕ್ಕೂಟ ಪ್ರಯತ್ನಿಸಿತ್ತು.

'ಅಕ್ಷಯ ಪಾತ್ರೆ' ಎಂಬ ಹೆಸರಿನಲ್ಲಿ ಶಾಲಾ ಮಕ್ಕಳಿಗೆ ಬಿಸಿಯೂಟ ನೀಡುವ ಯೋಜನೆಯ ಖಾಸಗೀಕರಣದ ವಿರುದ್ಧ ಧರ್ಮಸಿಂಗ್ ಸರ್ಕಾರ, ಕುಮಾರಸ್ವಾಮಿಯವರ ಸರ್ಕಾರ, ಯಡಿಯೂರಪ್ಪ ಸರ್ಕಾರ ಗಳಿಗೂ ಮನವಿ ಸಲ್ಲಿಸಲಾಗಿತ್ತು. ಎರಡು ಮೂರು ಬಾರಿ ರಾಜ್ಯಮಟ್ಟದ ಪ್ರತಿಭಟನಾ ರ್‍ಯಾಲಿ ನಡೆಸಲಾಗಿತ್ತು. ಹೀಗೆ ನಾಲ್ಕಾರು ವರ್ಷಗಳೇ ಆದರೂ ಈ ವಿಷಯ ಕರ್ನಾಟಕ ಸರ್ಕಾರದ ಮುಂದೆ ರಾಜಕೀಯ ನಾಯಕರ ಮುಂದೆ ಇದ್ದರೂ ಈ ಲೂಟಿಯನ್ನು ತಡೆಯಲು ಯಾವುದೇ ಕ್ರಮವನ್ನು ಸರ್ಕಾರ ಕೈಗೊಳ್ಳಲಿಲ್ಲ. ಈ ಲೂಟಿಯನ್ನು ನಡೆಸಲು ಸರ್ಕಾರವೇ ಇಂಬಾಗಿ ಹಲವು ತಾಲ್ಲೂಕುಗಳ ಬಿಸಿಯೂಟ ಯೋಜನೆಯನ್ನು ಇಡಿಯಾಗಿ ಇಸ್ಕಾನ್ ಅಕ್ಷಯ ಪಾತ್ರೆ ಸಂಸ್ಥೆಗೆ ವಹಿಸಿತ್ತು. ಹೊಸ ಕೋಟೆ ತಾಲ್ಲೂಕಿನ ಬಿಸಿಯೂಟದ ನೌಕರರ ಮಹಿಳೆಯರು ಒಂದು ತಿಂಗಳಿಗೂ ಹೆಚ್ಚು ಕಾಲ ತಾಲ್ಲೂಕು ಕಛೇರಿಯ ಮುಂದೆ ನಿರಂತರ ಧರಣಿ ಸತ್ಯಾಗ್ರಹ ನಡೆಸಿದ್ದರು. ತಾಲ್ಲೂಕು ಪಂಚಾಯ್ತಿ ನಮ್ಮ ತಾಲ್ಲೂಕಿನಲ್ಲಿ ಈ ಅಕ್ಷಯಪಾತ್ರೆಯ ಅವಶ್ಯಕತೆ ಇಲ್ಲ ಎಂದು ನಿರ್ಣಯ ಕೂಡಾ ಮಾಡಿತ್ತು. ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಿದ್ದರು. ಅಂದು ಸಚಿವರಾದ ಜನಾರ್ಧನರೆಡ್ಡಿ, ಶ್ರೀರಾಮು ಅವರೂ ಇದ್ದು ಬಿಸಿಯೂಟ ನೌಕರರೂ ಹಾಗೂ ಹೋರಾಟಕ್ಕೆ ಬೆಂಬಲ ನೀಡಲು ಹೋಗಿದ್ದ ಸಿಪಿಐ(ಎಂ) ಜಿಲ್ಲಾ ನಾಯಕರ ಜೊತೆಯಲ್ಲಿ ಸಚಿವರುಗಳು ವಾಗ್ಯುದ್ಧಕ್ಕೂ ಇಳಿದು ಬೆದರಿಕೆಗಳನ್ನು ಕೂಡಾ ಹಾಕಿದ್ದರು. ಹೀಗೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆದಿದ್ದರೂ ಕಿವುಡರಂತೆ ವರ್ತಿಸಿದ ಸರ್ಕಾರಕ್ಕೆ ಇದೀಗ ಒಮ್ಮೆಗ್ರೆ ಕವಿ ನಿಗುರಿಸಿಕೊಂಡು ಇದೇ ಮೊದಲ ಬಾರಿಗೆ ಎಂಬಂತೆ ವಿಧಾನಸಭೆಯಲ್ಲಿ ನೀಡಲಾದ ಈ ಹಳೆಯ ವಿವರಗಳನ್ನು ಕೇಳಿದೆ.



ಒಳ ರಾಜಕೀಯದ ಸುಳಿಗಳು:

ಬಿಸಿಯೂಟ ನೌಕರರಂತಹ ಕೇವಲ 500-600 ರೂ.ಗಳಿಗೆ ದುಡಿಯುವ ಬಡ, ಕೆಳಜಾತಿಗಳ ಸಾವಿರಾರು ಮಹಿಳೆಯರ ಧ್ವನಿಗೆ ಬೆಲೆಯಿಲ್ಲ. ಅವರ ಹೋರಾಟಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಆದರೆ ಅಂತಹುದೇ ಭೂದಂಧೆಗಳಲ್ಲಿ ಮುಳುಗಿ ರಾಜ್ಯದ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರುವ ರಾಜಕಾರಣಿಗಳ ಮಾತಿಗೆ ಮಾತ್ರ ಬೆಲೆಯಿದೆ ಎಂದು ಸರ್ಕಾರ ಈ ಮೂಲಕ ಸಾಬೀತು ಮಾಡಿದೆ. ಅದರ ಜೊತೆಗೆ ಇಸ್ಕಾನ್‌ನಂತಹ ದೇವರ ಹೆಸರಿನಲ್ಲಿ ಜನರನ್ನು ವಂಚಿಸುವ ಮಠ, ಮಾನ್ಯರಿಗೆ ಅತ್ಯಂತ ಪ್ರಿಯವಾದ ಈ ಸರ್ಕಾರ ಇದ್ದಕ್ಕಿದ್ದಂತೆ ಇಸ್ಕಾನ್‌ನ ಮೇಲೆ ತನಿಖೆಗೆ ಮುಂದಾಗಿರುವುದು ಹಲವು ಸಂಶಯಗಳಿಗೂ ಎಡಕೊಡುತ್ತದೆ. ಏಕೆಂದರೆ ಇಸ್ಕಾನ್‌ನ ಹಗರಣಗಳ ವಿವರಣೆಗಳ ಜೊತೆಯಲ್ಲಿ ಅನಂತಕುಮಾರ್‌ರ ಪತ್ನಿ ನಡೆಸುತ್ತಿರುವ ಸರ್ಕಾರೇತರ ಸಂಸ್ಥೆ ಇದೇ ರೀತಿಯ ಬಿಸಿಯೂಟದ ನೌಕರರ ನೌಕರಿಯನ್ನು ಕಬಳಿಸುತ್ತಿರುವ ಸರ್ಕಾರೇತರ ಸಂಸ್ಥೆ ಅದಮ್ಯಚೇತನದ ಬಗ್ಗೆ ಶ್ಲಾಘನೆಯೂ ಬಂದಿದೆ. ಆರೆಸ್ಸೆಸ್‌ಗಳ ಕಟ್ಟಾಳುಗಳೇ ಆದ ಸುರೇಶ್‌ಕುಮಾರ್ ಹಾಗೂ ವಿಶ್ವೇಶ್ವರ ಹೆಗ್ಗಡೆ ಕಾಗೇರಿಯವರು ವಿಧಾನಸಭೆಯಲ್ಲಿ ನಡೆಸಿದ ಈ ಪ್ರಸ್ತಾಪವನ್ನು ಅತ್ಯುತ್ಸಾಹದಿಂದ ಕುಣಿಕುಣಿದು ಸ್ವಾಗತಿಸುತ್ತಿದ್ದಾರೆ. ಈ ಯೋಜನೆಯಲ್ಲಿ ಅನೇಕ ಲಿಂಗಾವಂತ ಮಠಗಳೂ ಭಾಗಿಯಾಗಿವೆ. ಇವೆಲ್ಲಾ ಏನೇನೂ ಪ್ರಶ್ನೆಗಳಿಗೆ ಕಾರಣವಾಗಿವೆ.

ಏನೇ ಇರಲಿ, ಸರ್ಕಾರ ಸದನ ಸಮಿತಿಯನ್ನು ರಚಿಸಿದ್ದು ಸ್ವಾಗತಾರ್ಹ. ಆದರೆ ವಿಧಾನಸಭೆಯಲ್ಲಿ ವ್ಯಕ್ತವಾದಂತೆ ಲೆಕ್ಕಪತ್ರಗಳನ್ನು, ಮಾಹಿತಿ, ಸುಳಿವು, ದಾಖಲೆಗಳನ್ನು ತಿದ್ದಿ ಅಥವಾ ನಾಶ ಮಾಡಲು ಅವಕಾಶವಾಗದಂತೆ ಇಸ್ಕಾನ್ ಮುಖ್ಯಸ್ಥರನ್ನು ಬಂಧಿಸಬೇಕು. ಲೆಕ್ಕಪತ್ರ, ದಾಖಲೆಗಳನ್ನು ವಶಪಡಿಸಿಕೊಳ್ಳಬೇಕು. ಈ ಸಂಸ್ಥೆಗೆ ನೀಡಿರುವ ಸರ್ಕಾರಿ ಭೂಮಿಯನ್ನು ಹಿಂತೆಗೆದುಕೊಂಡು ಬಡವರಿಗೆ ಹಂಚಬೇಕು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳೆರಡೂ ತಮ್ಮ ಅಧೀನದ ಇಲಾಖೆಗಳ ಮೂಲಕ ಸಮಗ್ರ ತನಿಖೆ ನಡೆಸಬೇಕು. ಸದನ ಸಮಿತಿಯ ವರದಿ ಬರುವ ವೇಳೆಗೆ ಮತ್ತೇನೋ ಆಗಿ ಹೋಗುವುದನ್ನು ತಪ್ಪಿಸುವ ಹೊಣೆ ಸರ್ಕಾರದ ಮೇಲಿದೆ.

ಖಾಸಗಿ ಸಂಸ್ಥೆಗಳ ಬಿಸಿಯೂಟವೂ ಜಾತಿ ವ್ಯವಸ್ಥೆಯ ಹೇರಿಕೆಯೂ

ರಾಜ್ಯದಲ್ಲಿ 40,271 ಶಾಲೆಗಳಲ್ಲಿ 69,26,000 ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡಲಾಗುತ್ತಿದೆ. ಆದರೆ ಇದರಲ್ಲಿ 11 ಖಾಸಗಿ ಸಂಸ್ಥೆಗಳು 11 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಆಹಾರವನ್ನು ಒದಗಿಸುತ್ತವೆ ಎಂದು ಪ್ರಾಥಮಿಕ ಶಿಕ್ಷಣ ಸಚಿವರು ವಿಧಾನಸಭೆಯಲ್ಲಿ ತಿಳಿಸಿದ್ದಾರೆ. ಅಂದರೆ ಶೇ.10ಕ್ಕಿಂತ ಹೆಚ್ಚು ಭಾಗ ಖಾಸಗಿ ಸಂಸ್ಥೆಗಳ ಕೈಗೆ ನೀಡಲಾಗಿದೆ. ಇದರಿಂದಾಗಿ 12,000 ಕ್ಕಿಂತ ಹೆಚ್ಚು ಬಿಸಿಯೂಟ ನೌಕರರ ಊಟಕ್ಕೆ ಕುತ್ತು ಬಂದಿದೆ ಎಂದಂತಾಯಿತು. ಲೇಖನದಲ್ಲಿ ವಿವರಿಸಿದಂತೆ ಈಗಾಗಲೇ ರಾಜ್ಯದಾದ್ಯಂತ ಹಾಗೂ ರಾಜ್ಯಮಟ್ಟದಲ್ಲಿ ಹಲವು ಹೋರಾಟಗಳು ನಡೆದಿವೆ. ಬಿಸಿಯೂಟ ನೌಕರರು ಹಳ್ಳಿಯಲ್ಲಿಯೇ ತಯಾರು ಮಾಡಿ ಒದಗಿಸುವ ಬಿಸಿಯೂಟದ ಊಟಕ್ಕೂ ಇಸ್ಕಾನ್‌ನ ಅಕ್ಷಯ ಪಾತ್ರೆ, ಅದಮ್ಯಚೇತನ, ಕೆಲವು ಮಠಗಳು ಇತ್ಯಾದಿ ಖಾಸಗಿ ಸಂಸ್ಥೆಗಳು ಒದಗಿಸುತ್ತಿರುವ ಬಿಸಿಯೂಟಕ್ಕೂ ಹಲವು ವ್ಯತ್ಯಾಸಗಳಿವೆ.

ಬಿಸಿಯೂಟವನ್ನು ತಯಾರಿಸಿ ಒದಗಿಸುವ ಕೆಲಸ ಕೇವಲ ಊಟದ ವಿಷಯ ಮಾತ್ರವಾಗದೆ ಜಾತಿ ವ್ಯವಸ್ಥೆಯನ್ನು ಸಡಿಲಗೊಳಿಸುವ ವಿಷಯವೂ ಆಗಿತ್ತು. ಸಮಾಜದಲ್ಲಿ ಎಲ್ಲಾ ಜಾತಿಗಳ ಜನರೂ ಊಟ ಮಾಡುವ ಸಂದರ್ಭಗಳಲ್ಲಿ ಮೇಲುಜಾತಿಯ ಸಾಮಾನ್ಯವಾಗಿ ಬ್ರಾಹ್ಮಣ ಅಡಿಗೆಭಟ್ಟರನ್ನೇ ಕರೆಸಿ ಅಡಿಗೆ ಮಾಡಿಸುವ ಪದ್ಧತಿ ಇದೆ. ಶಾಲೆಗಳಲ್ಲಿ ಎಲ್ಲಾ ಜಾತಿಯ ಮಕ್ಕಳೂ ಊಟ ಮಾಡುವ ಈ ಕ್ರಮದಲ್ಲಿ ಅಡಿಗೆ ಮಾಡುವವರು ಹಿಂದುಳಿದ ಜಾತಿಗಳವರು ಅದರಲ್ಲಿಯೂ ದಲಿತರು ಒಬ್ಬರಾದರೂ ಇರಬೇಕೆಂದು ಕಡ್ಡಾಯ ಮಾಡುವುದರ ಮೂಲಕ ಜಾತಿಬೇಧದ ಭಾವನೆಯನ್ನು ತೊಡೆಯುವ ಒಂದು ಗಮನಾರ್ಹ ಪ್ರಯತ್ನ ನಡೆದಿತ್ತು. ಇಂತಹ ಸಂದರ್ಭದಲ್ಲಿ ರಾಜ್ಯದ ಹಲವೆಡೆಗಳಲ್ಲಿ ಮೇಲುಜಾತಿಗಳ ವಿದ್ಯಾರ್ಥಿಗಳ ಪೋಷಕರು ಪ್ರತಿಭಟಿಸಿದ್ದು, ಅವರ ಮಕ್ಕಳನ್ನು ಊಟ ಮಾಡದಂತೆ ತಡೆದು ಪ್ರತಿಭಟಿಸಿದ್ದೂ ಸೇರಿದಂತೆ ಹಲವು ಸಂಘರ್ಷಗಳು ನಡೆದಿದ್ದವು.

ಈ ಸಂದರ್ಭದಲ್ಲಿ ಬಿಸಿಯೂಟ ನೌಕರರನ್ನು ತೆಗೆದು ಮೇಲುಜಾತಿಯ ಅಡಿಗೆಯವರಿಂದ ಅಡಿಗೆ ಮಾಡಿಸಿ ಬಡಿಸುವ ಕೆಲಸ ಈ ಸಾಮಾಜಿಕ ಸುಧಾರಣೆಯ ಕೆಲಸಕ್ಕೆ ಕಲ್ಲು ಹಾಕಿದಂತೆ, ಜೊತೆಗೆ ಮೇಲು ಜಾತಿಗಳವರ ಅಡಿಗೆ ಪದ್ಧತಿಯನ್ನೇ ಇಡೀ ಸಮಾಜದ ಮೇಲೆ ಹೇರಿದಂತೆ ಆಗುತ್ತದೆ. ಬೆಳ್ಳುಳ್ಳಿ, ಈರುಳ್ಳಿಯಿಲ್ಲದ ಊಟ ಮೊಟ್ಟೆ ಕೂಡ ವರ್ಜ್ಯ ಎನ್ನುವಂತೆ ಆಗುತ್ತದೆ.

ಇದು ಖಾಸಗಿ ಸಂಸ್ಥೆಗಳಿಗೆ ಬಿಸಿಯೂಟದ ಜವಾಬ್ದಾರಿ ಒದಗಿಸಿದ್ದರಿಂದ ಆಗುವ ಮತ್ತೊಂದು ಅನಾಚಾರ. ಈ ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆಗಳೆಲ್ಲವನ್ನೂ ಈ ಕಾರ್ಯಕ್ರಮದಿಂದ ಹೊರಕ್ಕೆ ಹಾಕಬೇಕು. ಬಿಸಿಯೂಟದ ನೌಕರರಿಂದ ಹಳ್ಳಿಯಲ್ಲಿಯೇ ಬಿಸಿಯೂಟ ಮಾಡಿ ಒದಗಿಸಬೇಕು.

ಜುಲೈ 27, 2009 ಬೆಲೆ ಏರಿಕೆ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆಗೆ ಕರೆ

ಕೇಂದ್ರ, ರಾಜ್ಯ ಸರ್ಕಾರಗಳ ಜನ ವಿರೋಧಿ ಧೋರಣೆಗಳ ಪರಿಣಾಮವಾಗಿ ಅಗತ್ಯ ವಸ್ತುಗಳ ಬೆಲೆಗಳು ತೀವ್ರವಾಗಿ ಏರುತ್ತಲೇ ಇದೆ. ರಾಜ್ಯದ ದೇಶದ ಆರ್ಥಿಕತೆಯ ಮೇಲೆ ಜಾಗತಿಕ ಆರ್ಥಿಕ ಬಿಕ್ಕಟ್ಟು ಗಂಭೀರ ದುಷ್ಪರಿಣಾಮ ಬೀರಿದೆ. ನಿರುದ್ಯೋಗ, ಆದಾಯ ಕುಸಿತ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಜೀವನದ ಅತ್ಯಾವಶ್ಯಕ ಅಗತ್ಯಗಳಾದ ಆರೋಗ್ಯದ ವೆಚ್ಚ, ಶಿಕ್ಷಣದ ವೆಚ್ಚ, ಸಾರಿಗೆ ವೆಚ್ಚ ಎಲ್ಲವೂ ಏರುತ್ತಾ ಜನರ ಬದುಕನ್ನು ದುರ್ಬಲಗೊಳಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ, ಕೇಂದ್ರ -ರಾಜ್ಯ ಸರ್ಕಾರಗಳ ಜನ ವಿರೋಧಿಗಳ ವಿರುದ್ಧ ರಾಜ್ಯ ವ್ಯಾಪಿ ಪ್ರತಿಭಟನೆ ನಡೆಸಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರೆ ನೀಡಿದೆ. ಹೋರಾಟವನ್ನು ದೊಡ್ಡ ರೀತಿಯಲ್ಲಿ ಯಶಸ್ವಿಗೊಳಿಸಬೇಕಾದ ಅಗತ್ಯವಿದೆ.

ನೆರವು ಕೋರಿಕೆ

ರೈತ ಚಳುವಳಿ ನಾಯಕರು, ಸಿಪಿಐ(ಎಂ) ಪಕ್ಷದ ಕೋಲಾರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಹೋಳೂರು ಶಂಕರ್‌ರವರು ಆರೋಗ್ಯಕ್ಕೆ ಸಂಬಂಧಿಸಿದ ಗಂಭೀರ ಸಮಸ್ಯೆಯಿಂದ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಿಕಿತ್ಸೆಗೆ ದೊಡ್ಡ ಮೊತ್ತ ಹಣ ಅಗತ್ಯವಾಗಿದ್ದು, ಸಂಗಾತಿಗಳು ಉದಾರವಾಗಿ ನೆರವು ನೀಡಬೇಕೆಂದು ಈ ಮೂಲಕ ಕೋರಲಾಗಿದೆ.

ವಿಜೆಕೆ ನಾಯರ್
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ತೊಗರಿ ಬೇಳೆ ಸೆಂಚುರಿ ನಾಟೌಟ್

ಮಗ : ಅಪ್ಪ, ವಿವೇಚನೆ ಎಂದರೆ ಏನು?

ಅಪ್ಪ : ವಿಚಾರ ಮಾಡಿ ವಿವೇಕಯುತ ನಿರ್ಧಾರ ಕೈಗೊಳ್ಳುವುದು ಎಂದಿರಬೇಕು.

ಮಗ : ಅಪ್ಪ, ಸ್ವಜನ ಪಕ್ಷಪಾತ ಎಂದರೇನು?

ಅಪ್ಪ : ತಮ್ಮ ಜಾತಿ, ತಮ್ಮ ಪಕ್ಷ, ತಮ್ಮ ಕುಟುಂಬ ಹೀಗೆ ತನ್ನ ಕಡೆಯವರಿಗೆ ಹೆಚ್ಚಿನ ಅನುಕೂಲಗಳನ್ನು ಸೌಲಭ್ಯಗಳನ್ನೂ ಕೊಡುವುದು. ಇತ್ಯಾದಿ.

ಮಗ : ಅಪ್ಪ, ತಮ್ಮ ಪಕ್ಷದವರಿಗೆ, ತನ್ನ ಮಗನಿಗೆ ಬೆಂಗಳೂರಿನಲ್ಲಿ ಬಂಗಲೆ ಸೈಟುಗಳನ್ನು 'ವಿವೇಚನಾ' ಕೋಟದಲ್ಲಿ ಮುಖ್ಯಮಂತ್ರಿಗಳು ಹಂಚಿದ್ದಾರೆ.

ಅಪ್ಪ : ಹೌದು ಮಗು.

ಮಗ : ಅದು ವಿವೇಚನೆಯೋ ಸ್ವಜನ ಪಕ್ಷಪಾತವೋ?

ಅಪ್ಪ : ಸ್ವಜನ ಪಕ್ಷಪಾತ.

ಮಗ : ಹಾಗಾದರೆ ಅದನ್ನು ವಿವೇಚನಾ ಕೋಟ ಎಂದು ಕರೆಯುವ ಬದಲು ಸ್ವಜನ ಪಕ್ಷಪಾತ ಕೋಟ ಎಂದು ಕರೆಯಬಹುದೇ?

ಅಪ್ಪ : ಗೊತ್ತಿಲ್ಲ ಮಗು.

* * *

ಗಂಡ : ಲೇ ಸಂಚುರಿ ಆಗಿ ನಾಟೌಟು ಕಣೇ.

ಹೆಂಡತಿ : ಯಾರ್ರೀ ಸಂಚುರಿ ಬಾರಿಸಿದ್ದು? ಧೋನಿನಾ? ಈಗ ಯಾವ ಮ್ಯಾಚು ನಡೀತಿದೆ?

ಗಂಡ : ಧೋನಿ ಅಲ್ಲ ಕಣೇ, ಸಂಚುರಿ ಬಾರಿಸಿರೋದು ದಾಲು.

ಹೆಂಡತಿ : ಅಂದ್ರೆ?

ಗಂಡ : ಅಂದರೆ ತೊಗರೀ ಬೇಳೆ ರೇಟು ಕೇಜಿಗೆ ನೂರು ರೂಪಾಯಿ ಆಯ್ತು. ಇನ್ನುಳಿದ ಬೇಳೆಗಳೂ ಅರ್ಧ ಸಂಚುರಿ ದಾಟಿ, ಫೋರು, ಸಿಕ್ಸರು ಬಾರಿಸುತ್ತಾ ಸೆಂಚುರಿಯತ್ತ ಹಾರುತ್ತಿವೆ.

ಹೆಂಡತಿ: ಯಾರೋ ಅವರವರ ಬೇಳೆ ಬೇಯಿಸಿಕೊಳ್ತಿದಾರೆ ಕಣ್ರೀ. ನಾವು ಇಲ್ಲಿ ಬೇಳೆ ಇಲ್ಲದ ಸಾರು ಮಾಡುವ ಪರಿಸ್ಥಿತಿ ಬಂದಿದೆ.

ಗಂಡ : ನಮ್ಮಮು.ಮಂ ಗಳು ಯಾವಾಗ್ಲೂ ಹೇಳ್ತಿರ್ತಾರಲ್ಲ 'ಅಭಿವೃದ್ಧಿಯೇ ಮಂತ್ರ' ಅಂದ್ರೆ ಇದೇ ಇರಬೇಕು. ಎಲ್ಲಾ ಬೆಲೆಗಳೂ ಗಗನದತ್ತ ಅಭಿವೃದ್ಧಿಯಾಗ್ತಿವೆ.

* * *

ಮಗಳು : ಅಪ್ಪ ತುಂಬಿದ ಕೆರೆ, ಕಟ್ಟೆ, ನದಿ, ಅಣೆ ಕಟ್ಟೆಗಳಿಗೆ ಮಂತ್ರಿಗಳು ಬಾಗಿನ ಕೊಡುತ್ತಿದ್ದಾರೆ.

ಅಪ್ಪ : ಹೌದು ಮಗಳೇ, ಅವರೇ ದೇವಸ್ಥಾನಗಳಲ್ಲಿ ಪೂಜೆ ಮಾಡಿಸಿ ಮಳೆ ಬರಿಸಿದ್ದಂತೆ.

ಮಗಳು : ಎಷ್ಟೋ ಕಡೆ ಮಳೆನೇ ಆಗಿಲ್ವಲ್ಲ, ಅಲ್ಲೆಲ್ಲ ಸರಿಯಾಗಿ ಪೂಜೆ ಆಗಿಲ್ವಾ?

ಅಪ್ಪ : ಗೊತ್ತಿಲ್ಲ ಮಗಳೇ.

ಮಗಳು : ಮಳೆಯಾಗದೆ ಬರಗಾಲ ಬಂದ ಕಡೆ ಬಾಗಿನದ ಬದಲು ಏನು ಕೊಡುತ್ತಾರೆ?

ಅಪ್ಪ : ಗೊತ್ತಿಲ್ಲ ಮಗಳೇ.

ಮಗಳು : ಸರಿಯಾಗಿ ಪೂಜೆ ಮಾಡದವರ ಮೇಲೆ ಕ್ರಮ ಕೈಗೊಳ್ಳುತ್ತಾರಾ?

ಅಪ್ಪ : ಗೊತ್ತಿಲ್ಲ ಮಗಳೇ?

* * *

ಮಗ : ಪೆಟ್ರೋಲ್ ಡೀಸಲ್ ಬೆಲೆ ಜಾಸ್ತಿಯಾಗಿದೆ.

ಅಪ್ಪ : ಹೌದು ಮಗು.

ಮಗ : ವಿಮಾನಕ್ಕೆ ಉಪಯೋಗಿಸುವ ಪೆಟ್ರೋಲ್ ಬೆಲೆಯನ್ನ ಸರಕಾರ ಕಡಿಮೆ ಮಾಡಿದೆ.

ಅಪ್ಪ: ಹೌದು ಮಗು.

ಕ್ಯಾತೆ

ಶ್ರೀ

ಮಗ: ಜನಸಾಮಾನ್ಯರ ಹಿತದೃಷ್ಟಿಯಿಂದಲೇ ಇರಬೇಕು.

ಅಪ್ಪ: ಅದು ಹೇಗೆ?

ಮಗ: ವಿಮಾನದಲ್ಲಿ ಹಾರಾಡುವವರು ಜನಸಾಮಾನ್ಯರ ಹಣದಲ್ಲಿ ತಾನೆ ಹಾರಾಡುವುದು? ಅದರ ಖರ್ಚು ಕಡಿಮೆಯಾದರೆ ಜನರ ಮೇಲಿನ ಹೊರೆ ಕಡಿಮೆಯಾದ ಹಾಗಲ್ಲವೇನಪ್ಪ?

ಅಪ್ಪ : ಗೊತ್ತಿಲ್ಲ ಮಗು.

* * *

ಮಗ : ಅಪ್ಪ ಅಮೆರಿಕದವರು ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ರವರನ್ನು ತಪಾಸಣೆ ಮಾಡಿ ಅವಮಾನಿಸಿದ್ದಾರೆ.

ಅಪ್ಪ : ಹೌದು ಮಗು.

ಮಗ : ಅಮೆರಿಕದವರು ನಮ್ಮಶಸ್ತ್ರಾಸ್ತ್ರಗಳನ್ನೆಲ್ಲ ತಪಾಸಣೆ ಮಾಡಬಹುದು ಅಂತ ಸರಕಾರವೇ ಒಪ್ಪಂದ ಮಾಡಿಕೊಂಡಿದೆಯಂತೆ.

ಅಪ್ಪ : ಹೌದು ಮಗು

ಮಗ : ಮಾಜಿ ರಾಷ್ಟ್ರಪತಿಯವರನ್ನು ತಪಾಸಣೆ ಮಾಡುವುದು ಅಪಮಾನ. ದೇಶದ ಶಸ್ತ್ರಾಸ್ತ್ರಗಳನ್ನೆಲ್ಲ ತಪಾಸಣೆ ಮಾಡಬಹುದು ಎನ್ನುವ ಒಪ್ಪಂದ ದೇಶಕ್ಕೇ ಅಪಮಾನವಲ್ಲವೇ?

ಅಪ್ಪ : ಹೌದು ಮಗು.

ಮಗ : ಇಂಥ ಒಪ್ಪಂದಕ್ಕೆ ಸಹಿ ಹಾಕಿದ್ದಾರಲ್ಲ ಅವರ ತಲೆಯಲ್ಲಿ ಏನು ತುಂಬಿದೆ?

ಅಪ್ಪ : ಗೊತ್ತಿಲ್ಲ ಮಗು.

ಮಂಡ್ಯ ಕೂಲಿಕಾರರ ಸೆಣಸಾಟ..

ಪುಟ 2 ರಿಂದ

ಜನಶಕ್ತಿ : ಊರಿನ ಶ್ರೀಮಂತರು, ಅನುಕೂಲಸ್ಥರ ಧೋರಣೆ ಈ ಬಗ್ಗೆ ಏನಿದೆ?

ಪುಟ್ಟಮಾದು : ಊರಿನ ಬಲಾಢ್ಯರಿಗೆ ಯೋಜನೆ ಜಾರಿಗೆ ಬರುವುದು ಬೇಕಿಲ್ಲ. ಆದ್ದರಿಂದ ಎಚ್ಚರವಹಿಸಿ ಸಲ್ಲಿಸಿದ್ದಾರೆ.

ಮಂಡ್ಯ ತಾಲ್ಲೂಕು ಸೊನಗಳ್ಳಿ ಪಂಚಾಯ್ತಿಯ ಕಬ್ಬನಹಳ್ಳಿಯಲ್ಲಿ ಕೆಲಸ ಬೇಕೆಂದು ಕೇಳಿ ದಲಿತಕೂಲಿಕಾರರು ಸುಮಾರು 100 ಜನ ಅರ್ಜಿ ಹಾಕಿದ್ದರು. ಊರಿನ ಗೌಡರು 'ನೀವು ಉದ್ಯೋಗಖಾತ್ರಿ ಕೆಲಸಕ್ಕೆ ಹೋದರೆ ನಮ್ಮ ಜಮೀನಿನಲ್ಲಿ ಕೆಲಸ ಮಾಡುವವರು ಯಾರು?' ಅಂತ ಜಬರ್‌ದಸ್ತ್ ಮಾಡಿ ಕೂಲಿಕಾರರನ್ನು ತಡೆದಿದ್ದಾರೆ. ಹಾಗೂ ಕೆಲಸಕ್ಕೆ ಹೋದರೆ ಬಹಿಷ್ಕಾರ ಹಾಕುವುದಾಗಿ ಬೆದರಿಸಿದ್ದಾರೆ. ಊರಿನಲ್ಲಿ ಇಂಥವರನ್ನು ಎದುರು ಹಾಕಿಕೊಂಡು ಬದುಕಲಾಗದು ಅಂತ ದಲಿತರು ಹೆದರಿದ್ದಾರೆ. ಗೌಡರ ಜಮೀನಿನಲ್ಲಿ ಕೆಲಸ ಮಾಡಿದರೆ 40 ರೂಪಾಯಿ ಮಾತ್ರ ಕೊಡುವುದು. ಸಂಘಟನೆ ಹೋರಾಟ ಮುಂದುವರಿಸಲಿದೆ.

ಕಟಕಟೆಗೆ ಬಂದರು

ಮಳವಳ್ಳಿ ತಾಲ್ಲೂಕು ಶೆಟ್ಟಹಳ್ಳಿಯಲ್ಲಿ ಒಂದು... ಎರಡು... ಮೂರು ತಿಂಗಳು ಕೆಲಸ ಮಾಡಿದರೂ ವೇತನ ಕೊಡಲಿಲ್ಲ. ಕೆಲಸ ಮಾಡಿದ 1 ವಾರದಲ್ಲಿ ಕೂಲಿ ಕೊಡಬೇಕು. ಇದು ಕ್ರಮ. ಗರಿಷ್ಠ 15 ದಿನದೊಳಗಾದರೂ ಕೂಲಿ ಕೊಡಲೇಬೇಕು. ಇಲ್ಲವಾದರೆ ಕಾಯ್ದೆ ಪ್ರಕಾರ ಕೂಲಿಯ 10 ಪಟ್ಟು ದಂಡ ಕೊಡಬೇಕು.

ಕೂಲಿ ನೀಡದ ಹಿನ್ನೆಲೆಯಲ್ಲಿ ಮಂಡ್ಯ ಕಾರ್ಮಿಕ ಕಾನೂನು ಅಧಿಕಾರಿಗಳಲ್ಲಿ, ಜಿಲ್ಲಾ ಪಂಚಾಯತ್ ಸಿ.ಇ.ಓ, ತಾಲ್ಲೂಕು ಪಂಚಾಯತ್, ಇ.ಓ. ಗ್ರಾಮ ಪಂಚಾಯತ್ ಕಾರ್ಯದರ್ಶಿ ಎಲ್ಲರ ಮೇಲೆ ಕೂಲಿಕಾರರ ಸಂಘದಿಂದ ಮೊಕದ್ದಮೆ ಹೂಡಿದೆವು. ಇವತ್ತು (ಜುಲೈ 18, 2009) ಕೇಸ್ ಇತ್ತು. ಮೂವರೂ ವಿಚಾರಣೆಗೆ ಬಂದಿದ್ದರು. ಒಂದು ವಾರದಲ್ಲಿ ಬಾಕಿ ವೇತನ ಕೊಡುತ್ತೇವೆ ಎಂದಿದ್ದಾರೆ. ಕೂಲಿಕಾರರು ದುಡಿದರೂ ವೇತನವಿಲ್ಲದೇ ಬಡ್ಡಿಸಾಲ ಮಾಡಿಕೊಂಡು ಒದ್ದಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 10 ಪಟ್ಟು ದಂಡ ಕೊಡಲೇಬೇಕೆಂದು ಸಂಘಟನೆ ಪಟ್ಟು ಹಿಡಿದಿದೆ.

ಸಂಬಂಧಿಸಿದವರಿಗೆ ಈಗ ಎಚ್ಚರಿಕೆ ನೋಟೀಸ್ ನೀಡಿದ್ದಾರೆ. ಅಧಿಕಾರಿಗಳನ್ನು ಸಸ್ಪೆ ಮಾಡುವುದಾಗಿ ನೀಡಿರುವ ಎಚ್ಚರಿಕೆಯಿಂದ ಕಾ ಬಗೆಗೆ ಕೂಲಿ ನೀಡುವ ಬಗೆಗೆ ನಿರ್ಲಕ್ಷ್ಯ ತೋ ಅಧಿಕಾರಿಗಳು ಬೆಚ್ಚಿಬಿದ್ದಿದ್ದಾರೆ. ಇದು ಒಂದು ಒಳ್ಳೆ ಹೋರಾಟದ ಅನುಭವವಾಗಿದೆ.

ಜನಶಕ್ತಿ: ಅಂದರೆ ಹೋರಾಟವಾಧ ಕಡೆ ಮಾ ಯೋಜನೆ ಜಾರಿಯಾಗುತ್ತದೆಯಾ?

ಪುಟ್ಟಮಾದು : ಹೌದು. ಏಕೆಂದರೆ ಉದ್ಯೋ ಖಾತ್ರಿ ಯೋಜನೆಯು ಇಷ್ಟಾದ ಮೇಲೂ ಜಿಲ್ಲೆಯ ಎಲ್ಲ ಕಡೆಯಲ್ಲೂ ಜಾರಿಯಾಗಿಲ್ಲ. ಹೋರಾಟವ ಮುಂದುವರಿಸಬೇಕಾಗಿದೆ. ಜನಸಂಘಟನೆಗ ಎಲ್ಲೆಲ್ಲಿ ಹೋರಾಟ ಮಾಡಿವೆಯೋ ಅಲ್ಲಿ ಮಾ ಜಾರಿಯಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು ಸುಮಾರು ಪಂಚಾಯ್ತಿಗಳಿದ್ದರೆ ಅದರಲ್ಲಿ ಕೇವಲ 30 ಗ್ರಾ ಪಂಚಾಯ್ತುಗಳಲ್ಲಿ ಮಾತ್ರ ಯೋಜ ಜಾರಿಯಾಗುತ್ತಿದೆ. ಸುಮಾರು 25 ಪಂಚಾಯತ್‌ಗಳಲ್ಲಿ ಪ್ರಾಂತ ಕೃಷಿ ಕೂಲಿಕಾ ಸಂಘದ ನೇತೃತ್ವದಲ್ಲಿ ಹೋರಾಟದಿಂದ, 4 ಜನವಾದಿ ಮಹಿಳಾ ಸಂಘಟನೆಯ ಹೋರಾಟದಿ 1 ರಲ್ಲಿ ಪ್ರಾಂತ ರೈತ ಸಂಘದ ಹೋರಾಟದಿ ಯೋಜನೆ ಜಾರಿಗೆ ಬಂದಿದೆ.

ತೋರಿಕೆಯ ಕೆಲಸ, ಸುಳ್ಳು ಲೆಕ್ಕದ ಮೋ

ಬೆಳಕವಾಡಿ ಪಂಚಾಯ್ತಿಯಲ್ಲಿ ಪಂಚಾ ಸದಸ್ಯರು 5 ರಿಂದ 10 ಜನ ಕೂಲಿಯವರ ಕರೆದುಕೊಂಡು ಬಂದು ಒಂದಷ್ಟು ಕೆ ಮಾಡಿಸಿದಂತೆ ಮಾಡಿ ಸುಳ್ಳು ಲೆಕ್ಕ ತೋರಿಸಿ ಜನರ ಕೆಲಸಕ್ಕೆ 50 ಜನರ ಕೆಲಸವೆಂದು ದೊಡ್ಡದ ಬಿಂಬಿಸಿ ದುಡ್ಡು ಹೊಡೆಯುತ್ತಿದ್ದಾರೆ.

ಕೆಲವು ಕಡೆ ನೊಂದಣಿ ಮಾಡಿಸಿಕೊಳ್ಳುವು ಜಾಬ್‌ಕಾರ್ಡ್ ಕೊಡುವುದು ನಡೆದಿದೆ. ಆದರೆ ಕೆ ಕೇಳಿ ಜನರಿಂದ ಅರ್ಜಿ ಬಂದಿಲ್ಲ ಎಂದು ವ ಕೊಟ್ಟು ಯೋಜನೆ ಜಾರಿ ಮಾಡದೆ ವ ಮಾಡಲಾಗುತ್ತಿದೆ. ಕೆಲಸ ನಡೆಯುವ ಪಂಚಾಯ ಕೆಲಸವನ್ನು ಆರಂಭಿಸಿದ ಪಂಚಾಯ್ತಿಯ ಹ ವರ್ಗಾವಣೆ ಮಾಡುವ ಕೆಲಸ ನಡೆದಿದೆ. ಸಂಘ ಎಲ್ಲ ಕಡೆ ಯೋಜನೆಯ ಜಾರಿಗಾಗಿ ಹೋರಾ ಮುಂದುವರಿಸಲಿದೆ.

ಜನಶಕ್ತಿ: ಚಂದಾ-ಪ್ರಸಾರ ಆಂದೋಲನ

2009 ಜುಲೈ ತಿಂಗಳಿನಲ್ಲಿ ರಾಜ್ಯ ವ್ಯಾಪಿಯಾಗಿ ಜನಶಕ್ತಿ ಚಂದಾ-ಪ್ರಸಾರ ಆಂದೋಲನ ನಡೆಸಬೇಕೆ ತೀರ್ಮಾನದಂತೆ ಹಲವು ಕಡೆಗಳಲ್ಲಿ ಚಂದಾ ನೋಂದಣಿ ನಡೆಯುತ್ತಿರುವ ವರದಿಗಳಿವೆ. ಚಂ ಆಂದೋಲನವನ್ನು ಮತ್ತಷ್ಟು ತೀವ್ರಗೊಳಿಸಲು ಹಾಗೂ ಎಲ್ಲೆಡೆಯಲ್ಲೂ ಚಂದಾ ಆಂದೋಲನವನ್ನು ವಿಸ್ತರಿಸ ಮತ್ತು ನೋಂದಾಯಿಸಲಾದ ಚಂದಾದಾರರ ಪೂರ್ಣ ವಿಳಾಸ ಹಾಗೂ ಹಣವನ್ನು ಶೀಘ್ರವಾಗಿ ಜನ ಕಾರ್ಯಾಲಯಕ್ಕೆ ತಲುಪಿಸಲು ಈ ಮೂಲಕ ವಿನಂತಿ.

ವಿಶೇಷ ಸಂಚಿಕೆಗೆ ಜಾಹಿರಾತು ಸಂಗ್ರಹಿಸಿ ಕಳಿಸಿ

ಆಗಸ್ಟ್ 15, 2009ರ 'ಸ್ವಾತಂತ್ರ್ಯ ದಿನಾಚರಣೆ'ಯ ಸಂದರ್ಭಕ್ಕೆ ಜನಶಕ್ತಿಯು ದೇಶದ ಸ್ವಾತ ಚಳುವಳಿ ಹಾಗೂ ನಮ್ಮ ಸ್ವಾತಂತ್ರ್ಯದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಪೂರಕವಾಗಿ ವಿಶೇಷ ಸಂಚಿಕೆ ಹೊರತರುತ್ತಿದೆ. 'ಸ್ವಾತಂತ್ರ್ಯ'ದ ಕುರಿತ ಸಂಗ್ರಹ ಯೋಗ್ಯವಾದ ಲೇಖನಗಳುಳ್ಳ ಈ ವಿಶೇಷ ಸಂಚಿಕೆಯ ಒಂದಷ್ಟು ಪುಟಗಳು ಜಾಹಿರಾತಿಗಾಗಿ ಮೀಸಲಿದೆ.

ಸಂಗಾತಿಗಳು, ಹಿತೈಷಿಗಳು ವಿಶೇಷ ಸಂಚಿಕೆಗೆ ಉತ್ತಮ ರೀತಿಯಲ್ಲಿ ಜಾಹೀರಾತು ಸಂಗ್ರ ಮೂಲಕ 'ದುಡಿಯುವ ಜನರ ಪ್ರಾಣ ಮಿತ್ರ' ಜನಶಕ್ತಿಗೆ ನೆರವಾಗಲೂ ಕೋರುತ್ತೇವೆ.

-ಸಂಪಾದಕ

ದಕ್ಷಿಣ ಕನ್ನಡ

ಮತ್ತೆ ನೈತಿಕ ಪೊಲೀಸ್‌ಗಿರಿ, ಹಲ್ಲೆ, ಕೊಲೆ

ಚುನಾವಣೆಯ ಅಬ್ಬರಗಳು ಮುಗಿದು ಬಿಜೆಪಿಯ ವಿಜಯೋತ್ಸವದ ಅಮಲಿನಲ್ಲಿ ಮುಸ್ಲಿಮರ ಮೇಲೆ ದಾಳಿಗಳು ಡೆದು ಭಯದ ವಾತಾವರಣ ನಿರ್ಮಾಣಗೊಂಡಿದ್ದ ುಂಗಳೂರಿನಲ್ಲಿ ನಿಧಾನಕ್ಕೆ ಶಾಂತಿ ನೆಲೆಗೊಂಡಿತ್ತು. ಷ್ಟು ದಿನ ಈ ಶಾಂತಿ ಎಂಬ ಅನುಮಾನಗಳ ಧ್ಯೆ ಸದ್ಯ ಮತ್ತೆ ಹಿಂಸೆ ಮರುಕಳಿಸದಿರಲಿ ಎಂಬ ಾರೈಕೆ ಜನಸಾಮಾನ್ಯರದಾಗಿತ್ತು. ಆದರೆ ಮನುಷ್ಯನ ಕ್ತದ ರುಚಿ ಕಂಡಿರುವ ಮತೀಯ ರಕ್ಕಸರು ುಮ್ಮನಿರಲು ಸಾಧ್ಯವೇ? ಪಬ್‌ದಾಳಿ, ಶೃತಿ ಕರಣದ ನಂತರ ಕೆಲಕಾಲ ಮೌನವಾಗಿದ್ದ ನೈತಿಕ ಸರು ಮತ್ತೆ ರಭಸದಿಂದ ಮಂಗಳೂರಿನ ೀದಿಗಳಲ್ಲಿ ಜನತೆಗೆ ನೈತಿಕತೆಯ ಪಾಠ ೇಳತೊಡಗಿದ್ದಾರೆ. ಈ ಪಾಠದ ತೀವ್ರತೆಗೆ ುಂಗಳೂರು ನಿಧಾನಕ್ಕೆ ಸಿಯಾಗತೊಡಗಿದೆ. ಜನತೆಯನ್ನು ಮತ್ತೆ ಂಸೆಯ ಭೀತಿ ಆವರಿಸತೊಡಗಿದೆ.

ಮೇಲ್ನೋಟಕ್ಕೆ ನೈತಿಕ ಪೊಲೀಸರ ಾವಳಿ ನಿಂತಂತೆ ಭಾಸವಾಗುತ್ತಿದ್ದರೂ ಿಲ್ಲೆಯ ಮೂಲೆ ಮೂಲೆಗಳಲ್ಲಿ ಸದ್ದಿಲ್ಲದೆ ಂದೂ ಹುಡುಗಿಯರೊಂದಿಗೆ ಾತನಾಡಿದ ಕಾರಣಕ್ಕೆ ಮುಸ್ಲಿಂ ುವಕರಿಗೆ ಥಳಿಸುವುದು ನಿರಂತರವಾಗಿ ಡೆಯುತ್ತಿತ್ತು. ಮಾಧ್ಯಮಗಳು ನಿತ್ಯ ಾಯುವವರಿಗೆ ಅಳುವವರು ಯಾರು ಎಂಬಂತೆ ುದ್ದಿಗಳಿಗೆ ಮಹತ್ವ ಕೊಡದಿದ್ದುದರಿಂದ ಜನರ ಮನ ಸೆಳೆಯುತ್ತಿರಲಿಲ್ಲ. ಇನ್ನೊಂದೆಡೆ ಮುಸ್ಲಿಂ ುವಾದಿ ಸಂಘಟನೆ ಕೆ.ಎಫ್.ಡಿ ಸದ್ದಿಲ್ಲದೆ ುಸ್ಲಿಂ ಹುಡುಗಿಯರ ಜತೆ ಮಾತನಾಡುವ ಹಿಂದೂ ುಡುಗರನ್ನು ಥಳಿಸುವ ಮುಸ್ಲಿಂ ಹುಡುಗ ಹುಡುಗಿ ರಸ್ಪರ ಜೊತೆಯಲ್ಲಿದ್ದರೂ ಹಲ್ಲೆ ನಡೆಸುವ, ಹಿರಂಗವಾಗಿ ಮಾನ ಕಳೆಯುವ ಕೆಲಸವನ್ನು ಶಾಂತಿ ಕಾಲ'ದಲ್ಲಿಯೂ ವ್ಯವಸ್ಥಿತವಾಗಿ ಮಾಡುತ್ತಿತ್ತು. ಈ ರೀತಿ ಬಜರಂಗಿ, ರಾಮಸೇನೆಯ ೊತೆಗೆ ಕೆ.ಎಫ್.ಡಿ ಸ್ಪರ್ಧೆಗೆ ಬಿದ್ದುದರಿಂದ ುಂಗಳೂರಿನಲ್ಲಿ ನೆಲೆಗೊಂಡಿದ್ದ ಶಾಂತಿ ತಾತ್ಕಾಲಿಕ ಂಬ ಆತಂಕ ನಿಜವಾಗತೊಡಗಿದೆ.

ಂದೂ ಮದುವೆಗಳು ಸಮಾರಂಭಕ್ಕೆ ಂದ ಮುಸ್ಲಿಂಗೆ ಹಲ್ಲೆ

ಮೊನ್ನೆ ಮಂಗಳೂರಿನಲ್ಲಿ ಒಂದು ಸರಳ ಮದುವೆ ಡೆಯಿತು. ಸ್ವಜಾತಿಯ ಹಿಂದೂ ಜೋಡಿಯೊಂದು ುಂಗಳೂರಿನ ರಿಜಿಸ್ಟರ್ ಕಛೇರಿಯಲ್ಲಿ ರಿಜಿಸ್ಟರ್ ುದುವೆಯಾದರು. ಹುಡುಗನಿಗೆ ವಿದೇಶಕ್ಕೆ ತುರ್ತಾಗಿ ೇಕಾಗಿದ್ದ ಕಾರಣಕ್ಕೆ ಎರಡೂ ಕಡೆಯವರ ಪ್ಪಿಗೆ ಮೇರೆಗೆ ಸರಳವಾಗಿ ಗಂಡು ಹೆಣ್ಣಿನ ಮನೆಯವರ ಉಪಸ್ಥಿತಿಯಲ್ಲಿ ಮದುವೆ ನಡೆಯಿತು. ಹುಡುಗಿ ಕೆಲಸದಲ್ಲಿದ್ದ ಕಂಪನಿಯ ಮುಖ್ಯಸ್ಥ ಮುಸ್ಲಿಂ ದರ್ಮಕ್ಕೆ ಸೇರಿದ ಉದ್ಯಮಿಯು ಮದುವೆಗೆ ಹಾಜರಾಗಿದ್ದ. ಮದುವೆಯ ನಂತರ ಜಿಲ್ಲಾಧಿಕಾರಿ ಕಛೇರಿಯ ಮುಂಭಾಗದ ಹೊಟೇಲೊಂದರಲ್ಲಿ ಎಲ್ಲರೂ ಲಘು ಉಪಹಾರಕ್ಕಾಗಿ ಸೇರಿದ್ದರು. ಅದೇ ಸಂದರ್ಭದಲ್ಲಿ ಮುತಾಲಿಕನ ಶನಿ ಸಂತಾನ ರಾಮಸೇನೆಯ ಕಮ್ಯೂನಲ್ ಗೂಂಡಾಗಳು ಮೈಸೂರು ಗಲಭೆಗೆ ಸಂಬಂಧಿಸಿ ಮುತಾಲಿಕನ ವಿರುದ್ಧ ಸಿದ್ದರಾಮಯ್ಯನವರ ಹೇಳಿಕೆಯನ್ನು ವಿರೋಧಿಸಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸುತ್ತಿದ್ದರು. ಇದರ ಅರಿವಿಲ್ಲದ ಮದುವೆ ತಂಡ ಸಂತೋಷದಲ್ಲಿ ಮುಳುಗಿದ್ದರೆ ಇದನ್ನು ಕಂಡ ಬಜರಂಗಿ ಪತ್ರಕರ್ತನೊಬ್ಬ ರಾಮಸೇನೆಯ ಕಪಿಗಳಿಗೆ ಮುಸ್ಲಿಂ ಯುವಕನೊಬ್ಬ ಹಿಂದೂಗಳೊಂದಿಗೆ ಸೇರಿ ಹೊಟೇಲಿನಲ್ಲಿ ಉಪಹಾರ ಸೇವಿಸುತ್ತಿರುವುದರ ಬಗ್ಗೆ ಉಪ್ಪುಖಾರ ಹಚ್ಚಿ ವರದಿ ಕೊಟ್ಟಿದ್ದಾನೆ. ತಕ್ಷಣವೇ ಹೆಂಡ ಕುಡಿದ ಕಪಿಗಳಂತಾದ ರಾಮಸೇನೆಯ ಕಾರ್ಯಕರ್ತರು ತಮ್ಮ ಪ್ರತಿಭಟನೆಯನ್ನು ಬಿಟ್ಟು ಹೊಟೇಲಿಗೆ ನುಗ್ಗಿದ್ದಾರೆ. ಮುಸ್ಲಿಂ ಉದ್ಯಮಿಯ ಹೆಸರು ಕೇಳಿ ಮುಸ್ಲಿಂ ಎಂದು ಖಚಿತಪಡಿಸಿಕೊಂಡು ಬಹಿರಂಗ ಹಲ್ಲೆ ನಡೆಸಿದ್ದಾರೆ. ತಡೆಯಲು ಬಂದ ಮದುಮಗಳು ಮತ್ತವರ ಮದುವೆ ತಂಡವನ್ನು ಮುಸ್ಲಿಂನೊಬ್ಬನನ್ನು ಮದುವೆಗೆ ಕರೆದುದ್ದಕ್ಕೆ ತರಾಟೆಗೆ ತೆಗೆದುಕೊಂಡಿದ್ದಾರೆ. ಮದುವೆ ತಂಡದ ಮಹಿಳೆಯರು ರಾಮಸೇನೆಯ ಗೂಂಡಾಗಳೊಂದಿಗೆ ವಾಗ್ವಾದಕ್ಕಿಳಿದಿದ್ದಾರೆ. ಇದೆಲ್ಲನ್ನೂ ಮೂಕವಾಗಿ ನೋಡುತ್ತಿದ್ದ ಸ್ಥಳದಲ್ಲಿದ್ದ ಪೊಲೀಸರು ಕೊನೆಗೆ ಮುಸ್ಲಿಂ ಯುವಕರ ಸಮೇತ ಮದುವೆ ತಂಡ ಹಾಗೂ ರಾಮಸೇನೆಯವರನ್ನು ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ. ಅಲ್ಲಿ ಮುಸ್ಲಿಂ ಉದ್ಯಮಿಗೆ ಮಾನಮರ್ಯಾದೆ ಬಗ್ಗೆ ಹಾಗೂ ರಾಮಸೇನೆಯವರನ್ನು ಎದುರು ಹಾಕಿಕೊಂಡರೆ

ಸಂಜಯ



ವ್ಯವಹಾರಕ್ಕೆ ತೊಂದರೆಯಾಗುವ ಸಾಧ್ಯತೆ ಬಗ್ಗೆ ಪಾಠ ಹೇಳಿ ಪ್ರಕರಣವನ್ನು ರಾಜಿಯಲ್ಲಿ ಮುಗಿಸಿದ್ದಾರೆ. ರಾಮಸೇನೆಯ ಗೂಂಡಾಗಳು ರಾಜ ಮರ್ಯಾದೆಯಿಂದ ಠಾಣೆಯಿಂದ ಮರಳಿದ್ದಾರೆ.

ಶೇಖರ್ ರಾಥೋಡ್ ಕೊಲೆ

ಇದೇ ಜೂನ್ ತಿಂಗಳಿನಲ್ಲಿ ಕೇಂದ್ರ ಎನ್.ಎಸ್.ಜಿ. ಕಮಾಂಡೊ ಪಡೆಗೆ ಸೇರಿದ ಬಾಗಲಕೋಟೆಯವರಾದ ಶೇಖರ್ ರಾಥೋಡ್ ಎಂಬವರು ಮೂಡಬಿದ್ರೆಯ ಆಳ್ವಾಸ್ ಕಾಲೇಜಿನಲ್ಲಿ ಓದುತ್ತಿರುವ ತನ್ನ ಅಕ್ಕನ ಮಗಳನ್ನು ನೋಡಲು ಮೂಡಬಿದ್ರೆಗೆ ಬರುತ್ತಾರೆ. ಬಂದವರು ಆಳ್ವಾಸ್ ಕಾಲೇಜಿನಿಂದ ಒಂದು ಕಿ.ಮೀ ಹಿಂದೆ ಅಪರಿಚಿತ ವಾಹನ ಡಿಕ್ಕಿಯಾಗಿ ಸಾವಿಗೀಡಾಗುತ್ತಾರೆ. ಇದು ಕಾಲೇಜಿನ ಸ್ಥಳ ಪರಿಚಯವಿಲ್ಲದೆ ತಪ್ಪು ಸ್ಥಳದಲ್ಲಿ ಇಳಿದು ನಡೆದುಕೊಂಡು ಕಾಲೇಜಿನ ಬಳಿ ಬರುವಾಗ ನಡೆದ ಆಕಸ್ಮಿಕ ಅಪಘಾತ ಎಂದು ಕೇಸು ದಾಖಲಾಗುತ್ತದೆ. ಆದರೆ ಮರುದಿವಸದಿಂದಲೇ ಪ್ರಕರಣ ತಿರುವು ಪಡೆಯತೊಡಗುತ್ತದೆ. ವೇಗದೂತ ಬಸ್‌ಗಳ ನಿಲುಗಡೆಯಿಲ್ಲದ ಹಂಡೇಲು ಎಂಬಲ್ಲಿ ಬಸ್‌ನಿಂದ ಇಳಿಯಲು ಹೇಗೆ ಸಾಧ್ಯ? ಎಂಬಲ್ಲಿಂದ ಶುರುವಾಗುವ ಅನುಮಾನಗಳು ಪ್ರಕರಣ ಕೊಲೆ ಎಂಬ ಶಂಕೆಯನ್ನು ಮೂಡಿಸಿ ನೈತಿಕ ಪೊಲೀಸರೆಡೆಗೆ ಚಲಿಸುತ್ತದೆ. ಒಂದೆರಡು ಮಾಧ್ಯಮಗಳ ಕಾಳಜಿಯಿಂದ ಪತ್ರಿಕೆಗಳಲ್ಲಿ ಸುದ್ದಿಯಾದ ನಂತರ ಪೊಲೀಸರು ಪ್ರಕರಣದ ಬೆನ್ನು ಹತ್ತಿದ್ದಾಗ ನೈತಿಕ ಪೊಲೀಸ್‌ಗಿರಿಯ ಇನ್ನೊಂದು ಆತಂಕಕಾರಿ ಮುಖ ತೆರೆದುಕೊಳ್ಳುತ್ತದೆ.



ಮುಸ್ಲಿಂ ನೈತಿಕ ಪೊಲೀಸರು?!

ಎನ್.ಎಸ್.ಜಿ. ಕಮಾಂಡೊ ರಾಥೋಡ್‌ರವರು ಆಳ್ವಾಸ್ ಕಾಲೇಜಿಗೆ ಆಗಮಿಸಿ ತನ್ನ ಅಕ್ಕನ ಮಗಳು ಕಲ್ಪನಾಳನ್ನು ಮಾತನಾಡಿಸಿದ್ದಾರೆ. ಅಲ್ಲಿ ಕಲ್ಪನಾಳ ಸ್ನೇಹಿತೆ ಮುಸ್ಲಿಂ ಹುಡುಗಿಯ ಪರಿಚಯವಾಗುತ್ತದೆ. ಕಾಲೇಜ್ ಆವರಣದಿಂದ ಮೂಡಬಿದ್ರೆ ಬಸ್ ನಿಲ್ದಾಣಕ್ಕೆ ಕಲ್ಪನಾಳ ಸ್ನೇಹಿತೆಯೊಂದಿಗೆ ಆಗಮಿಸಿದ ಇವರು ಮಧ್ಯಾಹ್ನವಾದ ಕಾರಣ ಜೊತೆಯಾಗಿ ಹೊಟೇಲೊಂದಕ್ಕೆ ಊಟಕ್ಕೆ ತೆರಳುತ್ತಾರೆ. ಬುರ್ಖಾ ಧರಿಸಿದ ಹುಡುಗಿಯೊಂದಿಗೆ ಹಿಂದೂ ತರಹ ಕಾಣಿಸುವ ಅಪರಿಚಿತನೊಬ್ಬ ಮೂಡಬಿದ್ರೆಯಂತಹ ಸಣ್ಣ ಪಟ್ಟಣದ ಹೊಟೇಲೊಂದರಲ್ಲಿ ಜೊತೆಯಾಗಿ ಊಟ ಮಾಡುತ್ತಿರುವುದು ಮತಾಂಧ ಮುಸ್ಲಿಂ ನೈತಿಕ ಪೊಲೀಸರ ಕಣ್ಣಿಗೆ ಬೀಳುತ್ತದೆ. ಅಲ್ಲಿಂದಲೇ ಕಾರ್ಯಾಚರಣೆ ಶುರು ಮಾಡುವ ಈ ನೈತಿಕ ಪೊಲೀಸರು ಎನ್.ಎಸ್.ಜಿ. ಕಮಾಂಡೊ ಹಿಂದೂ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಹೊಟೇಲಿಗೆ ನುಗ್ಗಿ ಈ "ಜೋಡಿ"ಯನ್ನು ಬಲವಂತವಾಗಿ ತಮ್ಮ ರಿಕ್ಷಾದಲ್ಲಿ ಕುಳ್ಳಿರಿಸಿ ಹಂಡೇಲು ಎಂಬಲ್ಲಿಗೆ

ಪುಟ 12ಕ್ಕೆ

ಕಳ್ಳತನ ಮತ್ತು ದರೋಡೆ

ತೋಟ ತಡಿಕೆ ಮಾಡುವ ಶೂದ್ರರು ತಾವು ಶ್ರಮವಹಿಸಿ, ಗೊಬ್ಬರ, ನೀರು ಕೊಟ್ಟು ಬೆಳೆಸಿದ ಗಿಡದಲ್ಲಿ ಬಿಡುವ ಕಾಯಿಪಲ್ಲೆ ಇತ್ಯಾದಿಗಳಲ್ಲಿ ಮೊದಲ ಫಲಸನ್ನು ಬ್ರಾಹ್ಮಣರಿಗೆ ದಾನವಾಗಿ ಕೊಡಬೇಕೆಂಬ ನಂಬಿಕೆ, ಸಂಪ್ರದಾಯ ಇರುವುದು ಬಹಳ ಜನಕ್ಕೆ ಗೊತ್ತಿರುವ ವಿಚಾರವೇ?

ಈಗ ಈ ವಿಷಯ ಯಾಕೆ ಅಂದರೆ ಉತ್ತರ ಪ್ರದೇಶದ ಲಕ್ನೋದಲ್ಲಿ ಜುಲೈ 18, 2009 ರಂದು ಶ್ರೀಕೃಷ್ಣ ಬಹೇಲಿಯಾ ಎಂಬ ದಲಿತನನ್ನು ತಮ್ಮ ತೋಟದಲ್ಲಿ ತರಕಾರಿ ಕದ್ದ ಎಂಬ ಕಾರಣಕ್ಕೆ ಹೊಡೆದು ಕೊಂದೇಬಿಟ್ಟಿದ್ದಾರೆ ಸವರ್ಣೀಯರು. 3 ದಿನವಾದರೂ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆಯೂ ದಾಖಲಾಗಿರಲಿಲ್ಲ. ಈಗ ಸೀತಾರಾಮ, ಸುಭಾಶ್ಚಂದ್ರ ಬಂಧನಕ್ಕೊಳಗಾಗಿದ್ದಾರೆ. 3 ಪೊಲೀಸರು ಅಮಾನತ್ತಾಗಿದ್ದಾರೆ.

ಸರಳವಾಗಿ ಯೋಚಿಸಿದರೆ ತರಕಾರಿ ಕದಿಯುವುದೇನೋ ತಪ್ಪೇ. ಆದರೆ ಗುಡಿ ಕಟ್ಟಿದ ಮೇಲೆ ಕಟ್ಟಿದವರನ್ನೇ ಹೊರದಬ್ಬುವಂತೆ ದಲಿತ ಕೂಲಿಕಾರರ ಶ್ರಮದಿಂದ ಬೆಳೆದ ತೋಟದಲ್ಲಿ ಬೆಳೆದ ತರಕಾರಿ ಹಣ್ಣು ಎಷ್ಟೋ ಸಾರಿ ದಲಿತರಿಗೆ ಸಿಗದೇ ಹೋಗುವ ಸಂಭವ ಇರುತ್ತದೆ. ದಲಿತರಿಗೆ ಶಿಕ್ಷಣ, ಸಾಮಾಜಿಕ ಸ್ಥಾನಮಾನ, ಆಸ್ತಿಯ ಒಡೆತನದ ಹಕ್ಕು ಎಲ್ಲವನ್ನೂ ನಿರಾಕರಿಸಿದ ಶಾಸ್ತ್ರಗಳು, ಬ್ರಾಹ್ಮಣರಿಗೆ ಗೋದಾನ, ಭೂದಾನ, ವಸ್ತ್ರದಾನ, ದವಸ-ಧಾನ್ಯ ದಾನ ಎಲ್ಲವನ್ನೂ ಪ್ರತಿಪಾದಿಸುವೆಯಲ್ಲಾ, ಈ ಚಮತ್ಕಾರದ ಹಿಂದೆ ಯಾರಿದ್ದಾರೆ. ಇದನ್ನೆಲ್ಲಾ ಗಮನಿಸಿ ಯೋಚಿಸಿದರೆ ಇಲ್ಲಿ ದಲಿತ ಮಾಡಿದ್ದು ಕಳ್ಳತನವಾದರೆ, ಶಾಸ್ತ್ರಗಳು ಸೂಚಿಸಿ ಸಮರ್ಥಿಸುವುದು ನಯವಂಚಕ ದರೋಡೆಯನ್ನಲ್ಲವೇ?

ತರಕಾರಿ ಕದ್ದಿದ್ದು ಪ್ರಾಣ ತೆಗೆಯುವಂತಹ ಅಪರಾಧವೇ? ಹೌದು. ಅನ್ನುತ್ತದೆ ಜಾತಿವಾದಿ, ಪಾಳೇಗಾರಿ ಮೌಲ್ಯಗಳು ತುಂಬಿದ ಮನಸ್ಸು, ಪ್ರಾಣ ದಲಿತನದ್ದಾದರೆ.

ಅತಿವೃಷ್ಟಿ - ಅನಾಹುತಗಳ ನಡುವೆ 'ಪಾವತಿ' ಶೌಚಾಲಯ ಉದ್ಘಾಟಿಸಿದ ಗೃಹಮಂತ್ರಿ




ಕಡಲತಡಿ

ಅದಮೂರು ಶ್ರೀಪತಿ ಆಚಾರ್ಯ
ಉಡುಪಿ

ಜುಲೈ 1 ರಿಂದ 20 ರವರೆಗೆ ಉಡುಪಿ ಜಿಲ್ಲೆಯಲ್ಲಿ ಸುರಿದ ಕುಂಭದ್ರೋಣ ಮಳೆಯಿಂದಾಗಿ ಜಿಲ್ಲೆಯಾದ್ಯಂತ ಪ್ರವಾಹವುಂಟಾಗಿ ನೂರಾರು ಜನ ಮನೆಮಾರು ಕಳೆದುಕೊಂಡಿದ್ದಾರೆ. ಸಿಡಿಲಿನ ಆಘಾತಕ್ಕೆ ತುತ್ತಾಗಿ ಇಲ್ಲವೇ ಪ್ರವಾಹದ ಸೆಳೆತಕ್ಕೆ ಸಿಕ್ಕು ಹತ್ತಾರು ಮಂದಿ ಜೀವ ತೆತ್ತಿದ್ದಾರೆ. ಕರಾವಳಿಯುದ್ದಕ್ಕೂ ಸುಮಾರು 1554 ಮೀಟರ್‌ನಷ್ಟು ಕಡಲ ಕೊರೆತ ಸಂಭವಿಸಿ ಅನೇಕ ಮನೆಗಳು ಅಪಾಯದ ಅಂಚಿನಲ್ಲಿವೆ. ನೂರಾರು ಜನ ಆಸ್ತಿಪಾಸ್ತಿ ನಷ್ಟ ಅನುಭವಿಸಿದ್ದಾರೆ ಮತ್ತು ಸಾವಿರಾರು ತೆಂಗಿನ ಮರಗಳು ಸಮುದ್ರದ ಪಾಲಾಗಿವೆ. ಭೀಕರ ಬಿರುಗಾಳಿ, ಪ್ರವಾಹ ಮತ್ತಿತರ ಪ್ರಾಕೃತಿಕ ವಿಕೋಪಗಳಿಂದಾಗಿ ಸಂಭವಿಸಿರುವ ಜೀವಹಾನಿ ಮತ್ತು ಸ್ವತ್ತಿನ ಹಾನಿಯ ಪೂರ್ಣ ಚಿತ್ರಣ ಇನ್ನೂ ದೊರಕಬೇಕಾಗಿದೆಯಷ್ಟೆ.

ಸರಣಿ ಸಾವುಗಳು

ಕಾರ್ಕಳ ತಾಲೂಕಿನ 'ಕೇರ' ಎಂಬಲ್ಲಿನ ನಿವಾಸಿ ಜಾನ್ ಮಸ್ಕರೇಂಞ ಎಂಬವರು ಹುಕ್ರಟ್ಟೆ ಪೇಟೆಗೆ ಹೋಗಿಬರುವಾಗ ಕಾಲುಸೇತುವೆಯ ಮೇಲೆ ಆಕಸ್ಮಿಕವಾಗಿ ಆಯತಪ್ಪಿಬಿದ್ದು ಹೊಳೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮಲ್ಪೆ ಠಾಣೆಯ ವ್ಯಾಪ್ತಿಯಲ್ಲಿ ಬಿ. ನಟರಾಜರಾವ್ ಎಂಬವರು ನಡೆದುಬರುವಾಗ



ಕಾಲುಜಾರಿ ಪ್ರವಾಹಕ್ಕೆ ಸಿಲುಕಿ ಮೃತಪಟ್ಟರೆಂದು ಮಲ್ಪೆ ಠಾಣೆಯಲ್ಲಿ ದೂರು ದಾಖಲಾಗಿದೆ. ಕಾರ್ಕಳ ತಾಲೂಕಿನ ಹೆಬ್ರಿ ಠಾಣೆಯಲ್ಲಿ ವರದಿಯಾಗಿರುವಂತೆ ಶಾಲಾ ಶಿಕ್ಷಕ ಬೆಳ್ಳನಾಯ್ಕ ಎಂಬವರು ಹೊಳೆ ನೀರಿಗೆ ಬಿದ್ದು ಕೊಚ್ಚಿಹೋಗಿರಬಹುದೆಂದು ಶಂಕಿಸಲಾಗಿದೆ. ಬಿರುಗಾಳಿಯ ರಭಸಕ್ಕೆ ರಸ್ತೆಯ ಪಕ್ಕದ ಮರಗಳು ಉರುಳಿಬಿದ್ದು ಕೆಲ ದಿನಗಳ ಕಾಲ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿರುವುದೂ ಇದೆ. ಶಾಲೆಗಳ ಸುತ್ತ ಪ್ರವಾಹದ ನೀರು ತುಂಬಿಕೊಂಡು ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಮಕ್ಕಳನ್ನು ಶಾಲೆಗೆ ತಲುಪಿಸಲು ಯಾಂತ್ರೀಕೃತ ದೋಣಿಗಳ ನೆರವು ನೀಡಬೇಕೆಂದೂ ಪಾಲಕರು ಕೇಳಲಾರಂಭಿಸಿದ್ದಾರೆ. ಉಡುಪಿ ತಾಲೂಕಿನ ತೆಂಕ ಎರ್ಮಾಳು, ಉಚ್ಚಿಲ, ಮೂಳೂರು, ಕಾಪು, ಉಳಿಯಾರಗೋಳಿ, ವಿದ್ಯಾವರ, ಪಡುಕರೆ ಮತ್ತು ಕೈಪುಂಜಾಲುಗಳಲ್ಲಿ ತೀವ್ರ ಸ್ವರೂಪದ ಕಡಲಕೊರೆತ ಸಂಭವಿಸಿದ್ದು ಕಡಲತೀರದ ಜನ ಜೀವ ಕೈಯ್ಯಲ್ಲಿ ಹಿಡಿದುಕೊಂಡೇ ಬದುಕಬೇಕಾಗಿದೆ. "ಇನ್ನು ಹತ್ತೇ ದಿನಗಳಲ್ಲಿ ಕಡಲ ಕೊರೆತ ತಡೆಯಲು ತಾತ್ಕಾಲಿಕ ತಡೆಗೋಡೆಯನ್ನು ನಿರ್ಮಿಸಲಾಗುವುದು'' ಎಂದು ಸಂಸದ ಡಿ.ವಿ.ಸದಾನಂದಗೌಡ ಆಶ್ವಾಸನೆಯನ್ನೇನೋ ಕೊಟ್ಟಿದ್ದಾರೆ. ಆದರೆ ಈ ಆಶ್ವಾಸನೆ ಈಡೇರುವ ಬಗೆ ಹೇಗೆ ಎಂಬುದು ಯಾರಿಗೂ ತಿಳಿದಿಲ್ಲ. ತಾತ್ಕಾಲಿಕ ತಡೆಗೋಡೆಯ ಹೆಸರಲ್ಲಿ ಪ್ರತಿವರ್ಷ ನೂರಾರು ಲೋಡು ಶಿಲೆಕಲ್ಲು ಸಮುದ್ರದ ಒಡಲು ಸೇರುತ್ತದೆ. ಇದು ಮುಗಿಯದ ಕತೆ!

ಜುಲೈ ತಿಂಗಳ ಮೊದಲ ಎರಡು ವಾರಗಳಲ್ಲೇ ಸುರಿದ ಜಡಿಮಳೆ ಮತ್ತು ಸುಂಟರಗಾಳಿಯಿಂದ ಉಂಟಾದ ಹಾನಿಯ ಕೆಲವೇ ವಿವರಗಳು ಹೀಗಿವೆ.

ಮುನ್ನೂರು ವಿದ್ಯುತ್ ಕಂಬ ನೆಲಕ್ಕೆ

10.07.2009 ರಂದು ಸುರಿದ ಮಳೆಯಿಂದಾಗಿ ಉಡುಪಿ ಜಿಲ್ಲೆಯಲ್ಲಿ 13 ಮನೆಗಳಿಗೆ ವ್ಯಾಪಕ ಹಾನಿಯುಂಟಾಗಿ 300 ವಿದ್ಯುತ್ ಕಂಬಗಳು ಧರಾಶಾಯಿಯಾಗಿವೆ. 49 ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟುಹೋಗಿ ಮೆಸ್ಕಾಂಗೆ ಒಂದೇ ದಿನದಲ್ಲಿ ರೂ.59.9 ಲಕ್ಷ ನಷ್ಟವುಂಟಾಗಿದೆ. ಕುಂದಾಪುರದಲ್ಲಿ 25 ಎಕ್ರೆ ಭತ್ತದ ಬೆಳೆ ನೆರೆನೀರಿನ ಪಾಲಾಗಿದೆ. ಕುಂದಾಪುರ ತಾಲೂಕಿನ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯ ಮೂರು ಕೊಠಡಿಗಳು ಮಳೆಯಲ್ಲಿ ಕುಸಿದುಬಿದ್ದಿವೆ. ಕಾರ್ಕಳ ತಾಲೂಕಿನ 'ಕೊಂಕಣರ ಬೆಟ್ಟು' ಎಂಬಲ್ಲಿ ಒಂದು ಮನೆ, ಉಡುಪಿ ತಾಲ್ಲೂಕಿನ ಬಡಾನಿಡಿಯೂರು, ಕುಂದಾಪುರ ತಾಲ್ಲೂಕಿನ ಶಿರೂರಿನಲ್ಲಿ ಒಟ್ಟು ಮೂರು ಮನೆಗಳು ಭಾಗಶ: ಕುಸಿದಿವೆ. 16.7.2009 ರಂದು ಸುರಿದ ಮಳೆಗೆ ಉಡುಪಿ ಜಿಲ್ಲೆಯಲ್ಲಿ ಒಟ್ಟು 49 ಮನೆಗಳಿಗೆ ಹಾನಿಯುಂಟಾಗಿದ್ದು ಸಾವಿರಾರು ರೂಪಾಯಿ ಬೆಲೆಬಾಳುವ ಅಡಿಕೆ ಮರ ಮತ್ತು ಬಾಳೆಗಿಡಗಳು ನಾಶವಾಗಿದೆ. ಅದರ ಹಿಂದಿನ ದಿನವಷ್ಟೇ 69 ಮನೆಗಳಿಗೆ ಹಾನಿಯಾಗಿದ್ದು ಅಡಿಕೆ, ಬಾಳೆಗಿಡಗಳ ನಾಶದೊಂದಿಗೆ ಸುಮಾರು ರೂ.8.53 ಲಕ್ಷದಷ್ಟು



ನಷ್ಟವುಂಟಾಗಿತ್ತು. ಜುಲೈ ತಿಂಗಳೊಂದರಲ್ಲೇ ಸಂಭವಿಸಿದ ಈ ಪ್ರಾಕೃತಿಕ ವಿಕೋಪಕ್ಕೆ ಬಲಿಯಾದ ಸ್ವತ್ತಿನ ನಾಶದಿಂದಾಗಿ ಒಟ್ಟು ರೂ.32 ಕೋಟಿಯಷ್ಟು ವಿವಿಧ ಇಲಾಖೆಗಳಿಗೆ ನಷ್ಟವುಂಟಾಗಿದೆಯೆಂದು ಅಂದಾಜಿಸಲಾಗಿದೆ. ಉದ್ಯಾವರ ಪಡುಕರೆಯಲ್ಲಿ, ಗ್ರಾಮಾಂತರ ಸಡಕ್ ಯೋಜನೆಯಡಿ ತೀರಾ ಇತ್ತೀಚೆಗೆ ನಿರ್ಮಾಣವಾಗಿದ್ದ ಕಾಂಕ್ರೀಟ್ ರಸ್ತೆ ಕಡಲಕೊರೆತದಿಂದಾಗಿ ಕಡಿದುಹೋಗಿ ಸಂಪರ್ಕವು ಸ್ಥಗಿತಗೊಂಡಿದೆ.

ಪೇಯಿಂಗ್ ಶೌಚಾಲಯ ಉದ್ಘಾಟನೆಗೂ ಗೃಹಸಚಿವರೇ?

ಕರಾವಳಿಯ ಉಡುಪಿ ಮತ್ತು ಮಂಗಳೂರು ಈ ಎರಡೂ ಜಿಲ್ಲೆಗಳಲ್ಲೂ ಪ್ರಾಕೃತಿಕ ವಿಕೋಪಗಳು ತಾಂಡವವಾಡುತ್ತಿದ್ದಾಗ ಈ ಜಿಲ್ಲೆಗಳ ಉಸ್ತುವಾರಿ ಸಚಿವರುಗಳು ಮತ್ತು ಶಾಸಕರುಗಳು ಕೇವಲ ಅಧಿಕಾರಿಗಳನ್ನು ಕರೆಸಿ ವರದಿ ಪಡೆಯುವುದಷ್ಟೇ ತಮ್ಮ ಕೆಲಸವೆಂದು ಭಾವಿಸಿದಂತಿದೆ. ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಈ ಸಂಕಟ ಕಾಲಕ್ಕೆ ಸರಿಯಾಗಿ ವಿದೇಶಕ್ಕೆ ತರಬೇತಿಗಾಗಿ ಕಳುಹಿಸಲಾಗಿದ್ದು ಕೇವಲ ಪ್ರಭಾರ ಅಧಿಕಾರಿಗಳು ಮಾತ್ರ ಸಮಸ್ತ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತು. ಇಂತಹ ಸನ್ನಿವೇಶದಲ್ಲಿ ಹೆಚ್ಚು ಹೊಣೆಗಾರಿಕೆಯಿಂದ ವರ್ತಿಸಬೇಕಾಗಿದ್ದ ಗೃಹಸಚಿವರು, ಉಸ್ತುವಾರಿ ಸಚಿವರು ಮತ್ತು ಶಾಸಕರು ಉದ್ಘಾಟನೆ, ಟೇಪು ಕತ್ತರಿಸುವುದು ಭೂಮಿಪೂಜೆ ಮುಂತಾದ ಕೆಲಸಗಳಲ್ಲೇ 'ಬಿಸಿ'ಯಾಗಿದ್ದುದು ಶೋಚನೀಯ. ಸನ್ಮಾನ್ಯ ಗೃಹಸಚಿವರಾದ ಡಾ.ವೇದವ್ಯಾಸ ಶ್ರೀನಿವಾಸ ಆಚಾರ್ಯರಂತೂ 11.7.2009 ರಂದು ಇಡೀ ಜಿಲ್ಲೆಯಲ್ಲಿ ಬಿರುಗಾಳಿ, ಮಳೆ ತಾಂಡವವಾಡುತ್ತಿದ್ದ ಉಡುಪಿ ತಾಲ್ಲೂಕಿನ ಕೆಮ್ಮಣ್ಣುಗುಂಡಿಯ ಬಾಲಕಿಯರ ಪದವಿಪೂರ್ವ ಕಾಲೇಜೊಂದ ಉದ್ಘಾಟನೆ ನಡೆಸಿದರು. ಅದೇ ದ ಬೀಡಿನಗುಡ್ಡೆಯಲ್ಲಿ ಪೌರಕಾರ್ಮಿಕರ ವಸ ಸಂಕೀರ್ಣವೊಂದಕ್ಕೆ ಭೂಮಿಪೂಜೆ ನೆರವೇರಿಸಿದ ಇದಕ್ಕೆಲ್ಲ ತಿಲಕವಿಟ್ಟಂತೆ ಅದೇ ದಿನ ಬೆಂಗಳೂ

'ಆಸ್ತಾ ಫೌಂಡೇಶನ್'ನವರು ಉಡುಪಿ ಸಿಟಿ ಬ ನಿಲ್ದಾಣದಲ್ಲಿ ರೂ.2.5 ಲಕ್ಷ ವೆಚ್ಚದಲ್ಲಿ, 'ಬ ಆಪರೇಟ್ ಎಂಡ್ ಟ್ರಾನ್ಸ್‌ಫರ್' ಯೋಜನೆಯ ನಿರ್ಮಿಸಿದ್ದ ಮೂತ್ರದೊಡ್ಡಿಯೊಂದ ಉದ್ಘಾಟಿಸಿಯೇಬಿಟ್ಟರು. ಈ ಘನ ಸಮಾರಂ ಅವರೊಂದಿಗೆ ಉಡುಪಿ ಶಾಸಕ ರಘುಪತಿ ಭಟ್ಟ ಕಾಪು ಶಾಸಕ ಲಾಲಾಜಿ ಮೆಂಡನ್, ಸಂಸತ್ ಸದ ಡಿ.ವಿ.ಸದಾನಂದಗೌಡ, ಉಡುಪಿ ನಗರಸ ಹಾಲಿ ಅಧ್ಯಕ್ಷರು ಮತ್ತು ಮಾಜಿ ಅಧ್ಯಕ್ಷರು ಬಿಜೆಪಿ ಎಲ್ಲಾ ಕೌನ್ಸಿಲರುಗಳು ಹೀಗೆ ಬಿ.ಜೆ.ಪಿ.ಯ ನಾಯಕಗಡಣವೇ 'ಪೇ ಎಂಡ್ ಯೂಸ್' ಅಥ ದುಡ್ಡು ತೆತ್ತು ಬಳಸಬಹುದಾದ ಮೂ ದೊಡ್ಡಿಯೊಂದರ ಉದ್ಘಾಟನೆಯ ಘನಕಾರ್ಯದ ಸನ್ಮಾನ್ಯ ಗೃಹಸಚಿವರಿಗೆ 'ಸಾಥ್' ನೀ ಕೃತಾರ್ಥರಾದರು! 'ರೋಮ ನಗರ ಹೊ ಉರಿಯುತ್ತಿದ್ದಾಗ ನೀರೋ ದೊರೆ ಪಿಟೀ ಬಾರಿಸುತ್ತಿದ್ದನಂತೆ'' ಎಂಬ ಗಾದೆಮಾ ನೆನಪಾಯಿತೆ?

ಆಚಾರ್ಯ ದೇವೋಭವ

ಮಾತೃದೇವೋಭವ ನೆನಪಿಡುವೆ ನಿತ್ಯ
ಅತಿಥಿದೇವೋಭವ ಸತ್ಯ ಅಗತ್ಯ
ಆ ಬುದ್ಧ ನಂಥವರು ಬಂದಾಗ ಹುಟ್ಟಿ
ಆಚಾರ್ಯದೇವೋಭವ ಹಿಡಿದೇನು ಎತ್ತಿ
-ವಿಡಂಬಾರಿ


ಅಮೆರಿಕನ್ ಸಾಮ್ರಾಜ್ಯಶಾಹಿಯ ಅಜೆಂಡಾದ ಏಕಪಕ್ಷೀಯ ಹೇರಿಕೆ ಆರಂಭವಾಗಿದೆ, ಅವರಿಂದ 'ಜವಾಬ್ದಾರಿಯುತ ದೇಶ' ಎಂಬ ಸರ್ಟಿಫಿಕೇಟ್ ಪಡೆಯಲು ನಮ್ಮ ಸ್ವತಂತ್ರ ನಿಲುವುಗಳನ್ನು ಒಂದೊಂದಾಗಿ ಕೈಬಿಡಬೇಕು ಎಂದು ಅಮೆರಿಕಾದ ಆಳುವ ಮಂದಿ ಉಪದೇಶ ನೀಡುತ್ತಿದ್ದಾರೆ. ಎರಡನೇ ಮನಮೋಹನ ಸಿಂಗ್ ಸರಕಾರ ಇದಕ್ಕೆ 'ಜನಾದೇಶ' ಪಡೆದಿದೆಯಂತೆ. ಆದರೆ ಭಾರತದ ಜನ ತಮ್ಮ ಬದುಕನ್ನು, ದೇಶದ ಹೆಮ್ಮೆಯನ್ನು ನಾಶಮಾಡಲು ಬಿಡಲಾಗದು, ಈ ಧಾವಂತಕ್ಕೆ ತಡೆ ಹಾಕಬೇಕಾಗಿದೆ.

ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನಾಗಲು ಭಯಂಕರ ಧಾವಂತ !

ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿಗಳು ಭಾರತಕ್ಕೆ ಭೇಟಿ ಕೊಟ್ಟು ಹೋಗಿದ್ದಾರೆ. ಶ್ರೀಮತಿಹಿಲರಿ ಕ್ಲಿಂಟನ್‌ರವರ ಭೇಟಿ ಸಾಮ್ರಾಜ್ಯ ಶಾಹಿಗಳಿಗೆ ಸಾಕಷ್ಟು ಪ್ರಯೋಜನ ತಂದಿದೆ. ನಾವೊಂದು 'ಹೊಸ ದ್ವಿಪಕ್ಷೀಯ ಮಾತುಕತೆಯ ಶಿಲ್ಪ'ದ ಬಗ್ಗೆ ಪರಸ್ಪರ ಒಪ್ಪಿಕೊಂಡಿದ್ದೇವೆ, ಹಲವಾರು ವಿಷಯಗಳ ಬಗ್ಗೆ ಚರ್ಚೆಗಳನ್ನು ಮುಂದುವರೆಸುತ್ತೇವೆ ಎಂದು ವಿದೇಶಾಂಗ ಮಂತ್ರಿ ಕೃಷ್ಣ ಸಂಸತ್ತಿಗೆ ಹೇಳಿದ್ದಾರೆ.

ಏನಿದು ಹೊಸ ಮಾತುಕತೆಯ ಶಿಲ್ಪ?

ಈ ಭೇಟಿಯ ಕಾಲದಲ್ಲಿ ಸಹಿ ಹಾಕಿದ ಎರಡು ಪ್ರಮುಖ ಒಪ್ಪಂದಗಳು ಇದರ ನೋಟ ನೀಡಿವೆ. ಇದು ಭಾರತದ ರಾಜಕೀಯ, ಆರ್ಥಿಕ ಸಾರ್ವಭೌಮತೆ ಯನ್ನು ಮತ್ತು ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಕುಂಠಿತಗೊಳಿಸುವ 'ಶಿಲ್ಪ'. ಇದರಲ್ಲಿ ದ್ವಿಪಕ್ಷೀಯವೆಂಬುದು ಏನೂ ಇಲ್ಲ. ಏನಿದ್ದರೂ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಜೆಂಡಾದ ಏಕಪಕ್ಷೀಯ ಹೇರಿಕೆಯಷ್ಟೇ ಕಾಣುವುದು. ಇದಕ್ಕೆ ನಮ್ಮ ಯುಪಿಎ-2 ಸರಕಾರ ಸಂತೋಷದಿಂದಲೇ ತಲೆಬಾಗಿದೆ.



ಈ ಭೇಟಿಯ ಮೊದಲು ಅಮೆರಿಕನ್ ಮಾಧ್ಯಮಗಳು ಮತ್ತು ಒಬಾಮಾ ಸರಕಾರದ ಪ್ರತಿನಿಧಿಗಳು ಅಮೆರಿಕಾ ಈ ಭೇಟಿಯಿಂದ ಏನು ನಿರೀಕ್ಷಿಸುತ್ತದೆ ಎಂಬ ಸ್ಪಷ್ಟ ಸಂಕೇತಗಳನ್ನು ಕೊಟ್ಟಿದ್ದರು. ಅತ್ಯಾಧುನಿಕ ಅಮೆರಿಕನ್ ಶಸ್ತ್ರಾಸ್ತ್ರಗಳ ಖರೀದಿ- ಇದು ಅಮೆರಿಕಾದ ಯುದ್ಧ ವಿಮಾನ ತಯಾರಿಕಾ ಕಂಪನಿಗಳಾದ ಲಾಕ್‌ಹೀಡ್ ಮಾರ್ಟಿನ್ ಮತ್ತು ಬೊಯಿಂಗ್‌ಗೆ ಮಹಾಪ್ರಸಾದವಾಗಲಿವೆ ಎಂದು ಅಮೆರಿಕಾದವರೇ ಹೇಳುತ್ತಿದ್ದಾರೆ.

ಭದ್ರತೆ, ಸಾರ್ವಭೌಮತೆಗೆ ಆಪತ್ತು

ಭಾರತ 126 ಬಹುಪಾತ್ರಗಳ ಫೈಟರ್ ಯುದ್ಧ ವಿಮಾನಗಳನ್ನು ಖರೀದಿಸಬೇಕೆಂದಿದೆ. ಈ ಎರಡೂ ಕಂಪನಿಗಳು ಅದಕ್ಕೆ ಸ್ಪರ್ಧಿಗಳು. ಇದು ಇಂದು ಜಗತ್ತಿನ ಅತಿ ದೊಡ್ಡ ಶಸ್ತ್ರಾಸ್ತ್ರ ವ್ಯವಹಾರವಾಗುತ್ತದೆ. ಮತ್ತೊಂದು- ಪರಮಾಣು ರಿಯಾಕ್ಟರುಗಳ ಖರೀದಿ. ಇದು ಭಾರತ-ಅಮೆರಿಕಾ ಪರಮಾಣು ಒಪ್ಪಂದದ ಪ್ರಕಾರ ನಡೆಯಬೇಕಾಗಿದೆ. ಇದರಿಂದ ಅಮೆರಿಕಾದ ಜನರಲ್ ಇಲೆಕ್ಟ್ರಿಕ್ ಮತ್ತು ವೆಸ್ಟಿಂಗ್‌ಹೌಸ್ ಕಂಪನಿಗಳಿಗೆ 1000 ಕೋಟಿ ಡಾಲರುಗಳ ವ್ಯವಹಾರ ಸಿಗಲಿದೆ ಎಂಬುದು ಅವರೆಲ್ಲರ ಲೆಕ್ಕಾಚಾರ.

ಆದರೆ ಅಮೆರಿಕಾದ ಕಂಪನಿಗಳಿಗೆ ಈ ಬಾಯಲ್ಲಿ ನೀರೂರಿಸುವ ಕಾಂಟ್ರಾಕ್ಟುಗಳು ಸಿಗಬೇಕಾದರೆ ಭಾರತ ಅಮೆರಿಕಾದ ರಕ್ಷಣಾ ಉಪಕರಣಗಳನ್ನು ಕೊನೆಯದಾಗಿ ಎಲ್ಲಿ ಬಳಸುತ್ತದೆ ಎಂದು ಪರೀಕ್ಷಿಸುವ ಕುರಿತ ಒಪ್ಪಂದಕ್ಕೆ ಸಹಿ ಹಾಕಬೇಕು. ಇದೇ ಇಯುಎಂಎ- ಅಂದರೆ ಅಂತಿಮ ಬಳಕೆ ಪರೀಕ್ಷಣಾ ಒಪ್ಪಂದವಾಗಬೇಕು. ಸಾಮಾನ್ಯ ಭಾಷೆಯಲ್ಲಿ ಹೇಳಬೇಕಾದರೆ ಅಮೆರಿಕಾಕ್ಕೆ ಈ ಉಪಕರಣಗಳನ್ನು ಬಳಸುವ ರಕ್ಷಣಾ ಸ್ಥಾವರಗಳನ್ನು ಪರೀಕ್ಷಿಸುವ ಹಕ್ಕು ಕೊಡುವುದು. ಅಂದರೆ ನಮ್ಮ ಮಿಲಿಟರಿ ಸ್ಥಾವರಗಳನ್ನು ಅಮೆರಿಕಾದ ಗೂಢಚಾರಿಕೆಗೆ ತೆರೆದಿಡುವುದು, ಆಮೂಲಕ ಭಾರತದ ಭದ್ರತೆ ಮತ್ತು ಸಾರ್ವಭೌಮತೆಗೆ ಗಂಭೀರ ಆಪತ್ತು ತಂದುಕೊಳ್ಳುವುದು.

ಅಮೆರಿಕಾಕ್ಕೆ ಒಂದು ನಂಬಲರ್ಹ ಮಿತ್ರನಾಗಿ ಪಾಕಿಸ್ತಾನದ ಸಂಗೆ ಬೇಕೇ ಬೇಕು-ತಾಲಿಬಾನನ್ನು ಎದುರಿಸಲು. ಹೀಗಿರುವಾಗ ನಮ್ಮ ಮಿಲಿಟರಿ ಸ್ಥಾವರಗಳನ್ನು ಪರೀಕ್ಷಿಸಲು ಅಮೆರಿಕಾಕ್ಕೆ ಅವಕಾಶ ಕೊಡುವುದು ಖಂಡಿತವಾಗಿಯೂ ನಮ್ಮ ರಾಷ್ಟ್ರೀಯ ಹಿತ ಕಾಯುವ ಕ್ರಮ ಅಲ್ಲ.

ಅಮೆರಿಕಾದ ಆರಂಶಗಳ ಅಜೆಂಡಾ

ನಿಜಸಂಗತಿಯೆಂದರೆ, ಈ ಭೇಟಿ ಆರಂಭವಾಗುವ ಮೊದಲು ಅಮೆರಿಕಾದ ದೊಡ್ಡ ಪತ್ರಿಕೆ ನ್ಯೂಯಾರ್ಕ್ ಟೈಮ್ಸ್ ಆರಂಶಗಳ ಅಜೆಂಡಾವನ್ನು ಸಲಹೆ ಮಾಡಿತ್ತು- ತನ್ನ ಜುಲೈ 18ರ ಸಂಪಾದಕೀಯದಲ್ಲಿ.

ಮೊದಲನೆಯದಾಗಿ, ಭಾರತ ಈಗ ಅಂತರ್‍ರಾಷ್ಟ್ರೀಯವಾಗಿ ಹೆಚ್ಚು ಜವಾಬ್ದಾರಿಯಿಂದ ವರ್ತಿಸುವಂತೆ ಮಾಡಬೇಕಂತೆ! ಕಳೆದ ವರ್ಷದಂತೆ ವಿಶ್ವ ವ್ಯಾಪಾರ ಸಂಘಟನೆಯ ದೋಹಾ ಸುತ್ತಿನ ಮಾತುಕತೆಗಳನ್ನು 'ಛಿದ್ರ' ಗೊಳಿಸದೆ ಅದು ಶ್ರೀಮಂತ ದೇಶಗಳು ಬಯಸುವ ರೀತಿಯಲ್ಲಿ ಸಂಪನ್ನಗೊಳ್ಳುವಂತೆ ಮಾಡಬೇಕು! ಈಗ ಕೃಷಿಯೇತರ ಮಾರುಕಟ್ಟೆ ಅವಕಾಶ (ನಾಮಾ) ಮತ್ತು ಕೃಷಿ ಸಂರಕ್ಷಣೆಗಳು ಎಂಬ ವಿಷಯಗಳಲ್ಲಿ ಈ ಮಾತುಕತೆಗಳು ಸಿಲುಕಿಕೊಂಡಿವೆ. ಭಾರತ ಈ ವಿಷಯದಲ್ಲಿ ಅಮೆರಿಕಾ ಬಯಸುವಂತೆ 'ಹೆಚ್ಚು ಜವಾಬ್ದಾರಿಯಿಂದ ವರ್ತಿಸಲು' ತನ್ನ ನಿಲುವನ್ನು ಸಡಿಲಿಸಿದರೆ ಅದು ನಮ್ಮ ಕೃಷಿಗೆ, ರೈತರಿಗೆ ಮಾರಕವಾಗುತ್ತದೆ, ಭಾರತದ ಕೃಷಿ ಸಂಕಟವನ್ನು ಇನ್ನಷ್ಟು ಆಳಗೊಳಿಸುತ್ತದೆ.

ಎರಡನೆಯದಾಗಿ, ಭಾರತ ಜಾಗತಿಕ ತಾಪಮಾನ ಹೆಚ್ಚಲು ಕಾರಣವಾಗುತ್ತಿರುವ ಪ್ರಮುಖ ದೇಶಗಳಲ್ಲಿ ಒಂದಾಗಿರುವುದ ರಿಂದ(!) ಅದು ಇಂಧನ ಕಲ್ಮಶಗಳನ್ನು ಕಡಿತ ಮಾಡುವಲ್ಲಿ ಶ್ರೀಮಂತ ದೇಶಗಳ ಜತೆ ಕೈಜೋಡಿಸಬೇಕಂತೆ! ಇಂಧನ ಕಲ್ಮಶಗಳ ಪ್ರಮಾಣವನ್ನು ಎಷ್ಟು ತಗ್ಗಿಸಬೇಕೆಂಬ ಗುರಿ ಅಭಿವೃದ್ಧಿ ಹೊಂದಿರುವ ದೇಶಗಳಿಗೂ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೂ ಒಂದೇ ರೀತಿಯದಾಗಿರಬಾರ ದೆಂಬುದು ಭಾರತದ ನಿಲುವು. ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗಿಂತ ಬಹಳ ಹೆಚ್ಚಿನ ಪ್ರಮಾಣದಲ್ಲಿ ಇಂಗಾಲ ಕಲ್ಮಶಗಳನ್ನು ತಡೆಯಬೇಕು, ಏಕೆಂದರೆ ಅಭಿವೃದ್ಧಿ ಹೊಂದಿದ ದೇಶಗಳ ಅಭಿವೃದ್ಧಿ ವಿಧಾನಗಳಿಂದಾಗಿಯೇ ವಿಶ್ವದ ಹವಾಮಾನದ ಮೇಲೆ ಪ್ರತಿಕೂಲ ಪರಿಣಾಮ ಬಿದ್ದಿದೆ ಎಂಬುದು ಇದರ ಹಿಂದಿರುವ ತರ್ಕ. ಇಲ್ಲಿಯೂ ಅಮೆರಿಕಾ ಬಯಸುವಂತೆ 'ಹೆಚ್ಚು ಜವಾಬ್ದಾರಿಯಿಂದ ವರ್ತಿಸಲು' ನಿಲುವನ್ನು ಬದಲಿಸಿದರೆ ಕೋಟ್ಯಂತರ ಭಾರತೀಯರ ಜೀವನಾಧಾರಕ್ಕೆ ಕುತ್ತು ತಂದಂತೆಯೇ ಸರಿ.

ಬುಶ್ ಮಾಡಲಾಗದ್ದನ್ನು ಒಬಾಮಾ ಮಾಡಬೇಕು!

ಮೂರನೆಯದಾಗಿ, ಭಾರತ ಪಾಕಿಸ್ತಾನದೊಂದಿಗೆ ಶಸ್ತ್ರಾಸ್ತ್ರ ಪೈಪೋಟಿಯನ್ನು ಮಿತಗೊಳಿಸಲು ಬಹಳಷ್ಟು ಮಾಡಬೇಕಾಗಿದೆಯಂತೆ! ಅಮೆರಿಕಾ ಭಾರತದ ವಿರುದ್ಧ ಪಾಕಿಸ್ತಾನಕ್ಕೆ ತಡೆ ಹಾಕುತ್ತದೆ, ಅಲ್ಲಿರುವ ಭಯೋತ್ಪಾದಕ ವ್ಯವಸ್ಥೆಯನ್ನು ಕಳಚಿ ಹಾಕಿಸಲು ಒತ್ತಡ ಹಾಕುತ್ತದೆ ಎಂಬ ಭರವಸೆಯನ್ನು ನಂಬಬೇಕು ಹಾಗೂ ಪಾಕಿಸ್ತಾನದೊಂದಿಗೆ ನೀರು, ಪರಿಸರ ಮೊದಲಾದ ಪ್ರಶ್ನೆಗಳ ಮೇಲೆ ಮಾತುಕತೆ ನಡೆಸಬೇಕು! ಈಜಿಪ್ಟಿನಲ್ಲಿ ಅಲಿಪ್ತ ರಾಷ್ಟ್ರಗಳ ಸಮ್ಮೇಳನದ ವೇಳೆಗ ಭಾರತದ ಹಾಗೂ ಪಾಕಿಸ್ತಾನದ ಪ್ರಧಾನ ಮಂತ್ರಿಗಳ ಜಂಟಿ ಹೇಳಿಕೆಯಲ್ಲಿ ವಿರೋಧಾಭಾಸಗಳು ಕಾಣಬಂದಿರುವುದು ಅಮೆರಿಕಾದ ಇಂತಹ ಒತ್ತಡಗಳ ಪರಿಣಾಮವಾಗಿ ಎಂಬುದರಲ್ಲಿ ಸಂದೇಹವಿರಲಾರದು.

ನಾಲ್ಕನೆಯದಾಗಿ, ಜಾಗತಿಕ ಅಣು ಶಸ್ತ್ರಾಸ್ತ್ರ ಪ್ರಸರಣವನ್ನು ತಡೆಯಲು ಭಾರತ ಇನ್ನೂ ಬಹಳಷ್ಟು ಮಾಡುವಂತಾಗಬೇಕು, ಬುಶ್ ಆಡಳಿತ ಮಾಡಲಾಗದ್ದನ್ನು ಒಬಾಮಾ ಸರಕಾರ ಮಾಡಬೇಕು! ಅಂದರೆ ಭಾರತ ಪ್ರಸರಣ ನಿಷೇಧ ಸಂಧಿ(ಎನ್‌ಪಿಟಿ), ವ್ಯಾಪಕ ಪರೀಕ್ಷಣಾ ನಿಷೇಧ ಸಂಧಿ(ಸಿಟಿಬಿಟಿ) ಹಾಗೂ ವಿದಳನ ಸಾಮಗ್ರಿ ತಡೆ ಸಂಧಿ(ಎಫ್‌ಎಂಸಿಟಿ) ಇವಕ್ಕೆಲ್ಲಾ ಸಹಿ ಹಾಕುವಂತೆ ಮಾಡಬೇಕು! ಇವೆಲ್ಲಾ ಐದು ಪರಮಾಣು ಶಸ್ತ್ರಾಸ್ತ್ರ ಹೊಂದಿರುವ ದೇಶಗಳಿಗೆ ಮಾತ್ರ ಅನುಕೂಲ ಕಲ್ಪಿಸುವ, ಉಳಿದವರ ವಿರುದ್ಧ ಪಕ್ಷಪಾತದಿಂದ ಕೂಡಿದ ಸಂಧಿಗಳು, ಆದ್ದರಿಂದ ಇವಕ್ಕೆ ಸಹಿ ಹಾಕುವುದಿಲ್ಲ ಎಂಬುದು ಇದುವರೆಗೆ ಭಾರತದ ನಿಲುವು. ಇದನ್ನು ಬದಲಿಸುವುದೆಂದರೆ ಭಾರತದ ಸಾರ್ವಭೌಮತೆಯನ್ನು ಬುಡಮೇಲು ಮಾಡಿದಂತಾಗುತ್ತದೆ.

ಐದನೆಯದಾಗಿ, 'ಪರಮಾಣು ವ್ಯವಹಾರದ ಮಾತುಕತೆಯ ವೇಳೆಯಲ್ಲಿ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತ ಒಲ್ಲದ ಮನಸ್ಸಿನಿಂದಲೆ

ಪುಟ 15ಕ್ಕೆ

ಅಮೆರಿಕಾದ ಎದೆಯಲ್ಲಿ ಸದಾ ಅವಲಕ್ಕಿ ಕುಟ್ಟುವ ಸದ್ದು

ದೇಶದ ಮಾಜಿ ರಾಷ್ಟ್ರಪತಿ ಕಲಾಂ ಅಜ್ಜ ನ್ಯೂಯಾರ್ಕ್‌ಗೆ ಹೊರಟಿದ್ದರು. ಅಮೇರಿಕದ ಕಾಂಟಿನೆಂಟಲ್ ಏರ್‌ಲೈನ್ಸ್‌ನ ಸಿಬ್ಬಂದಿಗೆ ಯಾರಾದರೇನು? ತಪಾಸಣೆ ಆಗಲೇಬೇಕು ಎಂದು ಶೂ ಬಿಚ್ಚಿಸಿ ತಪಾಸಣೆ ಮಾಡಿದರಂತೆ. ಆಮೇಲೆ ಮೈಯೆಲ್ಲಾ ತಡಕಾಡಿದರಂತೆ. 110 ಕೋಟಿ ಜನಸಂಖ್ಯೆಯುಳ್ಳ ಭಾರತದ ದೇಶದ ಮಾಜಿ ರಾಷ್ಟ್ರಪತಿ ಎಂಬ ಕನಿಷ್ಟ ಗೌರವವಾದರೂ ಬೇಡವೇ? ಇದು ಇವರೊಬ್ಬರ ಕತೆಯಲ್ಲ. ಜಾರ್ಜ್ ಫರ್ನಾಂಡೀಸ್ ದೇಶದ ರಕ್ಷಣಾ ಸಚಿವರಾಗಿರುವಾಗಲೇ ಎರಡು ಬಾರಿ ವಿಮಾನ ನಿಲ್ದಾಣದಲ್ಲಿ ಬಟ್ಟೆಬಿಚ್ಚಿಸಿ ತಪಾಸಣೆ ನಡೆಸಿರಲಿಲ್ಲವೇ?

ಹೌದು ಅಮೇರಿಕಕ್ಕೆ ಯಾಕಿಂಥಾ ಹೆದರಿಕೆ. ಗಣ್ಯಾತಿಗಣ್ಯರನ್ನೂ, ದೇಶದ ಅತಿಥಿಗಳನ್ನೂ ಸಂಶಯಿಸಬೇಕಾದ ಪರಿಸ್ಥಿತಿ?

ತಾನೇ ಮಾಡಿದ ಪಾತಕಗಳು ಹಾಗೂ ಪಾಪದ ಫಲವಿದು. ಇಡೀ ಜಗತ್ತು ತಾನು ಹೇಳಿದಂತೆ ಕುಣಿಯಬೇಕು. ತನಗಾಗದವರು, ಜಗತ್ತಿನ ಸಂಪತ್ತನ್ನು ತಾನು ಲೂಟಿ ಮಾಡುವುದನ್ನು ಪ್ರಶ್ನಿಸುವವರು, ತಡೆಯಬರುವವರು ಯಾರೂ ಉಳಿಯಬಾರದೆಂದು ಜಗತ್ತಿನ ತುಂಬೆಲ್ಲ ಅಮೇರಿಕ ನಡೆಸಿರುವ ಘೋರ ಪಾತಕಗಳೆಷ್ಟು? ಅದರ ಕಹಿಫಲವೇ ಈ ಭಯ. ಅಪಾಯ ಯಾವ ರೂಪದಲ್ಲಿ, ಯಾವ ರೀತಿಯಲ್ಲಿ, ಯಾವ ಕ್ಷಣದಲ್ಲಿ ದೇಶದ ಮೇಲೆ ಬಂದೆರಗುವುದೋ? ಆತಂಕ. ಕೊಲೆಪಾತಕಿಯಾದ ಅಪರಾಧಿಯೊಬ್ಬನಿಗೆ ತನಗಾಗದವರು ಎಲ್ಲಿ ಯಾವಾಗ ಏನು ಮಾಡುವರೋ ಎಂದು ಎದೆ ಡವಗುಟ್ಟಿದಂತೆ ಅಮೇರಿಕದ ಎದೆಯಲ್ಲಿ ಸದಾ ಅವಲಕ್ಕಿ ಕುಟ್ಟುವ ಸದ್ದು. ಅದಕ್ಕೆ ಇವೆಲ್ಲಾ.



ಬೆಂಗಳೂರಿನ ದೊಡ್ಡ ದೊಡ್ಡ ಮಾಲ್‌ಗಳು, ಅಪಾರ್ಟ್‌ಮೆಂಟ್‌ಗಳು, ಫ್ಲೈ ಓವರ್‌ಗಳನ್ನು ಕಟ್ಟುತ್ತಿರುವವರು ವಲಸೆ ಬಂದ ಕಾರ್ಮಿಕರು. ಇಲ್ಲಿ ಅವರ ಬದುಕು ಹೇಗಿದೆ?

ಕಾರ್ಮಿಕರ ನೋಂದಣಿ ಮಾಡಿಸಲು ಅರ್ಜಿ ಹಿಡಿದುಕೊಂಡು ಇಲ್ಲಿ ಈಗ ಓಡಾಡುತ್ತಿದ್ದಾರೆ. ಇಂಥದೊಂದು ಸೌಲಭ್ಯ ಇದೆ ಎಂಬುದೇ ಅರಿವಿಲ್ಲದ ಕಾರ್ಮಿಕರು ಈಗೀಗ ವಿಚಾರ ತಿಳಿದುಕೊಳ್ಳುತ್ತಿದ್ದಾರೆ.

ಹಳಬರು

ಸುಮಾರು 10 ರಿಂದ 15 ವರ್ಷಗಳಿಂದ ಈ ಗುಲ್ಬರ್ಗಾ ಕಾರ್ಮಿಕರು ಇಲ್ಲಿ ನೆಲೆಸಿದ್ದಾರೆ. 3 ತಿಂಗಳು, 6 ತಿಂಗಳು ಬಿಟ್ಟರೆ ಗುರುತೇ

ಜನಕ್ಕೆ ರೇಷನ್ ಭಾಗ್ಯ ಇನ್ನೂ ಕೈಗೆ ದಕ್ಕಿಲ್ಲ. 2-3 ರೂಪಾಯಿ ಅಕ್ಕಿಯ ಮಾತೇ ಇಲ್ಲ. 30 ರಿಂದ 35 ರೂ. ಕೊಟ್ಟು 'ಮುಕ್ತ ಮಾರುಕಟ್ಟೆ' ಯಲ್ಲಿ ಕೊಳ್ಳಬೇಕು. ಮನೆಗಳ ಹತ್ತಿರಕ್ಕೆ ನಲ್ಲಿ ಇಲ್ಲ. ಬಡಾವಣೆಗೊಂದು ನಲ್ಲಿ. ಎರಡು ದಿನಕ್ಕೊಮ್ಮೆ ನೀರು. ಮನೆಗೆ ಶೌಚಾಲಯ ಎಂಬುದಿರಲಿ ಇಡೀ ಬಡಾವಣೆಗೂ ಇಲ್ಲ. ಹಿಂಭಾಗದ ಕೆರೆಯ ಬಯಲೇ 'ಬಯಲು ಶೌಚಾಲಯ'. ಮನೆಯ ಮುಂದೆ ನಾಲ್ಕು

ಬೆಂಗಳೂರನ್ನು ಕಟ್ಟುತ್ತಿರುವ ವಲಸೆ ಕಾರ್ಮಿಕರ ಪಾಡು

ಆರ್.ರಾಮಕೃಷ್ಣ

ಮೆಜೆಸ್ಟಿಕ್ ಬಸ್ ಸ್ಟಾಂಡಿನಿಂದ ಬಸ್ಸು ಹೊರಟಿತು. ...ಮಹಾರಾಣಿ ಕಾಲೇಜು ಎದುರಿನ ಶೇಷಾದ್ರಿ ರಸ್ತೆ ಈಗ ಹಿಂದಿನಂತಿಲ್ಲ. ರಸ್ತೆ ವಿಶಾಲವಾಗಿದೆ. ಮೈಸೂರು ಬ್ಯಾಂಕ್ ವೃತ್ತದ ಕಡೆಯಿಂದ ಬಂದು ಚಾಲುಕ್ಯ ಸರ್ಕಲ್ ಕಡೆಗೆ ಹೋಗುವ ಮಾರ್ಗ ಈಗ ಮಹಾರಾಣಿ ಸರ್ಕಲ್ ಕೆಳಗೆ ಹಾದುಹೋಗಿದೆ. ಅಂದರೆ ಈಗ ಈ ಜಾಗದಲ್ಲಿ ಒಂದು ಕೆಳಸೇತುವೆ ರೂಪುಗೊಂಡಿದೆ. ನಾಲ್ಕು ಹೆಜ್ಜೆ ಮುಂದೆ ಹೊರಟರೆ ಕೆ.ಆರ್.ಸರ್ಕಲ್‌ನ ಚಿತ್ರವೇ ಬದಲಾಗಿದೆ. ವಿಶಾಲ ವೃತ್ತ. ವಿಧಾನಸೌಧದ ಕಡೆಯಿಂದ ಬರುವ ವಾಹನಕ್ಕೆ ಒಂದು ಅಂಡರ್‌ಪಾಸ್-ಕೆಳಮಾರ್ಗ..... ರಸ್ತೆಯ ಕೆಳಗೆ ಪಾದಚಾರಿ ಮಾರ್ಗಗಳು. ಆರು ತಿಂಗಳ ಹಿಂದೆ ಇಲ್ಲಿ ಬಂದವರು ಈಗ ಬಂದರೆ ಗುರುತು ಹಿಡಿಯುವುದೇ ಕಷ್ಟ. ಬಸ್ಸು ನಿಮ್ಹಾನ್ಸ್ ದಾಟಿ ಡೈರಿ ಸರ್ಕಲ್ ಮಾರ್ಗವಾಗಿ ಸಾಗುತ್ತಾ ಬಂದಂತೆ.... ಒಹೋ! ಡೈರಿ ಸರ್ಕಲ್‌ನಲ್ಲಿ ಮೂರಂತಸ್ತಿನ ರಸ್ತೆಗಳು. ಅಂದರೆ ರಸ್ತೆ ಮೇಲೆ ಮೇಲ್ಸೇತುವೆ ರಸ್ತೆ, ರಸ್ತೆ ಕೆಳಗೂ ರಸ್ತೆ - ಕೆಳ ಸೇತುವೆ. ಬಸ್ಸು ಬಲಕ್ಕೆ ತಿರುಗಿ ಬನ್ನೇರುಘಟ್ಟ ರಸ್ತೆಯಲ್ಲಿ ಹೊರಟರೆ.... ಬನ್ನೇರುಘಟ್ಟ ರಸ್ತೆ, ಎಡಕ್ಕೆ ಬಲಕ್ಕೆ ಯಾವುದಾವುದೋ ದೊಡ್ಡ ದೊಡ್ಡ ಕಂಪನಿಗಳು, ಮಾಲ್‌ಗಳು. ಥಳತಳಿಸುವ ಕಟ್ಟಡದೊಳಗೆ ಐಟಿ ಮತ್ತು ಹತ್ತು ಹಲವು ಉದ್ದಿಮೆಗಳ ಚಟುವಟಿಕೆಗಳು. ಮುಂದೆ ತಲೆ ಎತ್ತಿ ನಿಂತ ಮಂತ್ರಿ ಅಪಾರ್ಟ್‌ಮೆಂಟ್ಸ್, ಇನ್ನೂ ಮುಂದೆ ನೇತ್ರಾವತಿ ಅಪಾರ್ಟ್‌ಮೆಂಟ್ ಬಿಳೇಕಹಳ್ಳಿಯಲ್ಲಿ ಮುಖ್ಯರಸ್ತೆಯಿಂದ ಎಡಕ್ಕೆ ತಿರುಗಿ ಬಲಕ್ಕೆ ನಡೆದರೆ ಅಲ್ಲಿ ಸಿಕ್ಕಿತು ಕೋಡಿಚಿಕ್ಕನಹಳ್ಳಿ.

ಅಲ್ಲಿಂದ ಹೊಂಗಸಂದ್ರದ ಕಡೆಗೆ ಹೋಗುವ ದಾರಿಯಲ್ಲಿ ಹೋಗಿ ನಿಂತರೆ ಅಲ್ಲಿ ಒಂದು ಐದಂತಸ್ತಿನ ಸುರಕ್ಷಾ ಅಪಾರ್ಟ್‌ಮೆಂಟ್. ಈ ಸುರಕ್ಷಾ ಅಪಾರ್ಟ್‌ಮೆಂಟ್‌ನ ಎದುರಿಗೆ ಕಾಣುವ ಜಾಗವೇ ಗುಲ್ಬರ್ಗಾ ಕಾಲೋನಿ. ಗುಲ್ಬರ್ಗಾ ಕಾಲೋನಿ ಅಂದರೆ ಅದು ಮಡಿವಾಳದ ಕೆರೆಯ ಹಿನ್ನೀರಿಗೆ ಚಾಚಿಕೊಂಡಂತಿರುವ ಒಂದು ಕೊಂಪೆ.

ಇಲ್ಲಿದ್ದಾರೆ ಬೆಂಗಳೂರಿನ ದೊಡ್ಡ ದೊಡ್ಡ ಗಗನ ಚುಂಬಿ ಕಟ್ಟಡಗಳು, ಮೇಲ್ಸೇತುವೆ, ಕೆಳಸೇತುವೆಗಳನ್ನು ಕಟ್ಟುವ ಶ್ರಮಿಕರು, ಕಟ್ಟಡ ಕಾರ್ಮಿಕರು. ಜಾಗದ ಹೆಸರೇ ಹೇಳುತ್ತದೆ. ಇವರು ವಲಸೆ ಕಾರ್ಮಿಕರು. ಇಲ್ಲಿಯ ಕುಟುಂಬಗಳು ಬಹುತೇಕ ಗುಲ್ಬರ್ಗಾ ಜಿಲ್ಲೆಯ ಯಾದಗೀರ್ ತಾಲ್ಲೂಕಿನ ಗಣಪುರ ಮತ್ತಿತರ ಹಳ್ಳಿಯವರು. ಅಲ್ಲಿ ವ್ಯವಸಾಯಕ್ಕೆ ಜಮೀನಿಲ್ಲ. ಕೆಲವರಿಗೆ ಎಕರೆ, ಎರಡೆಕರೆ ಜಮೀನಿದ್ದರೂ ನೀರಾವರಿ ಸೌಲಭ್ಯವಿಲ್ಲ. ಮಳೆಯನ್ನು ನಂಬಿ ಬದುಕುವಂತಿಲ್ಲ. ಹೊಟ್ಟೆಪಾಡಿಗಾಗಿ 'ಕೆಟ್ಟು ಪಟ್ಟಣ ಸೇರು' ಎಂದಂತೆ ಬೆಂಗಳೂರಿಗೆ ಬಂದುಬಿದ್ದಿದ್ದಾರೆ.

ಸಿಐಟಿಯು ಮತ್ತು ಕಾರ್ಮಿಕ ಚಳುವಳಿಯ ಸತತ ಹೋರಾಟದಿಂದಾಗಿ ಕೇಂದ್ರ ಮಟ್ಟದಲ್ಲಿ ಕಟ್ಟಡ ಕಾರ್ಮಿಕರ ಕಾಯ್ದೆಯೊಂದು ಜಾರಿಗೆ ಬಂದಿದೆ. ಕಟ್ಟಡ ಕಾರ್ಮಿಕರಿಗೆ ಆರೋಗ್ಯ, ಮಕ್ಕಳ ಶಿಕ್ಷಣಕ್ಕೆ, ಮದುವೆಗೆ ಕೆಲವೊಂದು ಅನುಕೂಲಗಳು ದಕ್ಕುತ್ತವೆಂದು ಕಾನೂನು ಹೇಳುತ್ತದೆ. ಆದರೆ ಇದನ್ನು ಕಾರ್ಮಿಕರಿಗೆ ಹೇಳುವವರು ಯಾರು? ಕಾರ್ಮಿಕ ಇಲಾಖೆ, ಕಾರ್ಮಿಕ ಇಲಾಖೆಯ ಅಧಿಕಾರಿಗಳು ಹೇಳುವರೇ? ಊಹುಂ. ಕಟ್ಟಡ ಕಾರ್ಮಿಕ ಸಂಘಟನೆಯ ಮುಖಂಡರಾದ ಶಂಕರ್

ಶಾಲೆಗೆ ಹೋಗಬೇಕಾದ ಸಮಯದಲ್ಲಿ ಹೆಣ್ಣುಮಕ್ಕಳು ಬೀದಿಯಲ್ಲಿ



ಸಿಗಲಾರದಂತೆ ಬೆಂಗಳೂರಿನ ಚಿತ್ರಣವನ್ನೇ ಬದಲಿಸುತ್ತಿರುವ ಈ ಕಾರ್ಮಿಕರ ಬದುಕಿನಲ್ಲಿ ಮಾತ್ರ ಬದಲಾವಣೆ ಬರಲೇ ಇಲ್ಲ.

ಇಲ್ಲಿರುವುದೆಲ್ಲ ಬಹುತೇಕ ಗುಡಿಸಲುಗಳು. ಕೆಲವು ಮುರುಕು ಮನೆಗಳು. ಇದು ಕಟ್ಟಡಗಳ ಗುತ್ತಿಗೆದಾರರ



ಮುಗಿಲೆತ್ತರದ ಅಪಾರ್ಟ್‌ಮೆಂಟ್ ಕಟ್ಟುವ ಮಹಿಳೆ ತನ್ನ ಮನೆ ಕಟ್ಟಿಕೊಳ್ಳುತ್ತಿರುವುದು

ಕಡೆಯವರದ್ದೇ ಯಾರದ್ದೋ ಜಾಗವಂತೆ. ಗುಡಿಸಲಾದರೆ ತಿಂಗಳಿಗೆ 200 ಬಾಡಿಗೆ ಕೊಡಬೇಕು. ಮನೆಯಾದರೆ 300 ಬಾಡಿಗೆ. ಬಾಡಿಗೆ ನೆಲಕ್ಕೆ. ಮನೆಗಲ್ಲ. ಗುಡಿಸಲು- ಮನೆ ಕಟ್ಟಿಕೊಂಡವರು ಇವರೇ. ಹೇಗೂ ಕಟ್ಟಡ ಕಾರ್ಮಿಕರಲ್ಲವೇ ಸ್ವಂತಕ್ಕೆ ಕಟ್ಟಡ ಕಟ್ಟಿಕೊಳ್ಳುತ್ತಾರೆ.

ಇಲ್ಲಿ ಕಾಣುವ ಚಿತ್ರವೊಂದರಲ್ಲಿ ದ್ಯಾವಮ್ಮ ತನ್ನ ಮನೆ ಕಟ್ಟಿಕೊಳ್ಳುತ್ತಿದ್ದಾಳೆ ನೋಡಿ. ಮನೆಯೆಂದರೇನು? ನಾಲ್ಕು ಗಳ, ಎಂಟು ಗರಿಯ ಕೆಳಗೆ ಮೂರು ಮುರುಕು ಗೋಡೆ, ಅಲ್ಲಿ ಇಲ್ಲಿ ಬಿದ್ದ ಚೂರಿಟ್ಟಿಗೆ, ತುಂಡು ಕಲ್ಲು, ಜೋಡಿಸಿ ಸೇರು ಮಣ್ಣು ಕಲಸಿ ತಾನೊಬ್ಬಳೇ ತನ್ನ ಮನೆ ಕಟ್ಟಿಕೊಳ್ಳುತ್ತಿದ್ದಾಳೆ.

ವರ್ಷಗಟ್ಟಲೆ ಇಲ್ಲೇ ವಾಸ ಮಾಡಿದ್ದರೂ ಇಲ್ಲಿ

ಕಡ್ಡಿ ನೆಟ್ಟು, ಗೋಣಿ ಚೀಲದ ಮರೆ ಮಾಡಿದರೆ ಅದೇ ಸ್ನಾನದ ಮನೆ. ಗಂಡಸರು, ಹುಡುಗರ ಸ್ನಾನ ಬೆಳಕಾದ ಮೇಲೆ. ಹೆಣ್ಣುಮಕ್ಕಳು, ಮಹಿಳೆಯರಿಗೆ ಹಾಗೆಲ್ಲ ಆಲಸ್ಯ ಮಾಡಲು ಅವಕಾಶವೇ ಇಲ್ಲ. ಬೆಳಕು ಹರಿಯುವುದಕ್ಕೆ ಮುಂಚೆ ಸ್ನಾನ ಮುಗಿದಿರಬೇಕು. ನಗರದ ಕೊಳಚೆ ನೀರು ಹರಿಯುವ ದೊಡ್ಡ ಗಟಾರ ಗುಡಿಸಲುಗಳ ಪಕ್ಕಕ್ಕೇ ಇದೆ. ಇಲ್ಲಿನ



ಗುಡಿಸಲುಗಳ ಹಿನ್ನೆಲೆಯಲ್ಲಿ ಬಹುಮಹಡಿ ಕಟ್ಟಡ

ನಲ್ಲಿಯಲ್ಲಿ ನೀರು ಬರದಿದ್ದರೂ ಗಟಾರದ ನೀರು ಹರಿಯುವುದೇನೂ ನಿಲ್ಲುವುದಿಲ್ಲ. ಸೊಳ್ಳೆ, ನೊಣ ಎಂದು ಯಾರೂ ಯಾರನ್ನೂ ದೂರುವಂತಿಲ್ಲ.

ಕೆರೆಯ ಬಯಲಲ್ಲಿ ನಸುಕಲ್ಲಿ, ಮಬ್ಬುಗತ್ತಲಲ್ಲಿ ಎದ್ದು ಹೊರಕ್ಕೆ ಹೋಗಬೇಕು. ಹಾವು, ಚೇಳು ಏನು ಇದ್ದರೂ ಈಸಬೇಕು, ಇದ್ದು ಜೈಸಬೇಕು.

ಈ ಕಾಲೋನಿಗೆ ಕಾಲಿಟ್ಟರೆ ಬೀದಿಯಲ್ಲಿ ಆಡುವ ಮಕ್ಕಳು ಹಲವರು. ಶಾಲೆಗೆ ಹೋಗಬೇಕಾದ ಸಮಯದಲ್ಲಿ ಎಷ್ಟೋ ಮಕ್ಕಳು ಇಲ್ಲಿ ನೆಲದಲ್ಲಿ ಮಣ್ಣಿನಲ್ಲಿ ಆಡುತ್ತಾ ಕುಳಿತಿದ್ದಾರೆ. ಇವರಲ್ಲಿ ಶಾಲೆಗೆ ಸೇರದೇ ಹೋದವರೂ ಇದ್ದಾರೆ. ಸೇರಿ ಶಾಲೆ ಬಿಟ್ಟವರಿದ್ದಾರೆ. ಶಾಲೆಗೆ ಹೋಗುತ್ತಾ ರಾದರೂ ಶಾಲೆ ತಪ್ಪಿಸಿ ಮನೆಯ ಬಳಿ ಆಡುವವರಿದ್ದಾರೆ. ಮನೆಯಲ್ಲಿ

ೂಸುಗಳೇನಾದರೂ ಇದ್ದರೆ ಹೆಣ್ಣುಮಕ್ಕಳು ಶಾಲೆಗೆ ೀಗುವುದಕ್ಕೆ ಕಲ್ಲುಬಿತ್ತು ಎಂದೇ ಬಹುತೇಕ ಅರ್ಥ.


ದೆಯ ಮೂಳೆ ಮುರಿಯಿತು.

 ಕಾಣುವ ಪಾರ್ವತಮ್ಮ 35 ವರ್ಷದ ಹೆಳೆ. ಈಗ ಆಕೆಗೆ ದುಡಿಯದೇ ಮನೆಯಲ್ಲಿ ಕೂತು ಣ್ಣುವ ಸೌಭಾಗ್ಯ. ಆಕೆಯ ಎದೆಯ ಎರಡು ೂಳೆಗಳೂ ಮುರಿದಿವೆ.

ಈ ಭಾಗ್ಯ ದೊರೆತದ್ದು ಹೇಗೆ? ಬೆಂಗಳೂರಿನಲ್ಲಿ ಲ್ಲ ಅನುಕೂಲಸ್ಥ ಜನಗಳು ಸಂಚರಿಸುವ ಕೆಂಪಾನೆ ಪಿನ ಹವಾನಿಯಂತ್ರಿತ ವೋಲ್ವೋ ಬಸ್ಸನ್ನು - ದರ ವೈಭವ ಬಲ್ಲವರೇ ಬಲ್ಲರು. ಈ ಕಟ್ಟಡ ರ್ಮಿಕರು ಓಡಾಡುವ ವಾಹನವನ್ನು ನೋಡಬೇಕು. ರಕು ತುಂಬುವ ಮೆಟೆಡಾರ್ ವ್ಯಾನ್‌ಗಳೇ ಇವರು ಡಾಡುವ ಐರಾವತ. ಕಟ್ಟಡಗಳಿಗೆ ಕಾಂಕ್ರಿಟ್ ಾಡು ಹಾಕುವ ಕೆಲಸಗಾರರನ್ನು 'ಗ್ಯಾಂಗ್' ನವರು ನ್ನುತ್ತಾರೆ. ಹೆಸರಿಗೆ ತಕ್ಕಂತೆ ಇವರದು ಒಂದು ್ಯಾಂಗ್. 20 ರಿಂದ 30 ಜನರ ಗ್ಯಾಂಗ್. ಇವರು ಾಮಾನ್ಯವಾಗಿ ಬರೀ ಕಾಂಕ್ರಿಟ್ ಮಾಡು ಹಾಕುವ ನ್ನಷ್ಟೇ ಮಾಡುತ್ತಾರೆ. ಕಟ್ಟಲಾಗುವ ಕಟ್ಟಡದ ಾಗಕ್ಕೆ ಈ ಗ್ಯಾಂಗ್‌ಗಳನ್ನು ಒಯ್ಯಲು ವಾಹನವನ್ನು ಂಟ್ರಾಕ್ಟುದಾರರೇ ವ್ಯವಸ್ಥೆ ಮಾಡುತ್ತಾರೆ. ಇದರಲ್ಲಿ ನ ಮಾತ್ರವಲ್ಲ. ಕಾಂಕ್ರೀಟು ಕಲಸುವ ಯಂತ್ರವೂ ರುತ್ತದೆ. ಜೊತೆಗೆ ಗ್ಯಾಂಗ್‌ನ ಹೆಂಗಸರು, ಡಸರು, ಮಕ್ಕಳು, ಸಲಕರಣೆಗಳು ಎಲ್ಲ....!

ಇಲ್ಲಿ ಕಾರ್ಮಿಕರ ಶ್ರಮ ಮಾತ್ರ ಸರಕಲ್ಲ. ಒಂದು ಗೆಯಲ್ಲಿ ಕಾರ್ಮಿಕರೇ ಸರಕು. ಸರಕಿನಂತೆ ಅವರ ಾಗಣೆ. ಹೀಗೆ ಸಾಗಣೆಯಾಗುವಾಗ ಒಮ್ಮೆ ವಾಹನದ ್ಯರು ಪಂಕ್ಚರ್ ಆಯ್ತು. ಎದ್ವಾತದ್ವಾ ಓಡಿದ ಡಿಯೊಳಗೆ ಇದ್ದ ಮಷಿನ್ ಉರುಳಿ ಪಾರ್ವತಮ್ಮನ ೀಲೆ ಒರಗಿತು. ಎದೆಯ ಮೂಳೆ ಲಟಕ್ ಅಂದವು. ನ್ನಿಗೆ ಪೆಟ್ಟು.

ಪರಿಹಾರವಾಗಿ ಪಾರ್ವತಮ್ಮನಿಗೆ 40 ಸಾವಿರ ಾಯಿ ಸಿಕ್ಕಿತಂತೆ. ಆಸ್ಪತ್ರೆಯ ಖರ್ಚುಗಳೇನು? ಾತು ಉಣ್ಣುವ ಸುಖವೇನು? ಇದೊಂದು ಆಕಸ್ಮಿಕ ಲ್ಲ. ಇಂಥದ್ದು ಈ ರಂಗದಲ್ಲಿ ಮಾಮೂಲು. ಂಕ್ರೀಟು ಕುಸಿಯುವುದು, ಕಾಂಪೌಂಡ್ ಸಿಯುವುದು, ಮಣ್ಣು ಕುಸಿದು ಬೀಳುವುದು,



ವಲಸೆ ಜನರ 'ಬಾತ್ ರೂಮ್'



ಎದೆಯ ಮೂಳೆ ಮುರಿದುಕೊಂಡಿರುವ ಪಾರ್ವತಮ್ಮ ಮಗಳೊಂದಿಗೆ

ಕಟ್ಟಡಗಳ ಮೇಲಿಂದ ಇಟ್ಟಿಗೆ ಇತ್ಯಾದಿ ಬೀಳುವುದು ಅಥವಾ ಕಾರ್ಮಿಕರೇ ಕಾಲು ಜಾರಿ ಬೀಳುವುದು ಇವೆಲ್ಲಾ ತೀರಾ ಮಾಮೂಲಿ. ಅಪಘಾತಗಳನ್ನು ತಡೆಯಲು, ಅಪಘಾತ ಆಗೇಬಿಟ್ಟರೆ ಹೆಚ್ಚು ಅನಾಹುತ, ಪೆಟ್ಟು ಆಗದಂತೆ ತಡೆಯಲು ವಹಿಸಬೇಕಾದ ಸುರಕ್ಷಾ ಕ್ರಮಗಳೇನು? ಈ ಬಗ್ಗೆ ಕಾನೂನು ಏನು ಹೇಳುತ್ತದೆ? ಕಾರ್ಮಿಕ ಇಲಾಖೆಯ ಅಧಿಕಾರಿಗಳು ಅವುಗಳ ಜಾರಿ ಬಗ್ಗೆ ಪರಿಶೀಲನೆ ನಡೆಸುತ್ತಾರೆಯೇ? ಊಹುಂ ಅದನ್ನೆಲ್ಲಾ ಕೇಳುವಂತೆಯೇ ಇಲ್ಲ.

ಸೊಂಟ ಮುರಿಯುತ್ತದೆ

ಕಟ್ಟಡ ಕಟ್ಟುವ ಕೆಲಸವೇ ಶ್ರಮದಾಯಕವಾದದ್ದು. ಅದರಲ್ಲೂ ಕಾಂಕ್ರಿಟ್ ಮಾಡಿ ಹಾಕುವ ಕೆಲಸ ಇನ್ನೂ ಶ್ರಮದಾಯಕ. ಬೇರೆ ಕೆಲಸ ಆದರೆ ಇವತ್ತು ಆಗುವಷ್ಟು ಮಾಡಿ ನಾಳೆ ಮುಂದುವರಿಸಬಹುದು. ಆದರೆ ಈ ಕೆಲಸ ಹಾಗಲ್ಲ. ಕೆಲಸಕ್ಕೆ ಕೈಹಚ್ಚಿದ ಮೇಲೆ ಅಂದು ಇರುವ ಕೆಲಸ ಮುಗಿಯಲೇಬೇಕು. ಸರಸರ ಮುಗಿಯಲೇಬೇಕು. ಕಾಂಕ್ರಿಟ್ ಕಲಸುವ ಯಂತ್ರ ಮರಳು, ಸಿಮೆಂಟ್, ಕಲ್ಲು ಕಲಸಿ ಸುರಿಯುತ್ತಾ ಹೋದಂತೆಲ್ಲಾ ಮಣ ಬಾರದ ಒಂದೊಂದೇ ಬಾಣಲೆ ಒಬ್ಬರ ಕೈಯಿಂದ ಮತ್ತೊಬ್ಬರಿಗೆ ಬದಲಾಯಿಸಿ ಮೇಲೆ ಮೇಲೆ ಏರಿ ಹೋಗಬೇಕು. ಉಸಿರು ಬಿಗಿಹಿಡಿದು ಮಾಡಬೇಕಾದ ಕೆಲಸ. ಇದು ಮನುಷ್ಯರೂ ಕೂಡಾ ಯಂತ್ರವಾಗುವ ಸಮಯ. ಸಂಜೆಯ ಹೊತ್ತಿಗೆ, ಮೈಯೆಲ್ಲಾ ಹಣ್ಣು. ಇಲ್ಲಿ ಕೆಲಸ ಮಾಡುವ ಹೆಣ್ಣಾಳಿಗೆ 100 ರೂ ಕೂಲಿಯಂತೆ. ಗಂಡಾಳಿಗೆ 150 ರೂ. ಕೂಲಿಯಂತೆ. ಬಗ್ಗಿಕೊಂಡು ನಿಂತು ಬಾಣಲೆಗಳಿಗೆ ಕಾಂಕ್ರಿಟನ್ನು ಸನಿಕೆಯಿಂದ ತೆಗೆದು ಹಾಕುವವರ ಸೊಂಟ ಮಾತ್ರ ಗಟ್ಟಿಯಾಗಿರಬೇಕು. ಇವರಿಗೆ 200 ರೂ. ಕೂಲಿಯಂತೆ. (ಇತ್ತೀಚಿನ ವರ್ಷಗಳಲ್ಲಿ ರೆಡಿಮಿಕ್ಸ್ ತಂತ್ರಜ್ಞಾನ ಬಂದು ಕಾರ್ಮಿಕರ ಇಂಥಾ ಕೆಲಸಕ್ಕೂ 'ಕಲ್ಲು' ಬೀಳುತ್ತಿದೆ. ಇರಲಿ, ಅದು ಬೇರೆ ಮಾತು)

ಬೆಂಗಳೂರಿನ ದುಬಾರಿ ಬದುಕಲ್ಲಿ ದಿನಕ್ಕೆ 100, 150, 200 ರೂ ದಿನಗೂಲಿಗೆ ಏನು ಬಂದೀತು. ಕಾಯಿಲೆ, ಕಸಾಲೆ ಅಂದರೆ ಈ ಜನ



ಪಾರ್ವತಮ್ಮನ ಮೇಲೆ ಎರಗಿಬಿದ್ದ ಕಾಂಕ್ರೀಟು ಕಲಸುವ ಯಂತ್ರ

ಹೋಗುವುದೆಲ್ಲಿಗೆ? ಹತ್ತಿರದಲ್ಲೆಲ್ಲೂ ಸರ್ಕಾರಿ ಆಸ್ಪತ್ರೆ ಇಲ್ಲ. ಸಂಜಯಗಾಂಧಿ ಆಸ್ಪತ್ರೆಗೆ ಸಿಗಬೇಕೆಂದರೆ ಏಳು ಕಿ.ಮೀ ಹೋಗು ಬರಬೇಕು. ಖಾಸಗಿ ವೈದ್ಯರೇ ಇವರ ಜಡ್ಡುಗಿಡ್ಡು ಎಲ್ಲದ್ದಕ್ಕೂ.

ಹೀಗೆ ಸಾಗುತ್ತಾ ಇರುವ ಕಟ್ಟಡ ಕಾರ್ಮಿಕರ ಬದುಕಲ್ಲಿ ಇದೀಗ ಸಂಘ ಹೆಜ್ಜೆ ಇಟ್ಟಿದೆ. ಈಗೀಗ ಅಷ್ಟಿಷ್ಟು ಕಾನೂನು, ಸೌಲಭ್ಯ, ಹಕ್ಕು ಎಂಬುದರ ಬಗ್ಗೆ ಶಬ್ದಗಳು ಕೇಳುತ್ತಿವೆ. ಅಲ್ಲೊಂದು ಇಲ್ಲೊಂದು 'ನ್ಯಾಯ' ಪಡೆದ ಘಟನೆಗಳನ್ನು ನೋಡಿ ಕಾರ್ಮಿಕರಲ್ಲಿ ಕೊಂಚ ವಿಶ್ವಾಸ ಚಿಗುರೊಡೆಯತೊಡಗಿದೆ. ಇಂಥ ಕಾರ್ಮಿಕರನ್ನು ಸಂಘಟಿಸಿ. ಶ್ರಮಕ್ಕೆ ತಕ್ಕ ಕೂಲಿಗಾಗಿ, ನ್ಯಾಯಕ್ಕಾಗಿ ಅಣಿನೆರೆಸಬೇಕಾಗಿದೆ.

ಆ ನಿಟ್ಟಿನಲ್ಲಿ ಸಿಐಟಿಯು ನೇತೃತ್ವದ ಕಟ್ಟಡ ಕಾರ್ಮಿಕರ ಸಂಘ ಶ್ರಮಿಸುತ್ತಿದೆ.

ಬೆಂಗಳೂರಿನ ನಾಗರೀಕರು ನಾವು ವಾಸಿಸುತ್ತಿರುವ ಈ ಬೆಂಗಳೂರು ಬೆಳೆಯುತ್ತಿರುವುದು ಹೇಗೆ, ಅದರ ಹಿಂದೆ ಯಾರ ಶ್ರಮವಿದೆ, ಎಷ್ಟು ಶ್ರಮವಿದೆ, ಯಾವ ಸೇತುವೆ ಕಟ್ಟುವಾಗ ಎಷ್ಟು ಜನ ಸತ್ತರು, ಯಾವ ಯಾವ ಕಟ್ಟಡ ಕಟ್ಟುವಾಗ ಯಾರ್ಯಾರು ಕೈಕಾಲು ಕಳೆದುಕೊಂಡರು, ಯಾರ ಬೆನ್ನ ಮೂಳೆ ಮುರಿಯಿತು ಎಂದು ಬರುವ ವರದಿಗಳನ್ನು ಗಮನಿಸುವಂತಾದರೆ ಈ ಕಾರ್ಮಿಕರ ನೋವಿಗೆ ಮಿಡಿಯುವಂತಾದರೆ ಕಾರ್ಮಿಕರ ನೋವಿಗೆ ಸ್ಪಂದಿಸದ ಸರ್ಕಾರಗಳ ಕಿವಿ ಹಿಂಡುವ ಕೆಲಸ ಸಲೀಸಾಗುತ್ತದೆ.

○

ಸಂಗೀತ - ಸಾರ್ಥಕ್ಯ

ಡಾ. ಗಂಗೂಬಾಯಿ ಹಾನಗಲ್‌ರ ಸ್ವರ ನಿಂತಿದೆ. ಗಂಗಜ್ಜಿ ಇನ್ನಿಲ್ಲ. ಆದರೂ ಅವರ ದನಿ, ಹಿಂದೂಸ್ತಾನಿ ಸಂಗೀತದ ಶ್ರೇಷ್ಠ ಗಾಯನದ ಬನಿ ಖನಿ ಬಹುಕಾಲ ಜನಮನದಲ್ಲಿ ಉಳಿಯಲಿದೆ.

'ಬೆಸ್ತರ' ತಾಯಿಯ ಮಗಳಾಗಿ ಹುಟ್ಟಿದ ಗಂಗೂಬಾಯಿಗೆ ಸಂಗೀತ ಸ್ಫೂರ್ತಿ ಹರಿದುಬಂದಿದ್ದು ತಾಯಿಯಿಂದಲೇ. ಬ್ರಾಹ್ಮಣ ತಂದೆಯ ಕಡೆಯಿಂದಲ್ಲ. ಎಷ್ಟೋ ತೊಡಕು ಎದುರಿಸಿ ಅವರು ಸಾಧನೆಯ ಶಿಖರವೇರಿದರು. ಬಿಸ್ಮಿಲ್ಲಾ ಖಾನ್ ರಂತಹವರ ಜೊತೆ ಜಾತಿ, ಧರ್ಮಗಳ ಗಡಿ ಮೀರಿದ ಮಾನವೀಯ ಸ್ನೇಹ ಅವರದ್ದು. ಬಿಸ್ಮಿಲ್ಲಾ ಖಾನ್‌ರನ್ನು ಸಹೋದರ ಎಂದೇ ಅವರು ಕರೆಯುತ್ತಿದ್ದರು. ಅವರದು ಸೌಹಾರ್ದಪರ ಮನಸ್ಸು, ಗಂಡು ದನಿ. ಆದರೂ ಮಾಧುರ್ಯ.



ನೇತ್ರದಾನ

97 ವರ್ಷದ ಮುದುಕಿ. ಈ ಹಂತ ಮುಟ್ಟಿಬಿಟ್ಟರೆ, ದೇಹದ ಅಂಗಾಂಗಗಳೆಲ್ಲಾ ಕೃಶವಾಗಿ ಸವೆದೇ ಹೋಗಿರುತ್ತದೆ ಎಂದು ಭಾವಿಸಲಾಗುತ್ತದೆ. ಉಹುಂ ಹಾಗೇನೂ ನಾವು ಭಾವಿಸಬೇಕಿಲ್ಲ. 100ಕ್ಕೆ ಹತ್ತಿರವಿದ್ದ ಈ ಅಜ್ಜಿಯ ಕಣ್ಣುಗಳು ಮುಂದೆ ಇಬ್ಬರು ಕುರುಡರ ಕಣ್ಣಿನ ಕತ್ತಲೆಯನ್ನು ದೂರ ಮಾಡಲಿವೆ. ಹೌದು ಡಾ. ಗಂಗೂಬಾಯಿ ಹಾನಗಲ್ ನೇತ್ರದಾನ ಮಾಡಿದ್ದಾರೆ.

ನೊಬೆಲ್ ಪ್ರಶಸ್ತಿ ವಿಜೇತರಾದ ಸರ್.ಸಿ.ವಿ.ರಾಮನ್ ವಿಶ್ವವಿದ್ಯಾಲಯದ ವಿಜ್ಞಾನ ವಿದ್ಯಾರ್ಥಿನಿಯೊಬ್ಬರಿಗೆ ಆಕೆ ಹೆಣ್ಣು ಎಂಬ ಕಾರಣಕ್ಕೆ ಸಂಶೋಧನೆಯ ಅವಕಾಶ ನೀಡಲು ಬಾರಿ ಯೋಚಿಸಿ, ಹಿಂದೆ ಮುಂದೆ ನೋಡಿದ್ದರಂತೆ. ಒಬ್ಬ ವಿಜ್ಞಾನಿಯಾಗಿ ಚಿಂತಿಸಿ ಆಧುನಿಕ ವಿಜ್ಞಾನಕ್ಕೆ ಹೊಸ ಕೊಡುಗೆ ನೀಡಿದವರು ರಾಮನ್. ಆದರೂ ವಿದ್ಯಾರ್ಥಿನಿಯ ವಿಚಾರದಲ್ಲಿ ಸಾಂಪ್ರದಾಯಿಕ ಚಿಂತನೆಗಳನ್ನು ಮೀರುವುದು ಕಷ್ಟವಾಯಿತು.

ಸಾಂಪ್ರದಾಯಿಕ ಸಂಗೀತ ಹಾಡಿದ ಗಂಗೂಬಾಯಿ ಸಾವಿನಲ್ಲಿ ಸಾಂಪ್ರದಾಯಿಕ ಯೋಚನೆಗೆ ಬಲಿಯಾಗದೇ 'ಆಧುನಿಕ' ವಾಗಿ ಯೋಚಿಸಿದ್ದು ದೊಡ್ಡ ವಿಚಾರ. ಇದು ಎಲ್ಲರಿಗೂ ಮಾದರಿಯಾಗಲಿ. ಬರೀ ಕಣ್ಣು ಮಾತ್ರ ಏಕೆ ದೇಹ ದಾನದ ಪರಂಪರೆಯೂ ಬೆಳೆಯಲಿ. ಬದುಕಿ ರುವವರ ಬಾಳಿಗೆ ಅಮೂಲ್ಯವಾಗ ಬಹುದಾದ ಅಂಗಾಂಗಗಳು ವ್ಯರ್ಥವಾಗಿ ಬೂದಿಯಾಗುವುದೋ, ಮಣ್ಣಾಗಿ ಹೋಗುವುದೋ ತಪ್ಪಲಿ.

ಜುಲೈ 21 ರಂದು ಇನ್ನಿಲ್ಲವಾದ ಪದ್ಮಭೂಷಣ ಗಂಗೂಬಾಯಿ ಹಾನಗಲ್‌ರಿಗೆ ಸಿಪಿಐ(ಎಂ) ರಾಜ್ಯ ಕಾರ್ಯಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ ನೇತೃತ್ವದ ಬಿ.ಐ.ಈಳಗೇರಾ, ಮಹೇಶ ಪತ್ತಾರ್‌ರವರು ಇದ್ದ ನಿಯೋಗ ಅಂತಿಮ ಗೌರವ ಸಲ್ಲಿಸಿತು.

ಸಂದರ್ಶನ

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಂಬುದು ಸರ್ಕಾರದ ಹತ್ತು ಯೋಜನೆಗಳ ಜೊತೆಯಲ್ಲಿ ಹನ್ನೊಂದನೆಯದಲ್ಲ. ಈ ಯೋಜನೆಯು ಶೋಷಿತ ಕೃಷಿ ಕೂಲಿಕಾರರು, ಬಡರೈತರುಗಳನ್ನು ಸಂಘಟಿಸಲು ಅನುಕೂಲವಾಗುವ ಒಂದು ಸಾಧನ. ಇದರ ರಾಜಕೀಯ ಮಹತ್ವ ದೊಡ್ಡದು ಎನ್ನುತ್ತಾರೆ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ.



ಉದ್ಯೋಗ ಖಾತ್ರಿ ಯೋಜನೆ

ಶೋಷಿತರನ್ನು ಸಂಘಟಿಸುವ ಸಾಧನ

ಜನಶಕ್ತಿ : ಪ್ರಸ್ತುತ ನಮ್ಮ ದೇಶದ ರಾಜ್ಯದ ಆರ್ಥಿಕ, ಸಾಮಾಜಿಕ ಸನ್ನಿವೇಶದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಪ್ರಾಮುಖ್ಯತೆ ಏನು?

ಮಾನ್ಪಡೆ :ದೇಶದಲ್ಲಿ ಬಡರೈತರ ಕೃಷಿ ಕೂಲಿಕಾರರ ಬದುಕು ಕಷ್ಟಕ್ಕೆ ಒಳಗಾಗಿದೆ. ಜಗತ್ತು ಎರಡು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಒಂದು ಆರ್ಥಿಕ ಬಿಕ್ಕಟ್ಟು.

ಆರ್ಥಿಕ ಬಿಕ್ಕಟ್ಟು : ಆರ್ಥಿಕ ಬಿಕ್ಕಟ್ಟಿನಿಂದಾಗಿ ಹಳ್ಳಿಗಳಿಂದ ಪಟ್ಟಣ, ನಗರಗಳಿಗೆ ವಲಸೆ ಹೋದಂತಹ ಕಾರ್ಮಿಕರಿಗೆ ಕೆಲಸ ಸಿಗುವುದು ನಿಂತುಹೋಗಿದೆ. ಕಟ್ಟಡ ನಿರ್ಮಾಣ ಲೇಔಟ್ ಅಭಿವೃದ್ಧಿಯ ಚಟುವಟಿಕೆಗಳು ಕುಸಿದಿವೆ. ಅಮೇರಿಕದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಕುಸಿದು ಉಂಟಾದ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ನಮ್ಮ ಬಡರೈತ ಕೂಲಿಕಾರರ ಬದುಕಿನ ಮೇಲೆ ಆಗುತ್ತಿದೆ. ಉದ್ಯೋಗ ಇಲ್ಲ. ವಲಸೆ ಬಂದಿದ್ದವರೆಲ್ಲಾ ವಾಪಸ್ ಹೋಗುತ್ತಿದ್ದಾರೆ. ಇಂತಹ ಒಂದು ದೊಡ್ಡ ನಿರುದ್ಯೋಗದ ಪರಿಸ್ಥಿತಿಯಲ್ಲಿ ಹಳ್ಳಿಗಳಲ್ಲಿ ಆತಂಕ ಮನೆ ಮಾಡಿದೆ.

ಕೃಷಿ ಬಿಕ್ಕಟ್ಟು : ಎರಡನೆಯದು ಕೃಷಿ ಬಿಕ್ಕಟ್ಟು. ರೈತರು ದಿವಾಳಿಯಾಗುವುದು ಹೆಚ್ಚುತ್ತಿದೆ. ಕೃಷಿಕರ ಆದಾಯ ಕುಸಿಯುತ್ತಿದೆ. ಅವರು ಕಷ್ಟದಲ್ಲಿದ್ದಾರೆ. ಕೇಂದ್ರ, ರಾಜ್ಯ ಸರ್ಕಾರಗಳು ಕೃಷಿ ಬಿಕ್ಕಟ್ಟನ್ನು ಎದುರಿಸಲು ಪರ್ಯಾಯವಾದ ಸಮರ್ಪಕ ಉದ್ಯೋಗ ಯೋಜನೆ ಕೈಗೊಂಡಿಲ್ಲ.

ಯಾಂತ್ರೀಕರಣ: ಮೂರನೆಯದು ಕೃಷಿಯಲ್ಲಿ ಯಾಂತ್ರೀಕರಣ, ತಂತ್ರಜ್ಞಾನ ಅಳವಡಿಕೆ, ಇದರಿಂದಾಗಿ ಕೃಷಿ ಕೂಲಿಕಾರರಿಗೆ ಬಡರೈತರಿಗೆ ಕೆಲಸ ದಿನಗಳು ಕಡಿಮೆ ಆಗಿವೆ. 1980 ರ ಸುಮಾರಿಗೆ 1 ವರ್ಷದಲ್ಲಿ 180 ದಿನ ಕೂಲಿ ಸಿಗುತ್ತಿದ್ದುದು ಈಗ 75 ದಿನ ಕೂಡ ಸಿಗುತ್ತಿಲ್ಲ. ಕೆಲಸ ಸಿಗದಿರುವುದು ಜನರ ಬದುಕನ್ನು ಕಷ್ಟಕ್ಕೆ ದೂಡಿದೆ. ಇಂಥ ಸಂದರ್ಭದಲ್ಲಿ 2004 ರಲ್ಲಿ ಯುಪಿಎ ಸರ್ಕಾರ ರಚನೆಯಾದಾಗ ಗ್ರಾಮೀಣ ಬಡವರ ರಕ್ಷಣೆಗಾಗಿ ಉದ್ಯೋಗಖಾತ್ರಿ ಯೋಜನೆ ಜಾರಿಗೊಳಿಸಲು ಎಡಪಕ್ಷಗಳು ಒತ್ತಡ ತಂದವು. ಈ ಕಾಯ್ದೆಯ ಅಂಗೀಕಾರ ಒಂದು ಪ್ರಮುಖ ಸಾಧನೆ.

ಭೂಮಾಲಿಕರ ಹಿಡಿತ

ನಾಲ್ಕನೆಯದು ಹಳ್ಳಿಗಳಲ್ಲಿ ಮತ್ತೊಂದು ಸಮಸ್ಯೆ ಪಾಳೇಗಾರಿ ಭೂಮಾಲಕರ ಹಿಡಿತ.



ನಮ್ಮ ಹಳ್ಳಿಗಳ ಮೇಲೆ ಭೂಮಾಲಕ ಜಮೀನ್ದಾರರು, ಬಡ್ಡಿ ವ್ಯವಹಾರ ಮಾಡುವವರು, ಗ್ರಾಮೀಣ ಗುತ್ತಿಗೆದಾರರು ಮತ್ತು ಈ ಮೂವರ ಜೊತೆಗಿರುವ ಗೂಂಡಾಗಳು ಇಂತಹವರ ಹಿಡಿತದಲ್ಲಿವೆ. ಇವರು ಗ್ರಾಮೀಣ ಬಡವರ ಮೇಲೆ ಸತತ ದೌರ್ಜನ್ಯ ನಡೆಸುತ್ತಾರೆ. ಇಂತಹವರ ಹಿಡಿತದಿಂದ ಹಳ್ಳಿಗಳನ್ನು ಮುಕ್ತಿಗೊಳಿಸುವುದಕ್ಕೆ ಪ್ರಮುಖವಾದ ಸಾಧನ ಎಂದರೆ ಉದ್ಯೋಗ ಖಾತ್ರಿ ಯೋಜನೆ. ಇದು ಇಂತಹ ಪ್ರಮುಖ ಸಾಧನ ಎಂಬುದನ್ನು ಕರ್ನಾಟಕದಲ್ಲಿ ಹಳ್ಳಿಗಳಲ್ಲಿ ಬಡರೈತ ಕೂಲಿಕಾರರಿಗೆ ಗೊತ್ತು ಮಾಡುವ ಕೆಲಸ ಜವಾಬ್ದಾರಿಯು ಕರ್ನಾಟಕದ ಜನ ಸಂಘಟನೆಗಳು ಹಾಗೂ ಎಡಚಳುವಳಿಯ ಮೇಲಿದೆ.

ಜನಶಕ್ತಿ : ದಿನಕ್ಕೆ 82 ರೂಪಾಯಿ ಕೂ… ಗರಿಷ್ಠವಾ? ಅಥವಾ ಹೆಚ್ಚು ಕೂಲಿ ಪಡೆ… ಅವಕಾಶವಿದೆಯಾ?

ಮಾನ್ಪಡೆ : ಕಾಯ್ದೆಯಲ್ಲಿ ದಿನವೊಂದಕ್ಕೆ ಕೂಲಿ 82 ಎಂದಿದ್ದರೂ ಸಹ ಅದೇ ಕಾಯ್… ದಿನಕ್ಕೆ 125 ರೂ.ವರೆಗೆ ಕೆಲಸದ ಆಧಾರದ… ಕೂಲಿ ಪಡೆಯಲು ಅವಕಾಶ ಆಗಿದೆ. 125… ಕೂಲಿಗೆ ಮಾಡಬೇಕಾದ ಕೆಲಸ ಎಂದರೆ… ಒಬ್ಬ ಆರೋಗ್ಯವಂತ ಹೆಣ್ಣು ಮಗಳು ಅಥವಾ… ಹುಡುಗ 4 ತಾಸುಗಳಲ್ಲಿ ಮಾಡಬಹುದು.

ಮೃದುವಾದ ಮಣ್ಣನ್ನು 58 ಘನ ಅಡಿ ಅ… 125 ರೂ. ಕೂಲಿ ಈಗ ಸಿಗುತ್ತದೆ. 2006… 2008 ರ ವರೆಗೆ 100 ಘನ ಅಡಿ ಅಗೆದ… ರೂಪಾಯಿ ಕೂಲಿ ಇತ್ತು. 2007 ರಲ್ಲಿ 74… ಏರಿತು. 2008 ಕ್ಕೆ 82 ರೂ ಆಯ್ತು. 2… 58 ಘನ ಅಡಿಗೆ ಅಗೆತಕ್ಕೆ 125 ರೂ. ಸಿಗುವಂತಾಗಿದೆ. ಈ ರೀತಿಯ ದೊಡ್ಡ ಕೂಲಿ ಆಗಿರುವುದು ಪ್ರಾಂತ ರೈತ ಸಂಘ, ಪ್ರಾಂತ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂ… ಮುಂತಾದ ಸಂಘಟನೆಗಳ ಹೋರಾಟದಿಂದ…

ಇಲ್ಲಿ ಇನ್ನೊಂದು ಅಂಶ ಗಮನಿಸಬ… ದಿನಗೂಲಿ ಆಧಾರದ ಮೇಲೆ ಕೆಲಸ ಮಾಡಿ… ನೋಡುತ್ತಾರೆ. ಸಾಮರ್ಥ್ಯಕ್ಕನುಸಾರವಾಗಿ… ಕೊಡದೇ ಹೆಚ್ಚಿನ ಕೆಲಸ ಕೊಡುವ ಪ್ರಯತ್ನ… ಇರುತ್ತವೆ. ಇದನ್ನು ಪ್ರತಿಭಟಿಸಬೇಕಾಗು… ಗುಲ್ಬರ್ಗಾ, ರಾಯಚೂರು, ಹೀಗೆ ಹಲ… ಜಿಲ್ಲೆಗಳಲ್ಲಿ ಹೋರಾಟ ಮಾಡಿ 125… ಕೂಲಿಯನ್ನು ಪಡೆದುಕೊಳ್ಳಲಾಗುತ್ತಿದೆ.

ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ಉ… ಕರ್ನಾಟಕದಲ್ಲಿ 25 ರೂ., ದಕ್ಷಿಣ ಕರ್ನಾ… 50 ರೂ. ಕೂಲಿ ಇದೆ. ಆದ್ದರಿಂದ ಉದ್ಯೋಗ… ಯೋಜನೆಯ ಕೂಲಿ ಕೆಲಸ ಪಡೆಯಲು… ಉತ್ತೇಜಿಸಿ ಸಂಘಟನೆಗಳು ಮನ… ಮಾಡಿಕೊಡಬೇಕು. ಇದು ನಮ್ಮ ಕರ್ತವ್ಯ. ಬ… ಕುಟುಂಬಕ್ಕೆ ಒಬ್ಬರಿಗೆ ದಿನಕ್ಕೆ 125 ರೂ.… ವರ್ಷದಲ್ಲಿ ಕನಿಷ್ಠ 100 ದಿನ ಕೆಲಸ ಸಿಕ್ಕರೆ… ಜೀವನದ ಆರ್ಥಿಕ ಮುಗ್ಗಟ್ಟಿನಿಂದ ಸ್ವಲ್ಪ… ಪಾರಾಗಲು ಸಾಧ್ಯ. ಬಡ್ಡಿವ್ಯವಹಾರ… ಕಪಿಮುಷ್ಠಿಯಿಂದ ಪಾರಾಗಲೂ ಸಾಧ್ಯವಿದೆ.

ಜನಶಕ್ತಿ : ಉದ್ಯೋಗ ಖಾತ್ರಿ ಯೋಜ… ರಾಜಕೀಯ ಮಹತ್ವವೇನು?

ಮಾನ್ಪಡೆ : ಇದರಲ್ಲಿ ಗಮನಿಸಬೇಕಾದ ಮತ್ತೊ… ಮಹತ್ವದ ಅಂಶವಿದೆ. ಗ್ರಾಮೀಣ ಪ್ರದೇಶದಲ್ಲಿ… ಸಂಬಂಧಗಳ ಬದಲಾವಣೆಗೆ ಸಹ ಈ ಯೋಜ… ಜಾರಿಯಿಂದ ಸಹಾಯವಾಗಲಿದೆ. ಗ್ರಾ… ಪ್ರದೇಶಗಳಲ್ಲಿ ಜಮೀನ್ದಾರರು, ಭೂಮಾಲಿಕರು… ಜಮೀನಿನಲ್ಲಿ ಶ್ರಮವಹಿಸಿ ದುಡಿಯುವುದ… ರೈತರಿಗೆ, ಕೂಲಿಕಾರರಿಗೆ ಕಡಿಮೆ ಕೂಲಿ… ಅವರಿಂದ ದುಡಿಸಿಕೊಂಡು…

ಕರೆದು ಕೆಲಸ ಕೊಡುವುದಿಲ್ಲ

"ಉದ್ಯೋಗ ಖಾತ್ರಿ ಯೋಜನೆಯ ಸ್ವರೂಪದ ಬಗೆಗೆ ಸಹ ಜನರಿಗೆ ತಿಳಿಸಿಕೊಡಬೇಕಾದ ಅಗತ್ಯವಿದೆ. ನಮ್ಮಹಳ್ಳಿಗಳಲ್ಲಿ ಸಾಮಾನ್ಯವಾಗಿ ಕೂಲಿಕಾರರು ಹಾಗೂ ಬಡರೈತರನ್ನು ಕಂಡು ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ನಮ್ಮ ಕೂಲಿಕಾರರು ಬಡರೈತರಿಗೆ ಇಂಥದ್ದು ಮಾತ್ರವೇ ಪರಿಚಯ. ಹೋಗಿ ನಮಗೆ ಕೆಲಸ ಬೇಕೆಂದು ಕೇಳಿ ಕೆಲಸ ಪಡೆದುಕೊಳ್ಳುವುದು ಅವರ ರೂಢಿಯಲ್ಲಿಲ್ಲ. ಆದರೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸವನ್ನು ಕರೆದು ಕೊಡುವುದಿಲ್ಲ. ಹಳ್ಳಿ ಜನ ನಮ್ಮನ್ನು ಕೆಲಸಕ್ಕೆ ಕರೀತಾ ಇಲ್ಲ ಎಂದು ಸುಮ್ಮನಿರುತ್ತಾರೆ. ಅದಲ್ಲದೆ ಸರ್ಕಾರಿ ಯಂತ್ರದ ಮೇಲೆ ಜನರಿಗೆ ವಿಶ್ವಾಸವಿಲ್ಲ. ವೇತನ ಸರಿಯಾಗಿ ಕೊಡುವುದಿಲ್ಲ ಎಂಬ ಭಾವನೆಯಿದೆ. ಆದರೆ ಜನ ಸಂಘಟನೆಗಳು ಉದ್ಯೋಗ ಖಾತ್ರಿ ಯೋಜನೆ ಸ್ವರೂಪವನ್ನು ವಿವರಿಸಿ ಅದರ ಜಾರಿಗಾಗಿ ಹೋರಾಟಕ್ಕೆ ಮುಂದಾಗಲು ಜನರನ್ನು ಸಜ್ಜುಗೊಳಿಸಬೇಕು.

ಸಂಘಟನೆಗಳ ಮುಖಂಡರಲ್ಲಿಯೂ ಈ ಬಗೆಗೆ ತಪ್ಪು ತಿಳುವಳಿಕೆ, ಇರಬಹುದು. ಅದನ್ನೂ ಕೂಡ ಹೋಗಲಾಡಿಸಬೇಕು.

ಬೇಡಿಕೆ ಇಲ್ಲವಾದರೆ ಕೆಲಸ ಕೊಡಬೇಕೆಂಬ ಬದ್ಧತೆಯೇನೂ ಆಡಳಿತಕ್ಕಿಲ್ಲ. ಹಾಗಾಗಿ ಉದ್ಯೋಗ ಖಾತ್ರಿ ಯೋಜನೆ ಜಾರಿ ಮಾಡಲು ನಾವು ಕೇಳಿಲ್ಲ. ನೊಂದಾವಣಿ ಮಾಡಿಸಿ, ಅರ್ಜಿ ಹಾಕಿಸಿಲ್ಲ ಎಂದರೆ ಅದೇ ಮೊದಲ ತಪ್ಪು.

ಹೀಗಾಗಿ ಕೆಲಸ ಬೇಕಾದವರ ನೊಂದಣಿ ಮಾಡಿಸಿ ಜಾಬ್‌ಕಾರ್ಡ್ ಕೊಡಿಸಿ, ಅರ್ಜಿ ಕೊಡಿಸಿ ಕೆಲಸ ಕೊಡಿ ಎಂಬ ಬೇಡಿಕೆ ಇಡಬೇಕು ಮತ್ತು ಬಡರೈತ ಕೂಲಿಕಾರರನ್ನು ಸಂಘಟಿಸಬೇಕು. ಇದು ಅತ್ಯಂತ ಪ್ರಮುಖವಾದ ಕೆಲಸ."

- ಮಾರುತಿ ಮಾನ್ಪಡೆ

ಸ್ವಸಹಾಯ ಸಂಘ ರಚಿಸಬೇಕು

50 ಕುಟುಂಬಗಳ ಉದ್ಯೋಗ ಖಾತ್ರಿ ಯೋಜನೆಯ ಕೂಲಿಕಾರರ ಸ್ವಸಹಾಯ ಸಂಘ ಮಾಡಿ ಅವರನ್ನು ಸಂಘಟಿಸಿ ಒಂದು ಗುಂಪಿನಲ್ಲಿ ಹೋಗಿ ಅರ್ಜಿ ನಂ.6 ನ್ನು 'ಕೆಲಸ ಕೊಡಿ' ಅಂತ ಪಂಚಾಯ್ತಿ ಕಛೇರಿಯಲ್ಲಿ ಸಲ್ಲಿಸಿ, ಅರ್ಜಿಯ ನಕಲು ಪ್ರತಿಗೆ ಸೀಲ್ ಹಾಕಿಸಿಕೊಂಡು ಹಿಂಬರಹ ಪಡೆಯುವುದು ಮುಖ್ಯ. ನಂತರ ಪ್ರತಿಯಾಗಿ ಫಾರಂ ನಂ.8 ಅಂದರೆ ಕಾಮಗಾರಿ ಅಂದಾಜು ಪತ್ರ ಹಾಗೂ 15 ದಿನದಲ್ಲಿ ಕೆಲಸದ ಆದೇಶ ಪತ್ರ (ವರ್ಕ್ ಆರ್ಡರ್) ಅನ್ನು ಅಧಿಕೃತವಾಗಿ ಕೊಡಬೇಕು. ಮತ್ತು ನಾವು ಪಡೆದುಕೊಳ್ಳಬೇಕು. ವರ್ಕ್ ಆರ್ಡರ್ ಮತ್ತು ಕೆಲಸ ಕೊಡದಿದ್ದರೆ ಹೋರಾಟ ಮಾಡಿ ನಿರುದ್ಯೋಗ ಭತ್ಯೆ ಪಡೆಯಬೇಕು.

ಆರಾಮವಾಗಿರುತ್ತಾರೆ.

ಉದ್ಯೋಗಖಾತ್ರಿ ಯೋಜನೆ ಜಾರಿಯಾಗಿ ಜಮೀನ್ದಾರರು ನೀಡುವ ಕೂಲಿಯನ್ನು



ಅವಲಂಬಿಸಿರುವ ಕೂಲಿಕಾರರು, ಬಡರೈತರು ಉದ್ಯೋಗ ಖಾತ್ರಿ ಯೋಜನೆಯ ಕೆಲಸಕ್ಕೆ ಬಂದರೆ ಅವರಿಗೆ ಹೆಚ್ಚು ಕೂಲಿ ದೊರೆಯುತ್ತದೆ. ತಮ್ಮ ಜಮೀನಿನಲ್ಲಿ ಕೆಲಸ ಮಾಡಬೇಕೆಂದಾದರೆ ಭೂಮಾಲೀಕರೂ ನ್ಯಾಯಬದ್ಧ ಕೂಲಿ ಕೊಡಬೇಕಾಗುತ್ತದೆ. ಮಾತ್ರವಲ್ಲ ಕೂಲಿಕಾರರು ದೊರೆಯದೇ ತಾವೇ ಮೈ ಬಗ್ಗಿಸಿ ದುಡಿಯಬೇಕಾಗುತ್ತದೆ. ತಾವು ತಮ್ಮ ಕುಟುಂಬ ದುಡಿದು ಬೇಸಾಯ ಮಾಡಬಹುದಾದುದಕ್ಕಿಂತ ಹೆಚ್ಚು ಜಮೀನಿದ್ದರೆ ಆ ಜಮೀನನ್ನು ಕೈಬದಲಾಯಿಸಬೇಕಾದ ಅನಿವಾರ್ಯತೆ ಬರುತ್ತದೆ.

ಉದ್ಯೋಗ ಖಾತ್ರಿ ಯೋಜನೆಗೆ ಜನರನ್ನು ಸಿದ್ಧ ಮಾಡುವುದು ಎಂದರೆ ವರ್ಗ ಸಂಘರ್ಷಕ್ಕೆ ಸಿದ್ಧತೆ ಮಾಡುವುದು ಎಂದೇ ಅರ್ಥ. ಬಹುಸಂಖ್ಯಾತ ಬಡವರು ಒಂದು ಕಡೆ ಆದರೆ ಹಿಡಿಯಷ್ಟಿರುವ ಶೋಷಕರು ಪ್ರತ್ಯೇಕಗೊಳ್ಳುತ್ತಾರೆ. ಜಮೀನ್ದಾರ - ಭೂಮಾಲಕ ವರ್ಗದ ಶೋಷಣೆಯ ಸ್ವರೂಪ ಎದ್ದು ತೋರುತ್ತದೆ. ಇದರಿಂದಾಗಿ ವರ್ಗ ಜಾಗೃತಿ ಮೂಡಿಬರಲು, ವರ್ಗ ಸಂಘರ್ಷ ತೀವ್ರಗೊಳ್ಳಲು ಸಹಾಯಕವಾಗುತ್ತದೆ.

ಜನಶಕ್ತಿ : ಈ ಯೋಜನೆ ರಾಜ್ಯ ಕರಾವಳಿ ಜಿಲ್ಲೆಗಳಲ್ಲಿ ಜಾರಿಯಾಗಿಲ್ಲ ಯಾಕೆ?

ಮಾನ್ಪಡೆ : ಹೌದು. 'ದಕ್ಷಿಣ ಕನ್ನಡ ಜಿಲ್ಲೆ ಹಾಗೂ ರಾಜ್ಯದ ಕರಾವಳಿಯಲ್ಲಿ ಈ ಯೋಜನೆ ಜಾರಿಯಾಗುವುದಿಲ್ಲ. ಯೋಜನೆಯಲ್ಲಿ ನೀಡುವ ಕೂಲಿಗಿಂತ ಇಲ್ಲಿ ಸಾಮಾನ್ಯವಾಗಿಯೇ ಸಿಗುವ ಕೂಲಿ ಜಾಸ್ತಿಯಿದೆ' ಎಂಬ ಭಾವನೆಗಳಿದ್ದವು. ಅದೇ ರೀತಿ 'ನೀರಾವರಿ ಪ್ರದೇಶದಲ್ಲಿ ಈ ಯೋಜನೆ ಜಾರಿಯಾಗುವುದು ಕಷ್ಟ. ಕೂಲಿಕಾರರು ಸಿಗುವುದಿಲ್ಲ' ಎನ್ನುತ್ತಿದ್ದರು.

ಆದರೆ ಒಂದು ಪ್ರಮುಖ ನೀರಾವರಿ ಪ್ರದೇಶವಾದ ಗಂಗಾವತಿಯಲ್ಲಿ ಯೋಜನೆ ಜಾರಿಯಾಗಿ ಸಾವಿರಾರು ಜನ ಉದ್ಯೋಗ ಪಡೆದಿದ್ದಾರೆ. ಅದೇ ರೀತಿಯಲ್ಲಿ ದಕ್ಷಿಣ ಕನ್ನಡ ಮತ್ತು ಕರಾವಳಿಯಲ್ಲಿಯೂ ಕೂಡ ಸಂಘಟನೆಗಳ ಪ್ರಯತ್ನಕ್ಕೆ ಉತ್ತಮ ಸ್ಪಂದನೆ ದೊರೆತಿದ್ದು, ಮತ್ತೊಂದು ನೀರಾವರಿ ಪ್ರದೇಶವಾದ ಮದ್ದೂರಿನಲ್ಲಿಯೂ ಕೂಲಿಕಾರರು ಬಡರೈತರಿಂದ ಉತ್ತಮ ಸ್ಪಂದನ ದೊರೆತಿದೆ. ಯೋಜನೆಯ ಜಾರಿಗಾಗಿ ಹೋರಾಟ ನಡೆದಿದೆ.

ಜನಶಕ್ತಿ : ಯೋಜನೆಯ ಜಾರಿ ಹಂತದಲ್ಲಿ ಕೂಲಿಕಾರರಿಗೆ ವಂಚನೆ ಆಗದಂತೆ ವಹಿಸಬೇಕಾದ ಪ್ರಮುಖ ಎಚ್ಚರಿಕೆಗಳೇನು?

ಮಾನ್ಪಡೆ: ಕೆಲಸ ಮಾಡಿದ ಕೂಲಿಕಾರರಿಗೆ ಕೂಲಿ ಪಾವತಿ 2 ರಿಂದ 3 ತಿಂಗಳು ವಿಳಂಬವಾಗುತ್ತಿದೆ. ವಿಳಂಬ ತಡೆಯಲು 1936 ರ ವೇತನ ಪಾವತಿ ಕಾಯ್ದೆಯನ್ನು ಬಳಸಬಹುದು. ಕಾರ್ಮಿಕ ಅಧಿಕಾರಿಗಳ ಮುಂದೆ ವೇತನ ಪಾವತಿ ಕಾಯ್ದೆ ಅಡಿಯಲ್ಲಿ ದೂರು ದಾಖಲಿಸಿದರೆ, ಕೊಡಬೇಕಾದ ಕೂಲಿಯ 10 ಪಟ್ಟು ದಂಡವನ್ನು ಹಾಕಲು ಅವಕಾಶವಿದೆ. ಸರ್ಕಾರ ಇದನ್ನು ಭರಿಸಬೇಕಾಗುತ್ತದೆ. ಇಂಥದ್ದನ್ನು ಬಳಸಿ ಲಿಟಿಗೇಷನ್ ಹಾಕಿದರೆ, ಕಾನೂನು ಹೋರಾಟಕ್ಕೆ ಮುಂದಾದರೆ ಕೂಲಿ ಪಾವತಿ ವಿಳಂಬ ತಪ್ಪಿಸಲು ಅನುಕೂಲವಾಗುತ್ತದೆ.

ಕರ್ನಾಟಕದಲ್ಲಿ ಏಪ್ರಿಲ್ 2009 ರಿಂದ ಮಾರ್ಚ್ 31 ರವರೆಗೆ ಕೃಷಿಯಲ್ಲಿ ಕೂಲಿ 119.41 ಪೈಸೆ ಎಂದು ರಾಜ್ಯ ಸರ್ಕಾರ ನಿಗದಿಮಾಡಿದೆ. ಆದರೆ ಇದೇ ಬಿಜೆಪಿ ಸರ್ಕಾರ ಉದ್ಯೋಗ ಖಾತ್ರಿ ಯೋಜನೆಯ ಕೂಲಿಕಾರರಿಗೆ ಮೋಸ ಮಾಡಿ 82 ರೂ. ಕೂಲಿ ಅಂತ ನಿಗದಿ ಮಾಡಿದೆ. ಇದು ಕೂಡ ತಾರತಮ್ಯ.

ಪ್ರಸ್ತುತ ಚಾಲ್ತಿಯಲ್ಲಿರುವ ದರಪಟ್ಟಿ ಬಳಸದೇ ಕಮ್ಮಿ ಕೂಲಿ. ಕೊಡುವ ಪ್ರಯತ್ನ ಮಾಡುವುದು ಮಾಮೂಲಿಯಾಗಿ ಕಂಡುಬರುತ್ತದೆ. 58 ಘನ ಅಡಿ ಮೃದುಮಣ್ಣು ಅಗೆದರೆ 125 ರೂ. ಕೂಲಿ ಕೊಡಬೇಕು. ಅಂದರೆ 82 ರೂಪಾಯಿಗೆ.... ಘನ ಅಡಿ ಅಗೆಯಬೇಕಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಆಗಿದೆಯೋ, ಇಲ್ಲವೋ ಅಂದಾಜು ಮಾಡಬೇಕು.

ಅಂಗವಿಕಲರು ಮತ್ತು 60 ವಯಸ್ಸು ದಾಟಿದ ವೃದ್ಧರಿಗೆ ಸಮಾನ ಕೂಲಿ, ಆದರೆ ಕೆಲಸದಲ್ಲಿ ಶೇ.25 ಭಾಗ ವಿನಾಯಿತಿ ಎಂಬ ಅವಕಾಶ ಕಾಯ್ದೆಯಲ್ಲೇ ಇದೆ. ಅದನ್ನು ಗಮನಿಸಬೇಕು.

ಜನಶಕ್ತಿ : ಯೋಜನೆ ಜಾರಿಯಾಗದಂತೆ ತಡೆಯುವ ಇತರ ಪ್ರಮುಖ ಶಕ್ತಿಗಳು ಯಾವುವು?

ಮಾನ್ಪಡೆ : ಗ್ರಾಮೀಣ ಪ್ರದೇಶದ ಚುನಾಯಿತ ಪ್ರತಿನಿಧಿಗಳು ಯೋಜನೆ ಮಾಡಲು ಅಡ್ಡಿಯಾಗಿದ್ದಾರೆ. ಗ್ರಾಮ ಪಂಚಾಯತ್ ಸದಸ್ಯರು, ಅಧ್ಯಕ್ಷ, ಉಪಾಧ್ಯಕ್ಷರು, ತಾಲ್ಲೂಕು ಪಂಚಾಯ್ತಿ ಸದಸ್ಯರು, ಜಿಲ್ಲಾ ಪಂಚಾಯ್ತಿ ಸದಸ್ಯರು. ಇವರೆಲ್ಲಾ ಯೋಜನೆ ಜಾರಿ ಮಾಡಲು ಅಡ್ಡಿ ಆರೋಪ ಮಾಡುತ್ತಿದ್ದಾರೆ. ವಿಶೇಷವಾಗಿ ಕೆಲಸವೇ ಜಾರಿಯಾಗದಂತೆ ನೋಡಿಕೊಳ್ಳುವುದು, ಕೆಲಸ ಕೊಟ್ಟರೆ, ಕೂಲಿ ಕೊಡದಂತೆ ನೋಡಿಕೊಳ್ಳುವುದು, ಅದಾಗದಿದ್ದರೆ ಕಡಿಮೆ ಕೂಲಿ ಕೊಡುವಂತೆ ಮಾಡುವುದು ಇತ್ಯಾದಿ ಮಾಡುತ್ತಾರೆ.

ಬಿಜೆಪಿ, ಕಾಂಗ್ರೆಸ್, ಜನತಾದಳಗಳ ಚುನಾಯಿತ ಪ್ರತಿನಿಧಿಗಳು ಭೂಮಾಲೀಕ ವರ್ಗದ ಹಿತಾಸಕ್ತಿ ಕಾಯುವವರಾದ್ದರಿಂದ ಉದ್ಯೋಗಖಾತ್ರಿ ಯೋಜನೆಯ ಕೂಲಿ ಹೆಚ್ಚಳದಿಂದ ತಮಗೇ ಹಾನಿ ಎಂದು ಭಾವಿಸಿ ಎಲ್ಲಾ ಹಂತಗಳಲ್ಲಿ ತಡೆ ಒಡ್ಡುತ್ತಾರೆ. ತಮ್ಮ ಕೃಷಿ ಕೆಲಸಗಳಿಗೆ ಕೂಲಿಕಾರರು ಸಿಗುವುದಿಲ್ಲವೆಂಬ ಯೋಚನೆಯೂ ಅವರಲ್ಲಿರುತ್ತದೆ. ಯೋಜನೆಗೆ ಮಂಜೂರಾತಿ ನೀಡಲು ಅಧಿಕಾರ ಇದ್ದರೂ ಪ್ರಮುಖವಾಗಿ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ, ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೊಣೆಗಾರರಾಗಿದ್ದಾರೆ. ಅವರೊಂದಿಗೆ ವ್ಯವಹರಿಸಿ ಕೆಲಸ ಪಡೆಯಲು ಒತ್ತಾಯ ತರಬೇಕು.

ಕೃಷಿ ಕೂಲಿಕಾರರು, ಬಡರೈತರು, ಒಟ್ಟಾರೆ ಗ್ರಾಮೀಣ ಬಡವರಿಗೆ ಕೂಲಿ ಕೆಲಸ ಕೊಡಿಸುವುದು ಮಾತ್ರವಲ್ಲ ಜನ ಚಳುವಳಿಯ ಕೆಲಸವಲ್ಲ. ಈ ಕೆಲಸಗಳಲ್ಲಿ ಸಿಗುವ ಜನರ ಸಂಪರ್ಕವನ್ನು ಪ್ರಾಂತ ರೈತ ಸಂಘ, ಪ್ರಾಂತ ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಟನೆ (ಜೆ.ಎಂ.ಎಸ್) ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಹೀಗೆ ಸೂಕ್ತ ಸಂಘಟನೆಗಳಿಗೆ ಸದಸ್ಯರನ್ನಾಗಿ ಮಾಡಿ ಅವರನ್ನು ಸಂಘಟಿತರನ್ನಾಗಿಸಿ, ವರ್ಗ ಜಾಗೃತಿ ಮೂಡಿಸಬೇಕು. ಅಷ್ಟು ಮಾತ್ರವಲ್ಲ, ಅವರನ್ನು ಸಮಾಜದ ಕ್ರಾಂತಿಕಾರಕ ಪರಿವರ್ತನೆಗಾಗಿ ಶ್ರಮಿಸುತ್ತಿರುವ ಸಿಪಿಐ(ಎಂ) ನಂತಹ ಕಮ್ಯೂನಿಸ್ಟ್ ಪಕ್ಷಕ್ಕೇ ಸಹ ಸೆಳೆಯುವುದು ಸಾಧ್ಯವಾಗಬೇಕು. ಆ ಮೂಲಕ ಪ್ರಜಾಪ್ರಭುತ್ವ ಆಂದೋಲನ ಬಲಪಡಿಸಬೇಕು. ❍

ಬೆಲೆಯೇರಿಕೆ

ಈ ಬೇಳೆ ಕಾಳುಗಳು ಸಕ್ಕರೆಯು ಬೆಲ್ಲ
ಉಳ್ಳವಣೆ ಮಾತ್ರವೇ ಬಡವರಿಗೆ ಅಲ್ಲ
ಅಕ್ಕಿಯೂ ಅವರಿಗೆ ವಿಪರೀತ ತುಟ್ಟಿ
ತಿನ್ನಿರೈ ಬಡಜನರೆ ಹುಳಿ ಉಪ್ಪು ಕುಟ್ಟಿ
- ವಿಡಂಬಾರಿ

ರೇಗಾ: ಹಣ ನುಂಗಲು ಉತ್ಸಾಹ


ಉದ್ಯೋಗ ಖಾತ್ರಿ ಯೋಜನೆಗಾಗಿ ರಾಜ್ಯದಲ್ಲಿ ಈ ವರ್ಷ 3000 ಕೋಟಿ ಖರ್ಚು ಸರ್ಕಾರ ನಿರ್ಧಾರ ಮಾಡಿದೆ. ಇತ್ತೀಚೆಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರೇಗಾ ಜಾರಿಗಾಗಿ ಸಭೆ ನಡೆದು, 5 ಎಕರೆ ಒಳಗಡೆ ಇರುವ ರೈತರ ಜಮೀನಿನಲ್ಲಿ ಜಲಸಂರಕ್ಷಣೆ, ಭೂಸಾರ ಸಂರಕ್ಷಣೆ, ಅರಣ್ಯ, ತೋಟಗಾರಿಕೆ, ವಿಶೇಷವಾಗಿ ಕೃಷಿ ಹೊಂದ ಕಾಮಗಾರಿಗಳು ಕೈಗೆತ್ತಿಕೊಳ್ಳಲಾಗಿದೆ. ರೈತರು ತಮ್ಮ ಹೊಲಗಳಲ್ಲಿ ತಾವೇ ಕೆಲಸ ಕೈಗೊಳ್ಳಲು ಅವಕಾಶ ನೀಡಿ ಅವರಿಗೆ 100 ದಿನಗಳ ಒಟ್ಟು ಕೂಲಿಯಂತೆ ಹೊಲದ ಮಾಲೀಕನ ಖಾತೆಗೆ ಹಾಕಲು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಹಲವಾರು ಕಡೆ ಗ್ರಾಮ ಪಂಚಾಯಿತಿ ಸದಸ್ಯರು ರೈತರು ಹೊಲಗಳಲ್ಲಿ ಕಡಿಮೆ ಕೂಲಿಗೆ ಕೆಲಸ ಮಾಡಿಸಿ ಹೆಚ್ಚಿನ ಹಣ ತಾವೇ ಪಡೆಯುತ್ತಿದ್ದಾರೆ.

ಬಹಳಷ್ಟು ಕಡೆಗಳಲ್ಲಿ, ಯಂತ್ರಗಳ ಮೂಲಕ ಕೆಲಸ ಮಾಡಿಸಿ ಮಧ್ಯವರ್ತಿಗಳು ಗುತ್ತಿಗೆ ಪಡೆದು ಕೆಲಸ ಮಾಡುವುದೆ ಇತ್ಯಾದಿ ನಡೆದಿದೆ.

ಜಿಲ್ಲಾ ಪಂಚಾಯ್ತಿ ಸದಸ್ಯರು, ಜಿಲ್ಲಾ ಪಂಚಾಯ್ತಿ ಕಾರ್ಯದರ್ಶಿ ಸಿಬ್ಬಂದಿ ತಾವೇ ಸುಳ್ಳು ದಾಖಲೆ ಸೃಷ್ಟಿಸಿ ಲಕ್ಷಾಂತರ ಹಣ ಪ್ರತಿ ಗ್ರಾಮ ಪಂಚಾಯತ್‌ಗಳಲ್ಲಿ ಲೂಟಿ ನಡೆದಿದೆ.

ಉದ್ಯೋಗ ಖಾತ್ರಿ ಯೋಜನೆಗಾಗಿ ರಾಜಸ್ಥಾನದಲ್ಲಿ 6000 ಕೋಟಿಗಳು, ಆಂಧ್ರದಲ್ಲಿ 4000 ಕೋಟಿಗಳು ಹಣ ಖರ್ಚು ಮಾಡಿದ್ದಾರೆ. ಹಾಗಿರುವಾಗ ನಮ್ಮ ರಾಜ್ಯದಲ್ಲಿ ಪೈಪೋಟಿಯಲ್ಲಿ ಹಣ ಖರ್ಚು ಮಾಡಬೇಕು ಎಂದು ಅಧಿಕಾರಿಗಳ ವಾದವಾಗಿದೆ.



ಆರ್ಥಿಕ ಬಿಕ್ಕಟ್ಟಿನ ಸುನಾಮಿ

ಭರಣಿ

ಅಮೇರಿಕಾದಲ್ಲಿ ಬ್ಯಾಂಕುಗಳು ತರಗಲೆಗಳಂತೆ ಕುಸಿಯುತ್ತಿರುವ ಸಂಗತಿಯನ್ನು ಕಳೆದವಾರ ಓದಿದ್ದೀರಿ. ಇದೀಗ ಅಲ್ಲಿನ ದೊಡ್ಡ ಬ್ಯಾಂಕುಗಳಲ್ಲೊಂದಾದ ಸಿಐಟಿ ಗ್ರೂಪ್ (CIT Group Inc) ಕುಸಿತದ ಹಂತ ತಲುಪಿದೆ. 101 ವರ್ಷಗಳಷ್ಟು ಹಳೆಯದಾದ ಈ ಬ್ಯಾಂಕಿನ ಕುಸಿತ, ಜಾಗತಿಕ ಬಿಕ್ಕಟ್ಟಿನ ತೀವ್ರತೆಯ ಇನ್ನೊಂದು ನಿದರ್ಶನ. ಡಿಸೆಂಬರ್ 2008ರಲ್ಲಿ ಅಮೇರಿಕಾ ಸರ್ಕಾರ ಈ ಬ್ಯಾಂಕಿಗೆ ಸುಮಾರು 11,600 ಕೋಟಿ ರೂಪಾಯಿಗಳ ನೆರವು ನೀಡಿತ್ತು. ಆದರೆ ಬ್ಯಾಂಕು ಚೇತರಿಸಿಕೊಳ್ಳಲೇ ಇಲ್ಲ. ಸದ್ಯ ಸುಮಾರು 15,000 ಕೋಟಿ ರೂಪಾಯಿಗಳ ನಷ್ಟದ ಹೊಡೆತದಿಂದ ತತ್ತರಿಸಿದೆ. ಕುಸಿತದಿಂದ ಪಾರಾಗಲು ಅದಕ್ಕೆ ತುರ್ತಾಗಿ ಸುಮಾರು 30,000 ಕೋಟಿ ರೂಪಾಯಿಗಳು ಬೇಕಾಗಿದೆ. ಅಮೇರಿಕಾ ಸರ್ಕಾರ ಈ ಹೊರೆಯನ್ನು ಭರಿಸಲು ತಯಾರಿಲ್ಲ.

ಜಗತ್ತಿನಾದ್ಯಂತ ಬ್ಯಾಂಕುಗಳು, ವಿಮಾ ಕಂಪನಿಗಳು, ವಾಹನ ತಯಾರಕರು, ವಿಮಾನ ಕಂಪನಿಗಳಲ್ಲದೆ ಮಾಧ್ಯಮ (ವೃತ್ತ ಪತ್ರಿಕೆಗಳು ಹಾಗೂ ಪಾಕ್ಷಿಕ) ಕಂಪನಿಗಳು ದಿವಾಳಿಯಾಗುತ್ತಿರುವ ಸುದ್ದಿ ಮಾಮೂಲಾಗಿ ಬಿಟ್ಟಿದೆ. ಐಸ್ ಲ್ಯಾಂಡಿ ನಂತಹ ಪುಟ್ಟ ದೇಶವೇ ದಿವಾಳಿಯಾದದ್ದು ದೊಡ್ಡ ಸುದ್ದಿಯಾಗಿತ್ತು. ಯಾವುದೋ ಮೂಲೆಯಲ್ಲಿರುವ ಜಪಾನಿನ ನಗರಸಭೆಯೊಂದು ದೂರದ ಅಮೇರಿಕಾದಲ್ಲಿ ಹೂಡಿದ್ದ ಹಣವನ್ನೆಲ್ಲಾ ಕಳೆದುಕೊಂಡು ದಿವಾಳಿಯ ಅಂಚಿಗೆ ತಲುಪಿದ್ದು ಸುದ್ದಿಯಾಗಿತ್ತು.

ಆದರೆ ಜನರ ಗಮನಕ್ಕೆ ಬಾರದ, ಯಾವುದೇ ರೀತಿಯಲ್ಲಿ ದೊಡ್ಡ ಸುದ್ದಿಯಾಗದ ನೂರಾರು ಸಂಗತಿಗಳಿವೆ.

ಸ್ಥಳೀಯ ಆಡಳಿತಗಳೇ ದಿವಾಳಿ

ಜರ್ಮನಿಯ ಸುಮಾರು 700 ಸ್ಥಳೀಯ ಆಡಳಿತ ಸಂಸ್ಥೆಗಳು (Local authorities) ಭಾರೀ ಪ್ರಮಾಣದಲ್ಲಿ ನಷ್ಟ ಅನುಭವಿಸಿವೆ. ಡಾಯಿಷ್ ಬ್ಯಾಂಕ್ (Deausthe Bank) ನಲ್ಲಿ ಹಣ ಹೂಡಿದ್ದ ಆಸ್ಟ್ರಿಯಾದ ರೈಲ್ವೆ (ಸರ್ಕಾರಿ ಒಡೆತನದ್ದು) ಸುಮಾರು 5000 ಕೋಟಿ ರೂಪಾಯಿಗಳ ನಷ್ಟ ಅನುಭವಿಸಿದೆ ಎಂದು 29.04.2009 ರಂದು ಹೇಳಿಕೆ ನೀಡಿತ್ತು. ಆಸ್ಟ್ರಿಯಾ ಬಿಟ್ಟರೆ ಬೇರೆಡೆ ಇದು ಸುದ್ದಿಯಾಗಲೇ ಇಲ್ಲ.



ಅಷ್ಟೇ ಅಲ್ಲ, ಇಟಲಿಯ ಸುಮಾರು 600 ಪುರಸಭೆಗಳು ಹೂಡಿದ್ದ ಹಣವನ್ನೆಲ್ಲಾ ಕಳೆದುಕೊಂಡು ಕಂಗಾಲಾಗಿವೆಯಂತೆ. ಇಟಲಿಯ ದೊಡ್ಡ ನಗರಗಳೊಂದಾದ ಮಿಲಾನ್‌ನಲ್ಲಿ ನಾಲ್ಕು ಜಾಗತಿಕ ಹಣಕಾಸು ಸಂಸ್ಥೆಗಳ ಮೇಲೆ ಪೋಲೀಸ್ ದಾಳಿ ನಡೆದು ಅವುಗಳ ಸುಮಾರು 3170 ಕೋಟಿ ರೂಪಾಯಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದು ನಡೆದಿದ್ದು 28.04.2009 ರಂದು. ಯೂನಿಯನ್ ಬ್ಯಾಂಕ್ ಆಫ್ ಸ್ವಿಜರ್‌ಲ್ಯಾಂಡ್ (UBS), ಜೆಪಿ ಮೋರ್ಗಾನ್ ಚೇಸ್ (JP Morgan Chase), ಡಾಯಿಷ್ ಬ್ಯಾಂಕ್ (Deustche Bank) ಮತ್ತು ಹೈಪೋ ರಿಯಲ್ ಎಸ್ಟೇಟ್ (Hypo Real Estate) ಗಳು ಸಾಧಾರಣ ಸಂಸ್ಥೆಗಳೇನಲ್ಲ. ಜಗತ್ತಿನ ದೊಡ್ಡ ಹಣಕಾಸು ಸಂಸ್ಥೆಗಳ ಪಟ್ಟಿಯಲ್ಲಿ ಇರುವಂತಹವು. ಇಂತಹ ಪ್ರತಿಷ್ಠಿತ ಸಂಸ್ಥೆಗಳ ಕಛೇರಿಗಳ ಮೇಲೆ ಪೋಲೀಸು ಧಾಳಿ ಹಾಗೂ ಆಸ್ತಿ ಜಪ್ತು! ನಂಬಲು ಸಾಧ್ಯವಿಲ್ಲ ಅಲ್ಲವೇ? ಆದರೂ ಇದು ವಾಸ್ತ 2005ರಲ್ಲಿ ಮಿಲಾನ್ ನಗರಸಭೆಯ ಹಣಕಾಸಿ ವ್ಯವಹಾರದಲ್ಲಿ ಕೈ ಹಾಕಿದ್ದ ಈ ಸಂಸ್ಥೆಗಳು 'ಹೇರ ಲಾಭ' ಗಳಿಸಿದವು. ಮಿಲಾನ್ ನಗರಸಭೆ ಮಾತ್ರ 1490 ಕೋಟಿ ರೂಪಾಯಿಗಳ ನಷ್ಟ ಭರಿಸಿದೆ ನಗರಸಭೆಗೆ ಪೊಳ್ಳು ಭರವಸೆ ಹಾಗೂ ಸುಳ್ಳು ಮಾಹಿ ನೀಡಿವೆ ಎಂದು ಆರೋಪಿಸಿ ಪೋಲೀಸ್ ಧಾ ನಡೆದಿದ್ದು !

ಸ್ವಪ್ನ ನಗರಿಯ ಧಾರುಣ ಸ್ಥಿತಿ

ಇತ್ತ ಅಮೇರಿಕಾದ 'ಸ್ವಪ್ನ ನಗರಿ' ಕ್ಯಾಲಿಫೋರ್ನಿಯಾದ ಸ್ಥಿತಿಯಂತೂ ಇನ್ನೂ ದಾರುಣವಾದದ್ದು. ರಾಜ್ಯದ ಬೊಕ್ಕಸ ಸಂಪೂರ್ಣ ಖಾಲಿಯಾಗಿ, ಸುಮಾರು 12 ಲಕ್ಷ ಕೋಟಿ (24 ಬಿಲಿಯ ಡಾಲರ್) ರೂಪಾಯಿಗಳ ಭಾರಿ ಕೊರತೆಯಿಂದ ತತ್ತರಿಸುತ್ತಿದೆ. ಇದೇ ಜುಲೈ 1 ರಂದು ಸಾವಿರಾರು ಗುತ್ತಿಗೆದಾರರಿಗೆ ಬಾಕಿ ಇದ್ದ ಹಣದ ಬದಲಿಗೆ 'ಸಾಲ ಪ್ರಮಾಣ ಪತ್ರ ಗಳನ್ನು (IOU) ನೀಡಿದೆ. ಆದರೆ ಹಣಕಾಸು ಸಂಸ್ಥೆಗಳು ಇಂತಹ ಸಾಲ ಪ್ರಮಾಣಪತ್ರಗಳನ್ನು ಮಾನ್ಯ ಮಾಡುವುದಿಲ್ಲ ಎಂದು ಬೆದರಿಕೆ ಹಾಕಿವೆ!

ಕ್ಯಾಲಿಫೋರ್ನಿಯಾ ಜೈಲುಗಳಲ್ಲಿ 1,70,000 ದಷ್ಟು ಖೈದಿಗಳಿದ್ದಾರೆ. ಇವರಿಗಾಗಿ ವರ್ಷಕ್ಕೆ ಸುಮಾರು 65,000 ಕೋಟಿ ರೂಪಾಯಿಗಳ ವೆಚ್ಚ ಭರಿಸಬೇಕಾಗಿದೆ. ಇದು ರಾಜ್ಯದ ಎಲ್ಲಾ ವಿದ್ಯಾಲಯಗಳು ಹಾಗೂ ವಿಶ್ವವಿದ್ಯಾಲಯಗಳ ಒಟ್ಟಾರೆ ಖರ್ಚಿಗಿಂತಲೂ ಹೆಚ್ಚು!

ಸಾಲದ ಕೂಪದಿಂದ ಪಾರಾಗುವ ಮಾರ್ಗಗಳೇ ಇಲ್ಲದ ಪರಿಸ್ಥಿತಿಯಲ್ಲಿ ಅಲ್ಲಿನ ಸರ್ಕಾರ ಸಾರ್ವಜನಿಕ ಉದ್ಯಾನವನಗಳನ್ನು ಮುಚ್ಚುವ, ಬಡ ಜನರ ಶಿಕ್ಷಣ ಹಾಗೂ ಆರೋಗ್ಯದ ವೆಚ್ಚಗಳನ್ನು ಭಾರೀ ಪ್ರಮಾಣದಲ್ಲಿ ಕಡಿತಗೊಳಿಸುವ, ಸರ್ಕಾರಿ ಸಿಬ್ಬಂದಿಗಳನ್ನು ಮನೆಗೆ ಕಳುಹಿಸುವ, ಸರ್ಕಾರಿ ಕಾರ್ಯನಿರ್ವಹಣೆಯನ್ನು ಕುಂಠಿತಗೊಳಿಸುವ ಗತ್ಯಂತರಕ್ಕೆ ಒಳಗಾಗಿದೆ. ಅಷ್ಟೇಕೆ, ಜೈಲುಗಳನ್ನು ನಿರ್ವಹಿಸುವ ವೆಚ್ಚವನ್ನು ಕಡಿಮೆ ಮಾಡಲೋಸುಗ ಸಾವಿರಾರು ಖೈದಿಗಳನ್ನು ಬಿಡುಗಡೆ ಮಾಡುವ ಮಟ್ಟಕ್ಕೂ ಬಂದಿದೆ!

ಯಾರೂ ಬೇಕಾದರೂ ಸಂಪತ್ತಿನ ಸಾಮ್ರಾಜ್ಯ ಕಟ್ಟುವ ಕನಸನ್ನು ಕಾಣಬಹುದಾದ, ಅಪರಿಮಿತ ಅವಕಾಶಗಳ ಸುವರ್ಣ ಪ್ರದೇಶವಾದ 'ಕ್ಯಾಲಿಫೋರ್ನಿಯಾ' ದ ಈ ದುರಂತ ಕಥೆ ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಒಂದು ಅತ್ಯಂತ ಜ್ವಲಂತ ಉದಾಹರಣೆ. 'ಸ್ವಪ್ನನಗರಿ' ಕುಸಿದ ಆಶಾಗೋಪುರಗಳ ಬೆಂಗಾಡಾಗಿ ಬದಲಾಗಿರುವುದು ಬಂಡವಾಳಶಾಹಿಯ ನ ಲಾಭ ಪಿಪಾಸುತನದ ಒಂದು ಪ್ರತೀಕ.

ಮತ್ತೆ ನೈತಿಕ ಪೊಲೀಸ್‌ಗಿರಿ....

ಪುಟ 5 ರಿಂದ

ಕರೆದೊಯ್ಯುತ್ತಾರೆ. ಎನ್.ಎಸ್.ಜಿ. ಕಮಾಂಡೊ ರಾಥೋಡ್ ಮತ್ತವರ ಸೊಸೆಯ ಮುಸ್ಲಿಂ ಸ್ನೇಹಿತೆಗೆ ತೀವ್ರವಾಗಿ ಹಲ್ಲೆ ನಡೆಸಲಾಗುತ್ತದೆ. ಇವರ ಹೊಡೆತವನ್ನು ತಾಳಲಾರದೆ ಆಟೋದಿಂದ ಜಿಗಿಯುವ ಎನ್.ಎಸ್.ಜಿ. ಕಮಾಂಡೊ ಹಿಂದಿನಿಂದ ಬರುತ್ತಿದ್ದ ಅಪರಿಚಿತ ವಾಹನದ ಅಡಿಗೆ ಬಿದ್ದು ಮರಣ ಹೊಂದುತ್ತಾನೆ. ಮತಾಂಧ ನೈತಿಕ ಪೊಲೀಸರು ಅಲ್ಲಿಂದ ಕಾಲು ಕೀಳುತ್ತಾರೆ. ಇನ್ನೊಂದು ಮೂಲದ ಪ್ರಕಾರ ರಾಥೋಡ್‌ರವರು ಎನ್.ಎಸ್.ಜಿ. ಕಮಾಂಡೊ ಎಂದು ತಿಳಿದ ಮುಸ್ಲಿಂ ನೈತಿಕ ಪೊಲೀಸರು ಪ್ರಕರಣ ಗಂಭೀರವಾಗಬಹುದೆಂಬ ಭಯದಿಂದ ತಮ್ಮದೇ ವಾಹನದ ಅಡಿಗೆ ಹಾಕಿ ಕೊಲೆ ನಡೆಸಿದ್ದಾರೆ ಎಂಬ ಪ್ರಬಲ ಆರೋಪವು ಕೇಳಿಬರುತ್ತಿದೆ. ಈಗ ಆರು ಮುಸ್ಲಿಂ ನೈತಿಕ ಪೊಲೀಸರು ಮೂಡಬಿದ್ರೆ ಪೊಲೀಸರ ವಶವಾಗಿದ್ದಾರೆ. ಅಂದಹಾಗೆ ಈಗ ಪೊಲೀಸರು ಬಂಧಿಸಿರುವ ಆರೋಪಿ ನೈತಿಕ ಪೊಲೀಸರು ಕೆಲ ಬುದ್ಧಿಜೀವಿ, ಪತ್ರಕರ್ತರ ದೃಷ್ಟಿಯಲ್ಲಿ ಜಾತ್ಯಾತೀತ, ಪ್ರಗತಿಪರ ಮುಸ್ಲಿಂ ಸಂಘಟನೆಯಾಗಿರುವ ಕೆ.ಎಫ್.ಡಿ ಯ ಸದಸ್ಯರು.

ಜನರ ವಿವೇಕ -ಮತಾಂಧರ ಅವಿವೇಕ

ಮೊನ್ನೆ ಮಂಗಳೂರಿನ ಪಾಂಡೇಶ್ವರ ಬಳಿ ರಾತ್ರಿಹೊತ್ತು ಶಿವನ ಮೂರ್ತಿಯನ್ನು ಭಗ್ನಗೊಳಿಸಲಾಗುತ್ತದೆ. ಹಿಂದುತ್ವವಾದಿಗಳು ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸಲು ಯತ್ನಿಸಿದರೂ ಜನ ಉದ್ರೇಕಗೊಳ್ಳದೆ ಪರಿಸ್ಥಿತಿ ಹತೋಟಿ ಮೀರಲಿಲ್ಲ. ಅದೇ ದಿನ ರಾತ್ರಿ ಹತ್ತಿರದ ಮಸೀದಿಯೊಂದಕ್ಕೆ ಬೈಕ್‌ನಲ್ಲಿ ಬಂದ ಅಪರಿಚಿತರಿಬ್ಬರು ಹಂದಿ ಮಾಂಸವನ್ನು ಎಸೆದು ಶರವೇಗದಲ್ಲಿ ಪರಾರಿಯಾಗುತ್ತಾರೆ. ಮಸೀದಿಯ ಆಡಳಿತ ಮಂಡಳಿ ಮತ್ತು ಕೆಲ ಮುಸ್ಲಿಂ ಮುಖಂಡರ ಸಂಯಮದ ವರ್ತನೆಯಿಂದಾಗಿ ಪರಿಸ್ಥಿತಿ ಬಿಗಡಾಯಿಸದೆ ದುಷ್ಕರ್ಮಿಗಳ ಯತ್ನ ವಿಫಲವಾಗುತ್ತದೆ. ಮುಸ್ಲಿಂ ಮುಖಂಡರ ಜವಾಬ್ದಾರಿಯುತ ಸಹಕಾರದಿಂದ ತಕ್ಷಣವೇ ಹಂದಿ ಮಾಂಸ ತೆರವುಗೊಳಿಸಲು ಅವಕಾಶವಾದ್ದರಿಂದ ಕೋಮುರಕ್ಕಸರು ಕೈಕೈ ಹಿಸುಕಿಕೊಳ್ಳುವಂತಾಯಿತು.

ಹೇಯ ಗೂಂಡಾಗಿರಿ

ಅದರ ಮರುದಿವಸವೇ ಕೆಲ ಮಾಧ್ಯಮ ಮಿತ್ರರಿಗೆ ರಾಮಸೇನೆಯ ಕಾರ್ಯಕರ್ತರಿಂದ ಫೋನ್ ಕರೆ ಬರುತ್ತದೆ. ತಕ್ಷಣ ಜ್ಯೋತಿ ಸರ್ಕಲ್‌ಗೆ ಬನ್ನಿ, ಬಿಸಿ ಬಿಸಿ ಸುದ್ದಿ ತಮಗಾಗಿ ಕಾಯುತ್ತಿದೆ ಎಂಬ ಸಂದೇಶ ತಲುಪುತ್ತದೆ. ಕುತೂಹಲದಿಂದ ಸ್ಥಳಕ್ಕೆ ತೆರಳಿದ ಪತ್ರಕರ್ತರಿಗೆ ನಿರಾಶೆಯೇನೂ ಆಗುವುದಿಲ್ಲ. ಬಂಟ್ವಾಳ ಕಡೆಯಿಂದ ಬರುವ ಖಾಸಗಿ ಬಸ್ಸಿನಲ್ಲಿ ಇದ್ದ ಇಬ್ಬರು ಮುಸ್ಲಿಂ ವಿದ್ಯಾರ್ಥಿಗಳಿಗೆ ಹತ್ತಕ್ಕೂ ಹೆಚ್ಚು ಮುತಾಲಿಕನ ನೈತಿಕ ಪೊಲೀಸರು 'ದೇವಸ್ಥಾನಕ್ಕೆ ಕಲ್ಲು ತೂರುತ್ತೀರಾ, ಹೆಣ್ಣುಮಕ್ಕಳಿಗೆ ಚುಡಾಯಿಸುತ್ತೀರಾ' ಎಂಬ ಸುಳ್ಳು ನೆಪವನ್ನೊಡ್ಡಿ ಸಾರ್ವಜನಿಕವಾಗಿ ಹಲ್ಲೆ ನಡೆಸುತ್ತಾರೆ. ಪೆಟ್ಟುತಿಂದ ಮುಸ್ಲಿಂ ವಿದ್ಯಾರ್ಥಿಗಳು ಆಸ್ಪತ್ರೆಗೆ ದಾಖಲಾಗುತ್ತಾರೆ. ಅವರನ್ನು ಹಿಂಬಾಗಿಲಿನಿಂದ ಕರೆದೊಯ್ದು ಹೇಳಿಕೆ ಪಡೆಯುವ ಪೊಲೀಸರು ರಾಮಸೇನೆಯ ಕಾರ್ಯಕರ್ತರಿಗೆ ಜಾಮೀನು ದೊರಕುವ ಸಣ್ಣಪುಟ್ಟ ಸೆಕ್ಷನ್‌ಗಳಡಿ ಕೇಸು ದಾಖಲಿಸಿ ಕೈ ತೊಳೆದು ಕೊಳ್ಳುತ್ತಾರೆ. ನೈತಿಕ ಪೊಲೀಸರು ಮಂಗಳೂರಿನ ಬೀದಿಗಳಲ್ಲಿ ತಮ್ಮ ಸಂಸ್ಕೃತಿಯ ಪಾಠವನ್ನು ಮುಂದುವರಿಸಲು ಹೊಸ ಮಿಕಗಳಿಗಾಗಿ ಹುಡುಕಾಟವನ್ನು ಮುಂದುವರಿಸುತ್ತಿದ್ದಾರೆ.

ಮಂಗಳೂರಿನಲ್ಲಿ ಶಾಶ್ವತ ಶಾಂತಿ ಎಂಬುದು ನಿಜಕ್ಕೂ ಎಂದಾದರು ನೆಲೆಗೊಳ್ಳುತ್ತದಾ? ಉತ್ತರ ಹೇಳುವವರು ಯಾರು? ಇದು ಮಿಲಿಯನ್ ಡಾಲರ್ ಪ್ರಶ್ನೆ.

ಜಿ8-ಜಿ5 ಶೃಂಗಸಭೆಯಲ್ಲಿ ಭಾರತದ ಪ್ರಧಾನ ಮಂತ್ರಿಗಳು ಭಾಗವಹಿಸುವಂತಾಗಿರುವುದೇ ಒಂದು ಮಹಾ ಸಾಧನೆ ಎಂಬಂತೆ ಅಬ್ಬರದ ಪ್ರಚಾರ ನಡೆಯಿತು. ಆದರೆ ದುರದೃಷ್ಟವಶಾತ್, ಭಾರತದ ಮಟ್ಟಿಗಂತೂ ಅಲ್ಲಿ ಪ್ರಕಟಗೊಂಡ ಕಥೆಯೇ ಬೇರೆ. ಭಾರತ-ಅಮೆರಿಕಾ ಪರಮಾಣು ವ್ಯವಹಾರದ ಪರಿಣಾಮವಾಗಿ ಭಾರತದ ಸಾರ್ವಭೌಮತೆಯನ್ನು ಬಿಟ್ಟು ಕೊಡಬೇಕಾಗುತ್ತದೆ ಎಂಬ ಸಿಪಿಐ(ಎಂ) ಮತ್ತು ಎಡಪಕ್ಷಗಳು ವ್ಯಕ್ತಪಡಿಸುತ್ತಾ ಬಂದಿರುವ ಸಂದೇಹಗಳೆಲ್ಲಾ ಪ್ರತಿ ಹೆಜ್ಜೆಯಲ್ಲೂ ಮತ್ತೆ-ಮತ್ತೆ ದೃಢಗೊಳ್ಳುತ್ತಿವೆ.


G8 ರ ಶರತ್ತುಗಳು ದೇಶದ ಸಾರ್ವಭೌಮತೆಯ ಪ್ರಶ್ನೆ

ಇಟಲಿಯ ಅಕ್ವಿಲಾದಲ್ಲಿ ಇತ್ತೀಚೆಗೆ ಜಗತ್ತಿನ ಎಂಟು ಶ್ರೀಮಂತ ದೇಶಗಳ ಕೂಟ ಜಿ-8ರ ಮುಖಂಡರ ಶೃಂಗ ಸಭೆ ನಡೆಯಿತು. ಭಾರತ, ಚೀನಾ, ಬ್ರೆಜಿಲ್, ದಕ್ಷಿಣ ಆಫ್ರಿಕಾದಂತಹ ಹೊಸ 'ಆರ್ಥಿಕ ಶಕ್ತಿ'ಗಳಾಗಿ ಮೂಡಿ ಬರುತ್ತಿರುವ ದೇಶಗಳ ಮುಖಂಡರನ್ನೂ ಶೃಂಗ ಸಭೆಯಲ್ಲಿ ಆಹ್ವಾನಿಸಲಾಗಿತ್ತು. ಈ ವಿಸ್ತೃತ ಶೃಂಗಸಭೆಯಲ್ಲಿ ಭಾರತದ ಪ್ರಧಾನ ಮಂತ್ರಿಗಳು ಭಾಗವಹಿಸುವಂತಾಗಿರುವುದೇ ಒಂದು ಮಹಾ ಸಾಧನೆ ಎಂಬಂತೆ ಅಬ್ಬರದ ಪ್ರಚಾರ ನಡೆಯಿತು. ಆದರೆ ದುರದೃಷ್ಟವಶಾತ್, ಭಾರತದ ಮಟ್ಟಿಗಂತೂ ಅಲ್ಲಿ ಪ್ರಕಟಗೊಂಡ ಕಥೆಯೇ ಬೇರೆ. ವಾಸ್ತವ ಜಗತ್ತಿನ ರುಚಿ ನಮ್ಮ ಪ್ರಧಾನ ಮಂತ್ರಿಗಳಿಗೆ ಸಿಕ್ಕಿತು. ಅಲ್ಲಿ ಉನ್ನತ ಪೀಠಗಳಲ್ಲಿ ಒಂದು ಶಾಶ್ವತ ಸ್ಥಾನದ ಆಕಾಂಕ್ಷೆ ಇನ್ನೂ ಬಹು ದೂರದ ಕನಸು ಎಂದು ಅವರ ಅರಿವಿಗೆ ಬಂದಿರಬೇಕು.

ಅಲ್ಲಿ ಮೂರು ಪ್ರಮುಖ ಪ್ರಶ್ನೆಗಳ ಮೇಲೆ ಚರ್ಚೆ ನಡೆಯಿತು. ಈ ಮೂರೂ ವಿಷಯಗಳಲ್ಲೂ ವಾಸ್ತವತೆ ಬೇರೆಯೇ ಆಗಿತ್ತು.

ಎಡಪಕ್ಷಗಳ ಸಂದೇಹ ನಿಜವಾಗುತ್ತಿದೆ

ಭಾರತವನ್ನು ಅಲ್ಲಾಡಿಸಿ ಬಿಟ್ಟಿರುವ ಮೊದಲ ವಿಷಯವೆಂದರೆ ಪರಮಾಣು ತಂತ್ರಜ್ಞಾನದ ವರ್ಗಾವಣೆ ಕುರಿತಂತೆ ಜಿ-8 ಕೂಟದ ನಿರ್ಣಯ. ಜಗತ್ತು ಅಪಾಯಕಾರಿ ಅಣ್ವಸ್ತ್ರಗಳಿಂದ ಮುಕ್ತವಾಗಬೇಕು. ಹೊಣೆಗಾರಿಕೆಯಿಲ್ಲದ ದೇಶಗಳಿಗೆ ಪರಮಾಣು ತಂತ್ರಜ್ಞಾನ ಸಿಗಬಾರದು ಎಂಬ ವಿಚಾರಗಳು ಸರಿಯಾದದ್ದೆ. ಈ ಆಶಯಕ್ಕೆ ಭಾರತವೂ ಬದ್ಧವಾಗಿದೆ. ಆದರೆ ಜಿ.8 ರಾಷ್ಟ್ರಗಳು ಹೇಳುತ್ತಿರುವುದು-ಆ ದೇಶಗಳು ಮಾಡುತ್ತಿರುವುದು ಬೇರೆಯದೇ. ಜಗತ್ತನ್ನು ಹತ್ತಾರು ಬಾರಿ ನಾಶ ಮಾಡುವಷ್ಟು ಅಣ್ವಸ್ತ್ರಗಳನ್ನು ಈ ದೇಶಗಳು ಪೇರಿಸಿಟ್ಟುಕೊಂಡಿವೆ. ಆ ಅಣ್ವಸ್ತ್ರಗಳನ್ನು ನಾಶ ಮಾಡುವ ಬಗೆಗೆ ಅವು ಏನೊಂದು ದೃಢವಾದ ಕ್ರಮಕ್ಕೆ ಮುಂದಾಗಲು ತಯಾರಿಲ್ಲ. ಆದರೆ ಭಾರತ ಮತ್ತು ಭಾರತದಂತಹ ದೇಶಗಳು ಪರಮಾಣು ತಂತ್ರಜ್ಞಾನವನ್ನು ಬೇರೆ ದೇಶಗಳೊಂದಿಗೆ ಹಂಚಿಕೊಳ್ಳುವುದಿಲ್ಲ. ಪರಮಾಣು ತಂತ್ರಜ್ಞಾನವನ್ನು ಬೇರೆಯವರಿಗೆ ಹೇಳಿಕೊಡುವುದಿಲ್ಲ ಎಂದು ಒಪ್ಪಬೇಕು ಹಾಗೂ ಅದಕ್ಕಾಗಿ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ ಅಥವಾ ಎನ್‌ಪಿಟಿ ಎಂಬ ಸಂಧಿಗೆ ಸಹಿ ಹಾಕಬೇಕೆಂದು ಒತ್ತಾಯಿಸುತ್ತಿವೆ.



ಅಣ್ವಸ್ತ್ರಗಳನ್ನು ಪೇರಿಸಿಟ್ಟುಕೊಂಡಿರುವ ದೇಶಗಳು ಆ ಅಣ್ವಸ್ತ್ರಗಳನ್ನು ಹಂತಹಂತವಾಗಿ ತಾವು ನಾಶ ಮಾಡಲು ಕ್ರಮವಹಿಸಲು ಮುಂದಾಗುವವರೆಗೆ ಭಾರತವು ಅಣ್ವಸ್ತ್ರ ನಿಷೇಧ ಒಪ್ಪಂದಕ್ಕೆ ಸಹಿ ಹಾಕುವುದಿಲ್ಲ ಎಂಬ ದೃಢವಾದ ನಿಲುವು ತೆಗೆದುಕೊಳ್ಳುತ್ತಾ ಬಂದಿದೆ ಮತ್ತು ಈ ಧೋರಣೆಯು ನ್ಯಾಯಬದ್ಧವಾದದ್ದೇ ಆಗಿದೆ. ಭಾರತದಂತಹ ಪರಮಾಣು ಪ್ರಸರಣ ನಿರೋಧ ಸಂಧಿ(ಎನ್‌ಪಿಟಿ)ಗೆ ಸಹಿ ಹಾಕದ ದೇಶಗಳಿಗೆ ಪರಮಾಣು ಪುಷ್ಟೀಕರಣ ಮತ್ತು ಮರು ಸಂಸ್ಕರಣ(ಇಎನ್‌ಆರ್) ತಂತ್ರಜ್ಞಾನಗಳು ಮತ್ತು ಉಪಕರಣಗಳ ವರ್ಗಾವಣೆ ಕುರಿತಂತೆ ಹೊಸ ನಿಯಮಾವಳಿಗಳನ್ನು ಅಂಗೀಕರಿಸಲು ಜಿ-8 ಶೃಂಗ ಸಭೆ ನಿರ್ಧರಿಸಿತು. ಅಂದರೆ ಪೂರ್ಣ ಪ್ರಮಾಣದಲ್ಲಿ ನಾಗರಿಕ ಪರಮಾಣು ಸಹಕಾರದ ಭರವಸೆಯೇ ಭಾರತ-ಅಮೆರಿಕಾ ಪರಮಾಣು ವ್ಯವಹಾರದ ತಿರುಳು ಎಂಬ ಭಾರತದ ಪ್ರತಿಪಾದನೆ ಈಡೇರುವಂತದ್ದಲ್ಲ ಎಂದು ಒಂದೇ ಏಟಿಗೆ ಸಾರಿದಂತಾಗಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಈ ವ್ಯವಹಾರದ ಬಗ್ಗೆ ಎತ್ತಿದ ಆಕ್ಷೇಪ ಇದೇ ತಾನೇ! ಆ ಆಕ್ಷೇಪ ಅರ್ಥಪೂರ್ಣ ಎಂದು ಈಗ ಸಾಬೀತಾದಂತಾಯಿತು. ಅಮೆರಿಕಾದೊಂದಿಗಿನ 123 ಒಪ್ಪಂದ ಭಾರತಕ್ಕೆ ಶರತ್ತಿನ ತಂತ್ರಜ್ಞಾನ ವರ್ಗಾವಣೆಯ ಬಗ್ಗೆ ಹೇಳಿತ್ತು. ಅಮೆರಿಕಾ 123 ಒಪ್ಪಂದವನ್ನು ಕೊನೆಗೊಳಿಸಿದರೆ ಅಮೆರಿಕಾದಿಂದ ಆಮದು ಮಾಡಿಕೊಳ್ಳಲಾದ ಸಲಕರಣೆಗಳನ್ನು 'ಹಿಂದೆ ಪಡೆಯುವ ಹಕ್ಕು' ಎಂಬ ಪರಿಚ್ಛೇದದಲ್ಲಿ ಈ ಬಗ್ಗೆ ಹೇಳಲಾಗಿದೆ. ಅಲ್ಲದೆ ಬಳಸಿದ ಇಂಧನದ ಮರು ಸಂಸ್ಕರಣವನ್ನು ಸಂಪೂರ್ಣ ಹೊಸದಾದ ಸುರಕ್ಷಣಾ ವ್ಯವಸ್ಥೆ ಇರುವಲ್ಲಿ ಮಾಡಬೇಕು, ಈ ಬಗ್ಗೆ ಒಪ್ಪಂದಗಳು, ವ್ಯವಸ್ಥೆಗಳ ಬಗ್ಗೆ ಮಾತುಕತೆಗಳು ಇನ್ನಷ್ಟೇ ನಡೆಯಬೇಕಾಗಿದೆ.

ಇನ್ನೂ ಭ್ರಮೆಯಿದೆಯೇ?

ಇಂತಹ ತಂತ್ರಜ್ಞಾನ ಮತ್ತು ಸಲಕರಣೆಗಳ ವರ್ಗಾವಣೆಗೆ ಪರಮಾಣು ಪೂರೈಕೆದಾರರ ಗುಂಪು(ಎನ್‌ಎಸ್‌ಜಿ) ನೀಡಿರುವ ವಿನಾಯ್ತಿ ಬೇಷರತ್ತಾಗಿದೆ, ಆದ್ದರಿಂದ ರಶ್ಯಾ, ಫ್ರಾನ್ಸ್‌ನಂತಹ ಬೇರೆ ದೇಶಗಳಿಂದ ಇವನ್ನು ಪಡೆಯಬಹುದು ಎಂದು ವಾದಿಸಲಾಗುತ್ತಿದೆ. ಯುಪಿಎ-2 ಸರಕಾರ ಒಂದು

ಪುಟ 14ಕ್ಕೆ

ಜಿ-8 ಶರತ್ತುಗಳ ಬಗ್ಗೆ ಭಾರತ ಸರ್ಕಾರ ಈಗೇನು ಮಾಡಬೇಕೆಂದಿದೆ?

ಪರಮಾಣು ಪ್ರಸರಣ ನಿಷೇಧ ಸಂಧಿ(ಎನ್‌ಪಿಟಿ) ಗೆ ಸಹಿ ಹಾಕದ ದೇಶಗಳಿಗೆ ಪೂರ್ಣವಾಗಿ ಪರಮಾಣು ಪುಷ್ಟೀಕರಣ ಮತ್ತು ಮರು ಸಂಸ್ಕರಣ(ಇಎನ್‌ಆರ್) ತಂತ್ರಜ್ಞಾನಗಳನ್ನು ವರ್ಗಾವಣೆ ಮಾಡುವುದಿಲ್ಲ ಎಂಬ ಜಿ-8 ದೇಶಗಳ ಕೂಟದ ನಿರ್ಣಯದ ಅರ್ಥವೆಂದರೆ ಭಾರತ ಯುಪಿಎ ಸರಕಾರ ಹೇಳಿಕೊಂಡಂತೆ ಪೂರ್ಣ ನಾಗರಿಕ ಪರಮಾಣು ಸಹಕಾರ ಪಡೆಯುವುದಿಲ್ಲ ಎಂದೇ ಆಗುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

'ಪರಮಾಣು ಪೂರೈಕೆದಾರರ ಗುಂಪು'(ಎನ್‌ಎಸ್‌ಜಿ) ಕೊಟ್ಟಿರುವ ವಿನಾಯ್ತಿ ಆಗ ಸರಕಾರ ಹೇಳಿಕೊಂಡಂತೆ 'ಸ್ವಚ್ಛ'ವೂ ಅಲ್ಲ, 'ಬೇಷರತ್' ಕೂಡಾ ಅಲ್ಲ ಎಂದು ಸಿಪಿಐ(ಎಂ) ಸ್ಪಷ್ಟವಾಗಿ ಹೇಳಿತ್ತು. ಈ 'ಸ್ವಚ್ಛ' ವಿನಾಯ್ತಿಯ ಹಿಂದೆ ಭಾರತ ದೇಶದ ಹಿತಗಳಿಗೆ ಮಾರಕವಾದ ಹೈಡ್ ಆಕ್ಟ್ ಮತ್ತು ಅದರ ವಿಧಿಗಳು ಇದ್ದವು. ಈಗ ಇತರ ಜಿ-8 ದೇಶಗಳೂ ಹೈಡ್ ಆಕ್ಟ್‌ನ್ನು ಅಂಗೀಕರಿಸಿದಂತಾಗಿದೆ. ಎನ್‌ಎಸ್‌ಜಿ ಕೂಡಾ ಇವೇ ಶರತ್ತುಗಳನ್ನು ಅಂತಿಮಗೊಳಿಸುತ್ತಿದೆ. ಭಾರತ ಅದರಿಂದ ವಿನಾಯ್ತಿ ಪಡೆಯುವಾಗ ಮುಂದೆ ಮಾಡಬಹುದಾದ ಇಂತಹ ಬದಲಾವಣೆಗಳಿಗೆ ಬದ್ಧನಾಗಿರುತ್ತೇನೆ ಎಂದು ಈಗಾಗಲೆ ಒಪ್ಪಿಕೊಂಡಿತ್ತು ಎಂಬುದನ್ನೂ ಸಿಪಿಐ(ಎಂ) ಕೇಂದ್ರ ನೆನಪಿಸಿದೆ.

ಈಗ ಭಾರತ ಸರಕಾರ ಈ ರೀತಿ ಇಎನ್‌ಆರ್ ತಂತ್ರಜ್ಞಾನಗಳನ್ನು ನಿರಾಕರಿಸುವ ಬಗ್ಗೆ ಏನು ಮಾಡಬೇಕೆಂದಿದೆ ಎಂಬುದು ದೇಶಕ್ಕೆ ತಿಳಿಯಬೇಕಾಗಿದೆ. ಇಎನ್‌ಆರ್ ನಿಷೇಧ ಇನ್ನೇನು ಬರುವುದರಲ್ಲಿತ್ತು ಎಂಬುದು ಸರಕಾರಕ್ಕೆ ತಿಳಿದಿತ್ತು, ಆದರೂ ಜನಗಳನ್ನು ಮರುಳುಗೊಳಿಸಲು ಈ 'ಸ್ವಚ್ಛ ವಿನಾಯ್ತಿ'ಯ ನಟನೆ ಮಾಡಲಾಯಿತೇ? ಈಗಿರುವ ಪಕ್ಷಪಾತಪೂರ್ಣ ವ್ಯವಸ್ಥೆಯನ್ನು ಮುಂದುವರೆಸುತ್ತೇವೆ ಎಂದು ಘೋಷಿಸಿರುವ ದೇಶಗಳಿಂದ ಪರಮಾಣು ರಿಯಾಕ್ಟರುಗಳನ್ನು ಖರೀದಿಸುವ ಬಗ್ಗೆ ಏನು ಮಾಡಬೇಕೆಂದಿದೆ? ವಿಶೇಷವಾಗಿ, ಅಮೆರಿಕನ್ ವಿದೇಶಾಂಗ ಇಲಾಖೆಯ ಅಧಿಕಾರಿಗಳು ಭಾರತ ಅಮೆರಿಕನ್ ಮೂಲಗಳಿಂದ ಖರೀದಿಸುತ್ತೇನೆ ಎಂದು ಮಾತು ಕೊಟ್ಟಿರುವ 10,000 ಮೆಗಾವಾಟ್ ರಿಯಾಕ್ಟರುಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗುತ್ತದೆ ಎಂಬುದನ್ನು ಗುರುತಿಸಿ ಹೇಳಬೇಕು ಎಂದು ಕೇಳುತ್ತಿರುವಾಗ ಇದು ಇನ್ನಷ್ಟು ಮಹತ್ವದ್ದಾಗುತ್ತದೆ. ಈ ನಿಷೇಧ ಜಾರಿಯಲ್ಲಿರುವಾಗ ಈ ದಿಕ್ಕಿನಲ್ಲಿ ಯಾವುದೇ ಪ್ರಯತ್ನ ಭಾರತದ ಭವಿಷ್ಯದ ವಿದ್ಯುತ್ ಭದ್ರತೆಗೆ ಗಂಭೀರ ಗಂಡಾಂತರ ತರುತ್ತದೆ.

ಈ ಎಲ್ಲಾ ಪ್ರಶ್ನೆಗಳಿಗೆ ಭಾರತ ಸರಕಾರ ಸ್ಪಷ್ಟ ಉತ್ತರ ಕೊಡಬೇಕಾಗಿದೆ. ಅದುವರೆಗೆ ಭಾರತ ಕೇವಲ ಇಂಧನ ಪೂರೈಕೆ ಒಪ್ಪಂದಗಳನ್ನು ಮಾತ್ರ ಮಾಡಿಕೊಳ್ಳಬೇಕು, ಈ ನಿಷೇಧಾತ್ಮಕ ವ್ಯವಸ್ಥೆಯ ಭಾಗವಾದ ದೇಶಗಳಿಂದ ರಿಯಾಕ್ಟರುಗಳನ್ನು ಆಮದು ಮಾಡಿಕೊಳ್ಳಲು ಒಪ್ಪಬಾರದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಜಗದಗಲ

ಶರತ್‌ಚಂದ್ರ

ಇರಾಕ್‌ನಿಂದ ಅಮೆರಿಕ ಮಿಲಿಟರಿ ಹಿಂತೆಗೆತದ ಕಪಟ ನಾಟಕ

ಜೂನ್ 30 ಇರಾಕ್ ನಲ್ಲಿ ಭಾರೀ ಸಂಭ್ರಮ. ಕನಿಷ್ಟ ಸರ್ಕಾರ ಭಾರೀ ಸಂಭ್ರಮ ತೋರಿಸಿತು. ಆ ದಿನವನ್ನು 'ರಾಷ್ಟ್ರೀಯ ಸರ್ವಾಭೌಮತೆಯ ದಿನ' 'ಸ್ವಾತಂತ್ರ್ಯ ದಿನ' ಎಂದೆಲ್ಲಾ ಕರೆಯುವ ಬ್ಯಾನರುಗಳು ತಳಿರು ತೋರಣಗಳನ್ನು ಹಾಕಲಾಯಿತು. ಸರ್ಕಾರದ ಬೆಂಬಲಿಗರು ಮೆರವಣಿಗೆಗಗಳನ್ನು ತೆಗೆದರು. ಶಾಲಾ ಕಾಲೇಜುಗಳಿಗೆ ರಜಾ ನೀಡಲಾಯಿತು. ಅರಾಜಕತೆ, ಹಿಂಸಾಚಾರ ತಾಂಡವವಾಡುತ್ತಿರುವ ಇರಾಕ್‌ನಲ್ಲಿ ಈ ಸಂಭ್ರಮ ಯಾಕೆ ಎಂದಿರಾ? ಇರಾಕ್‌ನಿಂದ ಅಮೆರಿಕದ ಮಿಲಿಟರಿ ಹಿಂತೆಗೆಯಿತಂತೆ. ಹಾಗಂತ ಇರಾಕ್ ಸರ್ಕಾರ, ಅಮೆರಿಕನ್ ಸರ್ಕಾರ ಹೇಳುತ್ತಿವೆ. ಸಾಮಾನ್ಯವಾಗಿ ಅಮೆರಿಕನ್ ಸರ್ಕಾರ ಹೇಳಿದ್ದನ್ನು ಕಣ್ಣು ಮುಚ್ಚಿ ನಂಬುವ ಅಂತರಾಷ್ಟ್ರೀಯ ಮಾಧ್ಯಮಗಳೂ ಇದನ್ನು ಪೂರ್ಣವಾಗಿ ನಂಬಲಿಲ್ಲ.

ನಿಜವಾಗಿ ನಡೆದದ್ದು ಇಷ್ಟೆ. ಅಮೆರಿಕದ ಮಿಲಿಟರಿ ಪಡೆಗಳು ಇನ್ನು ಮೇಲೆ ನಗರಗಳಲ್ಲಿ ಕಾನೂನು ಪಾಲನೆಯಲ್ಲಿ ಸಕ್ರಿಯ ಪಾತ್ರ ವಹಿಸುವುದಿಲ್ಲ. ನಗರದ 'ಹೊರಗಿರುವ' ತನ್ನ ನೆಲೆಗಳಲ್ಲಿ ಇರುತ್ತದೆ. ಇದು ಈ ವರೆಗೆ ಇಲ್ಲದ 'ರಾಷ್ಟ್ರೀಯ ಸಾರ್ವಭೌಮತೆ' ಮತ್ತು 'ಸ್ವಾತಂತ್ರ್ಯ' ಹೇಗೆ ತರುತ್ತದೆ? ನಗರದ ಹೊರಗೆ ಹೋದರೆ ಏನು ವ್ಯತ್ಯಾಸ ಆದಂತಾಯಿತು? ನಗರದ ಹೊರಗಿನ ಪ್ರದೇಶಗಳು ಇರಾಕ್‌ಗೆ ಸೇರಿಲ್ಲವೇ? ದೇಶದಲ್ಲಿ ವಿದೇಶೀ ಮಿಲಿಟರಿ ಇರುವಾಗ 'ಸ್ವಾತಂತ್ರ್ಯ'ಕ್ಕೆ ಏನು ಅರ್ಥ? ಕನಿಷ್ಟ ಈವರೆಗೆ 'ರಾಷ್ಟ್ರೀಯ ಸಾರ್ವಭೌಮತೆ' ಮತ್ತು 'ಸ್ವಾತಂತ್ರ್ಯ' ಇರಾಕ್‌ನಲ್ಲಿ ಇರಲಿಲ್ಲ ಎಂದು ಸರ್ಕಾರ ಒಪ್ಪಿಕೊಂಡಿದೆ.

ನಿಜವಾಗಿ ಹೇಳಬೇಕೆಂದರೆ ಏನೂ ಬದಲಾವಣೆ ಆಗಿಲ್ಲ. 1.2 ಲಕ್ಷ ಅಮೆರಿಕನ್ ಸೈನಿಕರು ಇರಾಕ್ ನಲ್ಲಿ ಭದ್ರವಾಗಿ ಇದ್ದಾರೆ. ಅಲ್ಲದೆ 1.3 ಲಕ್ಷ ಮಿಲಿಟರಿ ಕಾಂಟ್ರಾಕ್ಟರುಗಳು ಇದ್ದಾರೆ. ಮಿಲಿಟರಿ ಕಾಂಟ್ರಾಕ್ಟರುಗಳಲ್ಲಿ 36 ಸಾವಿರ ಅಮೆರಿಕನ್ನರೇ. 50 ಸಾವಿರ ಅಮೆರಿಕನ್ ತರಬೇತಿದಾರರು ಇರಾಕಿ ಪೋಲೀಸು ಸೈನ್ಯಗಳ ಜತೆ ಇರುತ್ತಾರೆ. ಅಮೆರಿಕದ ಐದು ಮಿಲಿಟರಿ ನೆಲೆಗಳಲ್ಲಿ ಎರಡು - ಬಾಗ್ದಾದ್ ಮತ್ತು ಮಸೂಲ್ - ನಗರ ಪ್ರದೇಶಗಳ ಒಳಗೆ ಇದೆ. ಈ ರೀತಿ ನಗರ ಪ್ರದೇಶಗಳಿಂದ ಅಮೆರಿಕದ ಮಿಲಿಟರಿ ಹಿಂತೆಗೆಯಲಾಗಿದೆ ಎಂಬುದು ನಿಜವಲ್ಲ. ಅದೇ ರೀತಿ ಅಮೆರಿಕದ ಮಿಲಿಟರಿ ತನ್ನ ನೆಲೆಗಳಿಂದ ಹೊರ ಬರುವುದಿಲ್ಲ ಎಂತಲೂ ಅಲ್ಲ. ಎಲ್ಲಾ ಅಮೆರಿಕದ ಮಿಲಿಟರಿ ಚಲನೆಗಳು ರಾತ್ರಿಯಲ್ಲಿ ನಡೆಯುತ್ತವಂತೆ!. ಅದು ಮಿಲಿಟರಿ ಸುರಕ್ಷಿತತೆಗೆ. ಇರಾಕ್‌ನ 'ರಾಷ್ಟ್ರೀಯ ಸಾರ್ವಭೌಮತೆ' ಮತ್ತು 'ಸ್ವಾತಂತ್ರ್ಯ' ಗೌರವಿಸಲು ಅಲ್ಲ.

ಹೀಗೆ ಇರಾಕ್‌ನಿಂದ ಅಮೆರಿಕ ಮಿಲಿಟರಿ ಹಿಂತೆಗೆತ ಇರಾಕ್ ಸರ್ಕಾರ ಆಡುತ್ತಿರುವ ಒಂದು ಕಪಟ ನಾಟಕ ಅಷ್ಟೇ. ನಾಟಕದ ಮುಂದುವರೆದ ಅಂಕ ಜುಲೈ 30 ರಂದು ನಡೆಯಲಿರುವ ಜನ ಮತ ಸಂಗ್ರಹ. ಇರಾಕ್ ಸರ್ಕಾರ ಅದನ್ನು ಘೋಷಿಸಿದೆ. ಆದರೆ ಅಮೆರಿಕದ ಸೈನ್ಯ ಜನತೆ ಮತ ಸಂಗ್ರಹ ನಡೆಸದಂತೆ ಒತ್ತಡ ಹೇರುತ್ತಿದೆ. ನಿಜವಾದ ನ್ಯಾಯಯುತ ಜನ ಮತ ಸಂಗ್ರಹ ನಡೆದರೆ ಜನರ ಮತ ಏನಿರುತ್ತದೆ ಎಂಬ ಬಗ್ಗೆ ಯಾರಿಗೂ ಸಂಶಯವಿಲ್ಲ. ಶೇ. 73 ಜನ ಇರಾಕ್ ನೆಲದಿಂದ ಅಮೆರಿಕನ್ ಮಿಲಿಟರಿ ಕಾಲ್ತೆಗೆಯಬೇಕು ಎನ್ನುತ್ತಾರೆ. ಈಗಿನ ಒಪ್ಪಂದ ಪ್ರಕಾರ ಎಲ್ಲಾ ಅಮೆರಿಕನ್ ಸೈನಿಕರು 2011 ರ ನಂತರವೇ ಇರಾಕ್ ಬಿಡುವುದು. ಅಮೆರಿಕನ್ ಮಿಲಿಟರಿ ಕಾಂಟ್ರಾಕ್ಟರ್ ಗಳ ಬಗ್ಗೆ ಒಪ್ಪಂದ ಮೌನವಾಗಿದೆ. ಅಲ್ಲದೆ ಇರಾಕಿನ ಸೈನ್ಯ ಮತ್ತು ಪೋಲಿಸರ ಮೇಲೆ ನಾಗರಿಕರಿಗೆ ಅಮೆರಿಕನ್ ಸೈನಿಕರಿಗಿಂತ ಹೆಚ್ಚೇನೂ ನಂಬಿಕೆ ಇಲ್ಲ. ಜೂನ್ ಅರಾಜಕತೆ ಹಿಂಸಾಚಾರದಲ್ಲಿ ಹೊಸ ವಿಕ್ರಮಗಳನ್ನು ಈಗಾಗಲೇ ಸ್ಥಾಪಿಸಿದೆ. ಅರಾಜಕತೆ ಹಿಂಸಾಚಾರ ಇನ್ನಷ್ಟು ಜಾಸ್ತಿಯಾಗ ಬಹುದು. ಅದನ್ನೇ ನೆಪ ಮಾಡಿ ಮಿಲಿಟರಿ ಹಿಂತೆಗೆತ ಇನ್ನಷ್ಟು ವಿಳಂಬ ಮಾಡಬಹುದು. ಇರಾಕ್‌ನಿಂದ ಅಮೆರಿಕ ಮಿಲಿಟರಿ ಹಿಂತೆಗೆತ ನಿಜವಾಗಿ ನಡೆಯುತ್ತದೆ ಅಂತ ಯಾರೂ ನಂಬುತ್ತಿಲ್ಲ - ಇರಾಕ್ ಸರ್ಕಾರ ಬಿಟ್ಟು.

ದೇಶದ ಸಾರ್ವಭೌಮತೆ ಪ್ರಶ್ನೆ

ಪುಟ 13 ರಿಂದ

ಭ್ರಮೆಯಲ್ಲಿಯೆ ಉಳಿದಿದೆ ಎಂಬುದು ಸ್ಪಷ್ಟ.

ಜಿ-8ರ ನಿರ್ಣಯದ ಹಿನ್ನೆಲೆಯಲ್ಲಿ ಎನ್‌ಎಸ್‌ಜಿ ಕೂಡಾ ತಂತ್ರಜ್ಞಾನ ವರ್ಗಾವಣೆಯ ಬಗ್ಗೆ ಹೊಸ ನಿಯಮಗಳ ಬಗ್ಗೆ ಚರ್ಚೆ ನಡೆಸುತ್ತಿದೆ. ಅಮೆರಿಕಾದ ಒತ್ತಡದಿಂದ ಅದು ಕೂಡಾ ಎನ್‌ಪಿಟಿಗೆ ಸಹಿ ಹಾಕಬೇಕೆಂಬ ಶರತ್ತನ್ನು ಸೇರಿಸುತ್ತದೆ ಎಂದು ಯಾರಾದರೂ ನಿರೀಕ್ಷಿಸಬಹುದು. ಆಗ ತಂತ್ರಜ್ಞಾನ ಅಥವಾ ಸಲಕರಣೆಗಳನ್ನು ಪಡೆಯಲು ರಶ್ಯಾ, ಫ್ರಾನ್ಸ್ ಬಳಿ ಹೋಗುವ ಸಾಧ್ಯತೆಯೂ ಉಳಿಯುವುದಿಲ್ಲ. ಏಕೆಂದರೆ ಅವೆರಡೂ ಜಿ-8 ಮತ್ತು ಎನ್‌ಎಸ್‌ಜಿಯ ಸದಸ್ಯರೇ.

ಭಾರತ ಎನ್‌ಪಿಟಿ ಮತ್ತು ಪರಮಾಣು ವಿಧಳನ ಸಾಮಗ್ರಿ ನಿಯಂತ್ರಣ ಸಂಧಿ(ಎಫ್‌ಎಂಸಿಟಿ)ಗೆ ಸಹಿ ಹಾಕಬೇಕೆಂಬ ಅಮೆರಿಕಾದ ಒತ್ತಡ ಇನ್ನಷ್ಟು ಹೆಚ್ಚುತ್ತದೆ. ಒಟ್ಟಿನಲ್ಲಿ ಈ ಭಾರತ-ಅಮೆರಿಕಾ ಪರಮಾಣು ವ್ಯವಹಾರ ನಡೆಸಿ ಭಾರತದ ಸಾರ್ವಭೌಮತೆಗೆ ಅಪಾಯ ತಂದು ಕೊಳ್ಳಲಾಗುತ್ತಿದೆ ಎಂಬ ಸಿಪಿಐ(ಎಂ) ಮತ್ತು ಎಡಪಕ್ಷಗಳ ಸಂದೇಹ ಈ ಎಲ್ಲಾ ಬೆಳವಣಿಗೆಗಳಿಂದ ದೃಢಪಡುತ್ತದೆ.

ಹವಾಮಾನ ಕುರಿತ ಸವಾಲಿನಲ್ಲೂ

ಇನ್ನೊಂದು ಪ್ರಶ್ನೆ-ಹವಾಮಾನ ಬದಲಾವಣೆಯಿಂದ ಜಗತ್ತು ಅನುಭವಿಸುತ್ತಿರುವ ಅಭೂತಪೂರ್ವ ಸವಾಲನ್ನು ಎದುರಿಸುವುದು ಹೇಗೆ ಎಂಬುದು. ಇಂಧನ ಕಲ್ಮಶಗಳ ಪ್ರಮಾಣವನ್ನು ಎಷ್ಟು ತಗ್ಗಿಸಬೇಕೆಂಬ ಗುರಿ ಅಭಿವೃದ್ಧಿ ಹೊಂದಿರುವ ದೇಶಗಳಿಗೂ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೂ ಒಂದೇ ರೀತಿಯದಾಗಿರಬಾರದೆಂಬುದು ಭಾರತದ ನಿಲುವು. ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗಿಂತ ಬಹಳ ಹೆಚ್ಚಿನ ಪ್ರಮಾಣದಲ್ಲಿ ಇಂಗಾಲ ಕಲ್ಮಶಗಳನ್ನು ತಡೆಯಬೇಕು, ಏಕೆಂದರೆ ಅಭಿವೃದ್ಧಿ ಹೊಂದಿದ ದೇಶಗಳ ಅಭಿವೃದ್ಧಿ ವಿಧಾನಗಳಿಂದಾಗಿಯೇ ವಿಶ್ವದ ಹವಾಮಾನದ ಮೇಲೆ ಪ್ರತಿಕೂಲ ಪರಿಣಾಮ ಬಿದ್ದಿದೆ ಎಂಬುದು ಇದರ ಹಿಂದಿರುವ ವಾದ. ಇದು ಸರಿಯಾಗಿಯೇ ಇದೆ. ಆದರೆ ಶೃಂಗ ಸಮ್ಮೇಳನದಲ್ಲಿ ಇದಕ್ಕೆ ಬಹಳವೇನೂ ಒಪ್ಪಿಗೆ ಸಿಗಲಿಲ್ಲ.

ಭಾರತ ಈ ಗುರಿಗಳನ್ನು ಒಪ್ಪಿಕೊಂಡರೆ ಅದು ನಮ್ಮ ಬೆಳವಣಿಗೆಯ ಪ್ರಕ್ರಿಯೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಬಡತನ ಮತ್ತು ಹಿಂದುಳಿಕೆಯನ್ನು ನಿವಾರಿಸಲು ಈ ಬೆಳವಣಿಗೆ ಪ್ರಕ್ರಿಯೆ ಅಗತ್ಯ ಎಂದು ಕೂಡಾ ನಮ್ಮ ಪ್ರಧಾನ ಮಂತ್ರಿಗಳು ಹೇಳಿದರು. ಡಿಸೆಂಬರಲ್ಲಿ ಕೋಪನ್‌ಹೇಗನ್‌ನಲ್ಲಿ ನಡೆಯಲಿರುವ 'ಹವಾಮಾನ ಬದಲಾವಣೆ ಕುರಿತ ವಿಶ್ವ ಸಂಸ್ಥೆಯ ಚೌಕಟ್ಟು ಸಮಾವೇಶ' ಬಹಳ 'ಮಹತ್ವಾಕಾಂಕ್ಷೆಯದಾಗಿರಬೇಕು, ಸಮಗ್ರವಾಗಿರಬೇಕು, ಆದರೆ ಎಲ್ಲಕ್ಕೂ ಮಿಗಿಲಾಗಿ ಸಮತ್ವಪೂರ್ಣವಾಗಿರಬೇಕು' ಎಂದು ಅವರು




ಹೇಳಿದರು. ಅಂದರೆ ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಇಂಧನ ಕಲ್ಮಶಗಳನ್ನು 2020ರೊಳಗೆ 40ಶೇ.ದಷ್ಟು ಇಳಿಸಬೇಕು, ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಇದಕ್ಕೆ 2050ರ ವರೆಗೆ ಅವಕಾಶ ಕೊಡಬೇಕು. ಈ ಸವಾಲು ಇನ್ನೂ ಹಾಗೆಯೇ ಉಳಿದಿದೆ.

ಹೊಸ ಕಟು ವಾಸ್ತವಗಳು

ನಿಜ, ಶೃಂಗ ಸಭೆಯಲ್ಲಿ ಉಭಯ ಕುಶಲೋಪರಿಗಳಂತೂ ಇದ್ದವು. ಅಧ್ಯಕ್ಷ ಒಬಾ ಪ್ರಧಾನ ಮಂತ್ರಿ ಮನಮೋಹನ ಸಿಂಗ್‌ರ ಪ್ರತ್ಯೇಕವಾಗಿ ವೈಯಕ್ತಿಕವಾಗಿ ಭೇಟಿ ಮಾಡಿದ ಇಬ್ಬರೂ ತಂತಮ್ಮ ದೇಶಗಳಿಗೆ ಭೇಟಿ ಕೊಡಿ ಎಂ ಪರಸ್ಪರ ಆಹ್ವಾನಿಸಿದರು, ಇಬ್ಬರೂ ಅದು ಸ್ವೀಕರಿಸಿದರು. ವಿಶ್ವ ಸಂಸ್ಥೆಯಲ್ಲಿ ತುತ್ತಾ ಸುಧಾರಣೆಗಳು ನಡೆಯಬೇಕು ಎಂಬ ಭಾರ ಕರೆಯನ್ನು ಕೂಡಾ ಅಧ್ಯಕ್ಷ ಒಬಾ ಒಟ್ಟಾರೆಯಾಗಿ ಅನುಮೋದಿಸಿದ ಭದ್ರತಾ ಸಮಿತಿಯ ಶಾಶ್ವತ ಸದಸ್ಯರಲ್ಲಿ ತನ ಸ್ಥಾನವಿರಬೇಕು ಎಂಬುದು ಭಾರತದ ಆಶ ಆದರೆ ಅಮೆರಿಕಾದ ಮಟ್ಟಿಗಂತೂ 'ಸುಧಾರ ಕುರಿತ ವ್ಯಾಖ್ಯೆಯಲ್ಲಿ ಈ ಅಂಶ ಸೇರಿಲ್ಲ.

ಒಟ್ಟಿನಲ್ಲಿ ಭಾರತ ವಿಶ್ವದ ಹೊಸ ಕ ವಾಸ್ತವಗಳನ್ನು ಮುಖಾಮು ಎದುರಿಸಬೇಕಾಗಿದೆ. ಭಾರತ-ಅಮೆ ಪರಮಾಣು ವ್ಯವಹಾರದ ಪರಿಣಾಮವ ಭಾರತದ ಸಾರ್ವಭೌಮತೆಯನ್ನು ಬಿ ಕೊಡಬೇಕಾಗುತ್ತದೆ ಎಂಬ ಸಿಪಿಐ(ಎಂ) ಮ ಎಡಪಕ್ಷಗಳು ವ್ಯಕ್ತಪಡಿಸುತ್ತಾ ಬಂದಿರ ಸಂದೇಹಗಳೆಲ್ಲಾ ಪ್ರತಿ ಹೆಜ್ಜೆಯಲ್ಲೂ ಮತ್ತೆ-ಮ ದೃಢಗೊಳ್ಳುತ್ತಿವೆ. ಮುಂಬರುವ ದಿನಗಳಲ್ಲಿ ಭಾ ಅಮೆರಿಕಾದ ಒತ್ತಡಗಳಿಗೆ ಶರಣಾಗದಂತೆ ತಡೆಯು ಆಮೂಲಕ ಭಾರತದ ಸಾರ್ವಭೌಮತೆ ಕಾಪಾಡಿಕೊಳ್ಳಲು ಹೋರಾಟಗಳನ್ನು ಇನ್ನ ತೀವ್ರಗೊಳಿಸಬೇಕಾಗುತ್ತದೆ.

...ಕಟ್ಟಬಯಸುವ ಮನಸ್ಸುಗಳಿಗೆ ಕನಸು ಬಿತ್ತುತ್ತಿದ್ದ ಕಾಳಿಂದಿ



...ಕದಲ್ಲಿ ದೆಹಲಿಯ ಅತ್ಯಂತ ಬಡ ಕಾರ್ಮಿಕ
...ಂಬದ ಶಾಂತಿಯ ಗಂಡ ಗಲ್ಫ್‌ನಲ್ಲಿ ರಸ್ತೆ
...ಘಾತದಲ್ಲಿ ಮರಣ ಹೊಂದಿದ ಶಾಂತಿಯ
...ನ ಮೃತದೇಹ ದೆಹಲಿಯಲ್ಲಿ ಮಣ್ಣು ಮಾಡಲು
... ಆವಳಿಗೆ ಸಿಗಬೇಕಾದ ಪರಿಹಾರ ಸಿಗಲು
...ವಾಯಿತು. ಇದಕ್ಕಾಗಿ ಛಲಬಿಡದ ಪ್ರಯತ್ನ
...ದ್ದು ಕಾಳಿಂದಿ.

...ಖಿಲ ಭಾರತ ಜನವಾದಿ ಮಹಿಳಾ
...ಟನೆಯ ರಾಷ್ಟ್ರೀಯ ಉಪಾಧ್ಯಕ್ಷರಲ್ಲೊಬ್ಬರಾದ
...ದಿ ಅನಾರೋಗ್ಯದಿಂದ ಜುಲೈ 14, 2009
... ಪುಣೆಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.
...ಟನೆಯ ಪ್ರಾರಂಭದಿಂದಲೂ ಜೊತೆಗಿದ್ದ
...ದಿ 1982 ರಲ್ಲಿ ದೆಹಲಿಯಲ್ಲಿ ವರದಕ್ಷಿಣೆ
...ೀಧಿ ಮಂಚ್‌ದಡಿಯಲ್ಲಿ ನಡೆದ ಸಾಮೂಹಿಕ
...ರಾಂದೋಲನದಲ್ಲಿ ಸಕ್ರಿಯ ಕಾರ್ಯಕರ್ತೆಯಾಗಿ
...ಲ್ಗೊಂಡವರು. 80 ರ ದಶಕದಲ್ಲಿ ತೀವ್ರವಾಗಿ
...ದ್ದ ಮಹಿಳಾ ಪರ ಹೋರಾಟಗಳಲ್ಲಿ
... ಮುಂಚೂಣಿಯಲ್ಲಿದ್ದರು. ಸಂಘಟನೆಯ
...ಲು ತಟ್ಟುತ್ತಿದ್ದ ವೈಯಕ್ತಿಕ ಪ್ರಕರಣಗಳಿಗೆ ನ್ಯಾಯ
...ಸುವ ಕೆಲಸದ ಜೊತೆಯೇ ಸಾಮಾಜಿಕ
...ಲಾವಣೆಗೆ ಅಗತ್ಯವಾದ ಸಾಮೂಹಿಕ
...ೋಲನದತ್ತ ಗಂಭೀರ ಗಮನ ನೀಡುತ್ತಿದ್ದ
...ಷ ಸಾಮರ್ಥ್ಯ ಅವರಲ್ಲಿತ್ತು.

...ಅವರ ಹೋರಾಟದ ಝರಿ, ಶಾಂತಿ,
...ದೇವಿಯಂತಹ ಬಡ ಮಹಿಳೆಯರಿಗೆ ನ್ಯಾಯ
...ಗಿಸುವ ಜೊತೆಯೇ, ಕಾರ್ಖಾನೆಗಳ
...ಲಿನ್ಯದಿಂದ ನಿವಾಸಿಗಳಿಗೆ ಆಗುತ್ತಿದ್ದ ತೊಂದರೆ ನಿವಾರಣೆಗಾಗಿ ಹೋರಾಟ ನಡೆಸಿ ಕಾರ್ಖಾನೆಯ ಸ್ಥಳಾಂತರಿಸುವವರೆಗೂ ಹರಿಯುತ್ತಿತ್ತು. ಕೊಳಚಿ ನಿವಾಸಿಗಳ ಗುಡಿಸಲಿಗೆ ಬೆಂಕಿ ಬಿದ್ದಲ್ಲಿ ಪರಿಹಾರ ಸಿಗುವವರೆಗೂ ಹೋರಾಟವೇ. ಇದು ಕಾಲಿಂದಿಯವರ ಕಾರ್ಯಕ್ರಮದ ವೈಖರಿ.

ಇಂದಿರಾಗಾಂಧಿಯವರ ಹತ್ಯೆಯ ನಂತರ 1984 ರಲ್ಲಿ ದೆಹಲಿಯಲ್ಲಿ ನಡೆದ ಸಿಖ್ ವಿರೋಧೀ ಹಿಂಸೆ ಇಡೀ ದೇಶವನ್ನೇ ಬೆಚ್ಚಿಬೀಳಿಸಿದ ಘಟನೆ, 'ಪೀಪಲ್ಸ್ ರಿಲೀಫ್ ಕಮಿಟಿ' ಹೆಸರಿನಲ್ಲಿ ಗಲಭೆಯಲ್ಲಿ ನೊಂದವರಿಗೆ ಪರಿಹಾರ ದೊರಕಿಸಿಕೊಡುವ ಹೋರಾಟದಲ್ಲಿ ಕಾಲಿಂದಿ ಮುಂದೆ ತೀವ್ರ ತೊಂದರೆಗೊಳಗಾದ ನಂದನಗರಿಯಲ್ಲಿ ಮನೆ, ಮನೆ ಸಮೀಕ್ಷೆ ನಡೆಸಿದರು ಸಂಗಾತಿ ಕಾಳಿಂದಿ.

1986 ರಲ್ಲಿ ದೆಹಲಿಯುದ್ದಕ್ಕೂ ಕೋಮುಸಾಮರಸ್ಯದ ಸಂದೇಶ ಸಾರುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರೆ 1994 ರಲ್ಲಿ ಜೈಲು ಭರೋ ಚಳುವಳಿಯಲ್ಲಿ 4 ದಿನ ಸೆರೆವಾಸವನ್ನೂ ಅನುಭವಿಸಿದವರು. 95 ರಲ್ಲಿ ದಕ್ಷಿಣ ದೆಹಲಿಯಲ್ಲಿ ಗೃಹೋದ್ಯಮದಲ್ಲಿ ತೊಡಗಿದ ಮಹಿಳೆಯರ ಸಮೀಕ್ಷೆ ನಡೆಸುವುದರಲ್ಲೂ ಪಾಲ್ಗೊಂಡ ಕಾಳಿಂದಿ ಶೇ.33 ಮೀಸಲಾತಿಯ ಹೋರಾಟಗಳಲ್ಲಿಯೂ ಹಿಂದುಳಿದವರಲ್ಲ. ವಿಶ್ವ ನಡೆ 2000 ದ ಸಂದರ್ಭದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಬಡತನಗಳ ಕುರಿತು ಅಧ್ಯಯನ ನಡೆಸಿ ಡಾಕ್ಯುಮೆಂಟ್‌ಗಳನ್ನು ಸಿದ್ಧಪಡಿಸಿದವರು ಕಾಳಿಂದಿ. ದೆಹಲಿ ಘಟಕದ ಅಧ್ಯಕ್ಷೆಯಾಗಿದ್ದ ಕಾಳಿಂದಿ 1997 ರಲ್ಲಿ ರಾಷ್ಟ್ರೀಯ ಖಜಾಂಚಿಯಾಗಿ ಆಯ್ಕೆಯಾದರು. 2004 ರಲ್ಲಿ ಉಪಾಧ್ಯಕ್ಷೆಯಾದರು.

ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ 92 ರಲ್ಲಿ ಪಾಲ್ಗೊಂಡ ಕಾಲಿಂದಿ ಆಯ್ಕೆ ಮಾಡಿಕೊಂಡಿದ್ದು ದಕ್ಷಿಣ ದೆಹಲಿಯ ಕೊಳಚೆ ಪ್ರದೇಶವನ್ನು. ಜನಾರೋಗ್ಯ ಆಂದೋಲನದಲ್ಲಿ ಪಾಲ್ಗೊಂಡು ಕೆಲಸ ನಿರ್ವಹಿಸಿದ ಅವರು 'ಹಿಮ್ಮತ್' ಹೆಸರಿನ ಸಂಸ್ಥೆಯಡಿಯಲ್ಲಿ ಸ್ವಸಹಾಯ ಸಂಘಗಳ ಮಹಿಳೆಯರನ್ನು ಸಂಘಟಿಸಿದ್ದರು. ಮುಂದೆ ಆ ಸಂಘದ ಅಧ್ಯಕ್ಷೆಯಾಗಿ ಆಯ್ಕೆಯಾದರು.

"ಆಡು ಮುಟ್ಟದ ಸೊಪ್ಪಿಲ್ಲ" ಎಂಬಂತೆ ಕಾಳಿಂದಿಯ ಆಸಕ್ತಿ ಬದ್ಧತೆ ಇಷ್ಟಕ್ಕೇ ಮುಗಿಯಲಿಲ್ಲ. ಕಲೆ, ಸಾಹಿತ್ಯ ರಂಗಭೂಮಿಗಳ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ಕಾಳಿಂದಿ ಹಲವಾರು ಕವನ, ಕಿರಿನಾಟಕಗಳನ್ನು ರಚಿಸಿದ್ದರು. 1987 ರಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಪ್ರಚಾರಕ್ಕೆಂದು ಅವರು ಬರೆದ ಬೀದಿನಾಟಕದಲ್ಲಿ ನಂದಿತಾದಾಸ್ ಅಭಿನಯಿಸಿದ್ದರು. ಸಂಘಟನೆಯ ಹಿಂದಿ ಪತ್ರಿಕೆ ಸಾಮ್ಯಕ್ಕೂ ಕಾಲಿಂದಿಯ ಕೊಡುಗೆ ಅತಿ ಮುಖ್ಯವಾಗಿತ್ತು. ಮರಾಠಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದ ಕಾಲಿಂದಿ ಗುಜರಾತ್ ಹತ್ಯಾಕಾಂಡ ಕುರಿತು ತೆಗೆಯಲಾದ ಒಂದು ಸಿನಿಮಾದಲ್ಲಿ ಅಬಿನಯಿಸಿದ್ದರು. ಮಹಾರಾಷ್ಟ್ರದ ಒಂದು ಮೇಲ್ಜಾತಿಯ ಸಂಪ್ರದಾಯವಾದೀ ಕುಟುಂಬದಲ್ಲಿ ಹುಟ್ಟಿದವರಾದರೂ, ಆ ರಾಜ್ಯದ ಸಾಮಾಜಿಕ ಚಳುವಳಿಯ ಪ್ರಭಾವಕ್ಕೆ ಒಳಗಾದವರು ಕಾಳಿಂದಿ. ಫ್ರೆಂಚ್ ಅಧ್ಯಾಪಕಿಯಾಗಿದ್ದ ಅವರು ಕೆಲಸ ತೊರೆದು ಜನವಾದಿಯ ಪೂರ್ಣಕಾಲದ ಕಾರ್ಯಕರ್ತೆಯಾಗಿ ಸಮರ್ಪಿಸಿಕೊಂಡರು.

ಕರ್ನಾಟಕಕ್ಕೆ ಬರಬೇಕೆಂದು ಅವರಿಗೆ ಆಹ್ವಾನವಿತ್ತಾಗ ಪ್ರೀತಿಯಿಂದ ಬರುತ್ತಿದ್ದ ಕಾಲಿಂದಿ ಕನ್ನಡವನ್ನು ಬಲ್ಲವರು. ಉತ್ತರಕರ್ನಾಟಕದಲ್ಲೆಲ್ಲೋ ಬೇರು ಹೊಂದಿದ್ದ ಕಾಲಿಂದಿ ಸಂಘಟನೆಯ ಬೆಳ್ಳಿಹಬ್ಬದ ಸಂದರ್ಭದ ನಾಟಕೋತ್ಸವದ ಉದ್ಘಾಟನೆಗೆ ಬೆಂಗಳೂರಿಗೆ ಬಂದಿದ್ದರು.

ಅತ್ಯಂತ ಶಿಸ್ತಿನ, ನೀಟಾಗಿ ಡ್ರೆಸ್ ಮಾಡಿ ಠಾಕು, ಠೀಕಾಗಿಯೇ ಸದಾ ಇರುತ್ತಿದ್ದ ಕಾಳಿಂದಿಯ ಮುಖದಲ್ಲಿ ಸಿಡುಕಿನ ಗೆರೆಗಳನ್ನು ಬಹುಷ: ಯಾರೂ ನೋಡಿರಲಿಕ್ಕಿಲ್ಲ. ಅಂತಹ ಹಸನ್ಮುಖಿ, ಸಂಘಟನೆ, ಚಳುವಳಿಗೆ ಪೂರ್ಣವಾಗಿ ಸಮರ್ಪಿಸಿಕೊಂಡಿದ್ದ ಗೆಳತಿ ನಮ್ಮನ್ನಗಲಿದ್ದಾರೆ. ತಮ್ಮ 72 ನೇ ವಯಸ್ಸಿನಲ್ಲಿಯೂ 22 ರ ಹರೆಯದವರಂತಿದ್ದ ಚೈತನ್ಯವನ್ನು ಉಡುಗಿಸಿದ್ದು ಕ್ಯಾನ್ಸರ್‌ರೋಗ. ಸಂಘಟನೆ ಕಟ್ಟಬಯಸುವ ನಮ್ಮ ಕನಸುಗಳಿಗೆ ಬಣ್ಣ ತುಂಬಿದ ಸಂಗಾತಿ ನಿಮಗಿದೋ ಕಣ್ತುಂಬಿದ ವಂದನೆ, ವೀರ ವಂದನೆ.

■ ಕೆ.ಎಸ್.ವಿಮಲ

...ಅಡಿಯಾಳಾಗಲು ಇದೆಂತಹ ಧಾವಂತ !

...7 ರಿಂದ

...ನ್ ಪರಮಾಣು ಕಾರ್ಯಕ್ರಮಗಳ ವಿರುದ್ಧ
...ಧ ಹೇರುವುದನ್ನು ಒಪ್ಪಿಕೊಂಡಿತ್ತು. ಈಗ ಭಾರತ
... ಮಾಡಬೇಕಿದೆ' ಎನ್ನುತ್ತದೆ ಆ
...ದಕೀಯ! (ಆ ಪರಮಾಣು ವ್ಯವಹಾರವನ್ನು
...ೀಧಿಸುವಾಗ ಎಡಪಕ್ಷಗಳು ನಮ್ಮ ಸ್ವತಂತ್ರ
...ಶಾಂಗ ನೀತಿಯನ್ನು ಬಿಟ್ಟುಕೊಡಬೇಕಾಗುತ್ತದೆ
...ು ವ್ಯಕ್ತಪಡಿಸಿದ ಆತಂಕ ನಿಜವಾಗುತ್ತಿದೆ).

...ಆರನೆಯದಾಗಿ, ಆ ಪತ್ರಿಕಾ ಸಂಪಾದಕೀಯದ
...ಮಾತುಗಳನ್ನು ನೋಡಿ-'ಭಾರತಕ್ಕೆ ತನನ್ನು ಒಂದು
...ುಖ ಜಾಗತಿಕ ಶಕ್ತಿಯೆಂದು ಕಾಣಬೇಕೆಂದಿದೆ.
...ಗಬೇಕಾದರೆ ಈ ಅಲಿಪ್ತ ಎಂಬ ಸೋಗನ್ನು
...ಬೇಕು........ಅಧ್ಯಕ್ಷ ಒಬಾಮಾ ಮತ್ತು
...ುತಿ ಕ್ಲಿಂಟನ್ ಒಂದು ಸ್ಥಿರತೆಯ ಜಗತ್ತನ್ನು
...ವಲ್ಲಿ ಭಾರತ ಒಂದು ಮಹತ್ವದ ಭಾಗೀದಾರ
...ು ಬಗೆಯುತ್ತಾರೆ. ಭಾರತ ನಿಜಕ್ಕೂ ಹಾಗೆ
...ಸುವಂತೆ ಪ್ರೋತ್ಸಾಹಿಸಬೇಕು'!

...ಅಂದರೆ ಭಾರತ ತನ್ನ ಸ್ವತಂತ್ರ ನಿಲುವುಗಳನ್ನೆಲ್ಲಾ
...ುವಂತೆ ಮಾಡಬೇಕು! ದುರದೃಷ್ಟವಶಾತ್
...ೀಹನಸಿಂಗ್ ಸರಕಾರ ಅಮೆರಿಕನ್
...ಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನಾಗುವ
...ಲ ಹೊತ್ತಂತಿದೆ. ಅದಕ್ಕಾಗಿ ನಮ್ಮ ಜನಗಳ
...ನ್ನು ಮತ್ತು ಭವಿಷ್ಯವನ್ನು ತಟ್ಟುವ ಪ್ರಶ್ನೆಗಳ ಮೇಲೆ ದೇಶದ ಸ್ವತಂತ್ರ ನಿಲುವುಗಳನ್ನು ಕೈಬಿಡಲು ಸಿದ್ಧವಾಗಿರುವಂತೆ ಕಾಣುತ್ತದೆ. 'ಪ್ರಧಾನ ಮಂತ್ರಿ ಮನಮೋಹನಸಿಂಗ್ ಮತ್ತು ಅವರ ಪಕ್ಷಕ್ಕೆ ಈಗ ಬಲವಾದ ಜನಾದೇಶವಿದೆ,. ಅಂದರೆ ಇನ್ನಷ್ಟು ಮಾಡದಿರಲು ಅದಕ್ಕೀಗ ನೆಪಗಳಿಲ್ಲ'! (ಅಂದರೆ ಅದಕ್ಕೀಗ ಬದುಕುಳಿಯಲು ಎಡಪಕ್ಷಗಳ ಬೆಂಬಲ ಬೇಕಿಲ್ಲವಲ್ಲ!).

ಇವೆಲ್ಲಾ ಬಹುಪಾಲು ಭಾರತೀಯರಿಗೆ ಜೀವನ್ಮರಣ ಪ್ರಶ್ನೆ, ಅಂತರ್ರಾಷ್ಟ್ರೀಯ ವಲಯದಲ್ಲಿ ಭಾರತ ಹೆಮ್ಮೆಯಿಂದ ತಲೆಯೆತ್ತಿ ನಿಲ್ಲಬೇಕಾದರೆ ಅದು ಇಂದಿನ ವಿಶ್ವದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನ ಮಟ್ಟಕ್ಕೆ ಇಳಿಯದಂತೆ ತಡೆಯಬೇಕು ಅದಕ್ಕಾಗಿ ಭಾರತದ ಜನತೆ ಒಂದು ಬಲವಾದ ಪ್ರತಿರೋಧವನ್ನು ಒಡ್ಡಬೇಕು.

ಅಮೆರಿಕಾದ ಮಿಲಿಟರಿ ಬಲೆಯಲ್ಲಿ ಭಾರತ ಹೆಚ್ಚೆಚ್ಚಾಗಿ ಸಿಲುಕಿಕೊಳ್ಳುತ್ತಿದೆ

ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ರವರ ಭೇಟಿಯ ನಂತರ ನೀಡಿರುವ ಭಾರತ-ಅಮೆರಿಕ ಜಂಟಿ ಹೇಳಿಕೆ ಸಾಮರಿಕ ಮೈತ್ರಿಯನ್ನು ಇನ್ನಷ್ಟು ಆಳಗೊಳಿಸುವ ಪ್ರಯತ್ನ ನಡೆಸಿದೆ 21ನೇ ಶತಮಾನದಲ್ಲಿ ಜಾಗತಿಕ ಸಮೃದ್ಧಿ, ಸ್ಥಿರತೆಯನ್ನು ಹೆಚ್ಚಿಸಲಿಕ್ಕಾಗಿ ಎಂದೆಲ್ಲಾ ಆಡಂಬರದ ಮಾತುಗಳೇನೇ ಇದ್ದರೂ ಈಗ ಮಾಡಿಕೊಂಡಿರುವ ಒಪ್ಪಂದಗಳು ನಿಜವಾಗಿಯೂ ಭಾರತದ ಹಿತ ಸಾಧಿಸುತ್ತವೆಯೆ ಎಂಬ ಪ್ರಶ್ನೆಗಳನ್ನು ಎತ್ತುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಅಮೆರಿಕಾದ ರಕ್ಷಣಾ ಸಾಧನಗಳ ಅಂತಿಮ ಬಳಕೆಯನ್ನು ಪರೀಕ್ಷಿಸುವ ಕುರಿತು ಒಪ್ಪಂದಕ್ಕೆ ಬರಲಾಗಿದೆ ಎಂದು ನಮ್ಮ ವಿದೇಶಾಂಗ ಮಂತ್ರಿಗಳು ಹೇಳಿದ್ದಾರೆ. ಇದು ಆ ಉಪಕರಣಗಳು, ಸಾಧನಗಳನ್ನು ಬಳಸಿಕೊಳ್ಳುವ ಜಾಗದಲ್ಲಿಯೇ ಅಮೆರಿಕನ್ ಅಧಿಕಾರಿಗಳು ಬಂದು ತಪಾಸಣೆ ನಡೆಸಬಹುದು. ಪರಮಾಣು ವ್ಯವಹಾರ ಭಾರತ ಅಮೆರಿಕಾದ ಒಂದು ಮಿಲಿಟರಿ ಮಿತ್ರನಾಗಲಿಕ್ಕೆ ಎಂದು ಸಿಪಿಐ(ಎಂ) ಹೇಳುತ್ತ ಬಂದಿತ್ತು. ಈ ಅಂತಿಮ ಬಳಕೆ ತಪಾಸಣೆ ಒಪ್ಪಂದ ಭಾರತದ ಸಶಸ್ತ್ರ ಪಡೆಗಳನ್ನು ಅಮೆರಿಕಾದ ಮಿಲಿಟರಿ ವ್ಯವಸ್ಥೆ ಪೆಂಟಗಾನ್ ಗೆ ಇನ್ನಷ್ಟು ಕಟ್ಟಿ ಹಾಕುತ್ತದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಅಮೆರಿಕನ್ ವ್ಯಾಪಾರ-ವ್ಯವಹಾರ ಹಿತಾಸಕ್ತಿಗಳಿಗೆ ಭಾರತದ ನೀತಿ ನಿರ್ಧಾರಣೆಗಳಲ್ಲಿ ಆದ್ಯತೆ ನೀಡಲಾಗುವುದು ಎಂದು ಜಂಟಿ ಹೇಳಿಕೆ ತಿಳಿಸುತ್ತದೆ. ದ್ವಿಪಕ್ಷೀಯ ಹೂಡಿಕೆ ಒಪ್ಪಂದ ಮತ್ತು ಭಾರತ-ಅಮೆರಿಕ ಸಿಇಒ ವೇದಿಕೆಯ ಅಜೆಂಡಾವನ್ನು ಅಧಿಕೃತಗೊಳಿಸಲಾಗುವುದಂತೆ. ಅಂದರೆ ಈ ಲಾಬ್ಬಿ ಗುಂಪುಗಳ ಒತ್ತಡದಿಂದ ವಿಮೆ, ಬ್ಯಾಂಕಿಂಗ್, ಉನ್ನತ ಶಿಕ್ಷಣ ಮತ್ತಿತರ ವಲಯಗಳಲ್ಲಿ ನೇರ ಹೂಡಿಕೆಗೆ ಅವಕಾಶ ಮಾಡಿಕೊಡುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಆತಂಕ ವ್ಯಕ್ತಪಡಿಸಿದೆ.

ಇರಾನ್ ವಿರುದ್ಧ ವೈಷಮ್ಯದ ನಿಲುವು ತಳೆಯಬೇಕು, ದೋಹಾ ಸುತ್ತಿನ ಮಾತುಕತೆಗಳಲ್ಲಿ, ಇಂಗಾಲ ಕಲ್ಮಶಗಳನ್ನು ಕಡಿತ ಮಾಡುವಲ್ಲಿ ಭಾರತ ತನ್ನ ನಿಲುವುಗಳನ್ನು ಬದಲಿಸಬೇಕು ಎಂಬ ಒತ್ತಡಗಳಿಗೆ ತಲೆಬಾಗಬಾರದು, ಅಮೆರಿಕಾ ಜಿ-8 ಸಭೆಯ ನಂತರ ಪರಮಾಣು ಸಹಕಾರ ಕುರಿತಂತೆ ಎದ್ದಿರುವ ಸಂದೇಹಗಳೆಲ್ಲ ಪರಿಹಾರವಾಗುವ ವರೆಗೆ ಅಲ್ಲಿಯ ಪರಮಾಣು ರಿಯಾಕ್ಟರುಗಳ ಖರೀದಿಯ ಬಗ್ಗೆ ಯಾವುದೇ ವಾಣಿಜ್ಯ ಒಪ್ಪಂದಕ್ಕೆ ಬರಬಾರದು ಎಂದು ಅದು ಎಚ್ಚರಿಸಿದೆ.

ಜಾಗತಿಕ ಮಟ್ಟದಲ್ಲಿ 'ಪ್ರಜಾಪ್ರಭುತ್ವ' ವನ್ನು ಪ್ರೋತ್ಸಾಹಿಸುವುದಕ್ಕೆ ತಾವು ಬದ್ಧ ಎಂದು ಹಿಂದೆ ಬುಶ್-ಮನಮೋಹನ ಸಿಂಗ್ ಹೇಳಿಕೆಯಲ್ಲಿ ತಿಳಿಸಿದ್ದನ್ನು ಪುನರುಚ್ಚರಿಸಲಾಗಿದೆ. ಅಂದರೆ ಕಾಂಗ್ರೆಸ್(ಐ) ನೇತೃತ್ವದ ಸರಕಾರ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸೈದ್ಧಾಂತಿಕ ಉದ್ದಿಮೆಯಲ್ಲಿಯೂ ಭಾಗಿಯಾಗಲು ಹೊರಟಿದೆ.

ಈ ರೀತಿ ಭಾರತ ಹೆಚ್ಚೆಚ್ಚಾಗಿ ಅಮೆರಿಕದೊಂದಿಗೆ ಮಿಲಿಟರಿ ಬಲೆಯಲ್ಲಿ ಸಿಲುಕಿ ಕೊಳ್ಳುವುದು ಯುಪಿಎ ಸರಕಾರದ ವಿದೇಶಾಂಗ ನೀತಿಯ ಮುಖ್ಯ ಲಕ್ಷಣವಾಗುತ್ತಿದೆ ಎಂದು ಬಲವಾಗಿ ವಿರೋಧಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಏಕಪಕ್ಷೀಯ ಸಂಬಂಧಗಳನ್ನು ಗಟ್ಟಿಗೊಳಿಸುವ ಇಂತಹ ಕ್ರಮಗಳನ್ನು ಜನತೆ ವಿರೋಧಿಸಬೇಕು ಎಂದು ಮನವಿ ಮಾಡಿದೆ.



ಸೂರ್ಯ ಶಕ್ತಿಯಿಂದ ವಿದ್ಯುತ್

ಮಾಲಿನ್ಯಕ್ಕೆ ಕಡಿವಾಣ

ಕೈಗಾರಿಕಾ ಮಾಲಿನ್ಯದಿಂದಾಗಿ ಭೂಮಿಯ ತಾಪಮಾನ ಕಳೆದೊಂದು ಶತಮಾನದಿಂದೀಚೆಗೆ ಏರುತ್ತಲೇ ಇದೆ. ಇಂತಹ ದಿನಗಳಲ್ಲಿ ಸೂರ್ಯ ಶಕ್ತಿ ಅಥವಾ ಸೋಲಾರ್ ಶಕ್ತಿಯಿಂದ ನಡೆಯುವ ಸೋಲಾರ್ ವಾಟರ್ ಹೀಟರ್‌ಗಳು, ಬಲ್ಬ್‌ಗಳು, ಅಡುಗೆ ತಯಾರಿಕೆ, ನೀರೆತ್ತುವ ಪಂಪುಗಳು ಇತ್ಯಾದಿಗಳನ್ನು ನಾವು ಇತ್ತೀಚೆಗೆ ಹೆಚ್ಚೆಚ್ಚು ಕಾಣುತ್ತಿದ್ದೇವೆ. ಇತ್ತೀಚೆಗೆ ಸೋಲಾರ್ ಚಾಲಿತ ಕಾರುಗಳೂ ಕೂಡ ಮಾರುಕಟ್ಟೆಗೆ ಬಂದಿವೆ.

ಸೂರ್ಯ ಶಕ್ತಿಯನ್ನು ಹಿಡಿದಿಡುವ ಸವಾಲು:

ಸೂರ್ಯನಿಂದ ನಮ್ಮ ಭೂಮಿಯ ಮೇಲೆ ಬೀಳುತ್ತಿರುವ ಬೆಳಕನ್ನು ನಾವೇ ತಯಾರು ಮಾಡಿಕೊಳ್ಳಬೇಕಾಗಿದ್ದಲ್ಲಿ ಮಾನವ ಇನ್ನೆಷ್ಟು ವೆಚ್ಚ,



ಪ್ರಯಾಸ ಪಡುತ್ತಿದ್ದಾನೋ ಮತ್ತು ಮಾಲಿನ್ಯ ಉಂಟುಮಾಡುತ್ತಿದ್ದನೋ. ಭೂಮಿಯ ಮೇಲೆ ಒಂದು ವರ್ಷ ಕಾಲ ಮಾನವರಿಗೆ ಅಗತ್ಯವಿರುವಷ್ಟು ಬೆಳಕಿನ ಶಕ್ತಿಯನ್ನು ಸೂರ್ಯ ಒಂದೇ ಘಂಟೆಯಲ್ಲಿ ಸ್ಫೋಟಿಸುತ್ತಾನೆಂಬುದು ವಿಜ್ಞಾನಿಗಳ ಅಂದಾಜು. ಭೂಮಿಗೆ ಪುಕ್ಕಟೆಯಾಗಿ ತಲುಪುವ ಸೂರ್ಯಶಕ್ತಿಯಿಂದ ವಿದ್ಯುತ್ ತಯಾರಿಸುವಾಗ ಯಾವುದೇ ರೀತಿಯ ಇಂಗಾಲದ ಡೈ ಆಕ್ಸೈಡ್ ತರಹದ ಮಲಿನಕಾರಕ ಅನಿಲಗಳು ಹೊರಸೂಸುವುದಿಲ್ಲ. ಆದ್ದರಿಂದ ಇಷ್ಟೊಂದು ಅಗಾಧ ಪ್ರಮಾಣದ ಸೂರ್ಯಶಕ್ತಿಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿ ಕೊಳ್ಳಲು ಪ್ರಯತ್ನಗಳು ಸಾಗುತ್ತಲೇ ಇವೆ.

ಸೋಲಾರ್ ಶಕ್ತಿಯಿಂದ ವಿದ್ಯುತ್ ಹೇಗೆ?

ಸಾಮಾನ್ಯವಾಗಿ, ಸೂರ್ಯನ ಬೆಳಕು ನಮ್ಮ ಮೇಲೆ ಬಿದ್ದೊಡನೆ ನಾವು ತೊಟ್ಟಿರುವ ಬಟ್ಟೆ ಮತ್ತು ದೇಹ ಬಿಸಿಯಾಗುತ್ತದೆ. ಹಾಗೆಯೇ ಹಲವು ವಸ್ತುಗಳ ಮೇಲ್ಮೈ ಬಿಸಿಯಾಗುತ್ತದೆ. ಆದರೆ ಸಿಲಿಕಾನ್ ನಿಂದ ತಯಾರಿಸಿದ ದೊಡ್ಡ ಶೀಟುಗಳ ಮೇಲೆ ಸೂರ್ಯನ ಬೆಳಕು ಬಿದ್ದಾಗ ಅದು ಬಿಸಿಯಾಗುವುದರ ಬದಲಿಗೆ ವಿದ್ಯುತ್ ಕರೆಂಟನ್ನು ಹೊರಹೊಮ್ಮಿಸುತ್ತದೆ. ಏಕೆಂದರೆ, ಸಿಲಿಕಾನಿನಲ್ಲಿರುವ ಅಣುಗಳು ತಮ್ಮ ನಡುವಿನ ಬಂಧವನ್ನು ಸಡಿಲಿಸಿಕೊಂಡು ಅದರಲ್ಲಿರುವ ಎಲೆಕ್ಟ್ರಾನುಗಳು ಬೆಳಕಿನ ಶಕ್ತಿಯನ್ನು ಪಡೆಯುತ್ತವೆ. ಸೂರ್ಯನ ಬೆಳಕು ಬಿದ್ದಾಗ ಈ ಎಲೆಕ್ಟ್ರಾನುಗಳು ಬೆಳಕಿನ ಶಕ್ತಿಯನ್ನು ಪಡೆದು ಚಲಿಸಲಾರಂಭಿಸುತ್ತವೆ. ಹೀಗೆ ಎಲೆಕ್ಟ್ರಾನುಗಳ ಚಲನೆಯನ್ನು ವಿದ್ಯುತ್ತಾಗಿ ಪಡೆಯಲಾಗುತ್ತದೆ.

ಸಿಲಿಕಾನಿನಿಂದ ಸುಮಾರು ಶೇ. 20ರಷ್ಟು




ಸೂರ್ಯನ ಶಕ್ತಿಯುನ್ನು ವಿದ್ಯುತ್ತಾಗಿ ಪರಿವರ್ತಿಸಬಹುದಷ್ಟೆ. ಸೂರ್ಯನ ಬೆಳಕನ್ನು ವಿದ್ಯುತ್ತಾಗಿ ಪರಿವರ್ತಿಸುವ ಸಿಲಿಕಾನ್‌ನಂತಹ ಕೋಶಗಳಿಗೆ ಫೋಟೋವೋಲ್ಟಾಯಿಕ್ ಕೋಶಗಳೆಂದು ಕರೆಯುತ್ತಾರೆ. ಸಿಲಿಕಾನಿನಿಂದ ತಯಾರಿಸಿದ ಫೋಟೋವೋಲ್ಟಾಯಿಕ್ ಕೋಶಗಳು ತುಂಬಾ ತುಟ್ಟಿಯಾದ್ದರಿಂದ ಕಮ್ಮಿ ಬೆಲೆಯು ತಾಮ್ರ-ಇಂಡಿಯಂ-ಗಲ್ಲಿಯಂ-ಸೆಲೆನ್ಶೈಡ್ ನಂತಹ ವಸ್ತುಗಳನ್ನು ತೆಳುವಾದ ಫಿಲ್ಮ್ ಆಗಿ ಪರಿವರ್ತಿಸಿ ಬಳಸಲಾಗುತ್ತದೆ.

ನವೀಕರಿಸಬಹುದಾದ ಸಂಪನ್ಮೂಲ ಬಳಕೆಗೆ ಚೀನಾ ಬೃಹತ್ ಬಂಡವಾಳ:

ಸೋಲಾರ್ ವಿದ್ಯುತ್‌ನ್ನು ಉತ್ಪಾದಿಸಲು ತಗಲುವ ವೆಚ್ಚ ತುಂಬಾ ತುಟ್ಟಿ. ಅದು ಇ... ವಿದ್ಯುತ್ ಮೂಲಗಳಿಗಿಂತ ಐದು ಪಟ್ಟು ದುಬಾ... ಪ್ರತಿ ಯೂನಿಟ್‌ಗೆ ಸುಮಾರು ರೂ. 15 ರಿಂ... 30/- ವರೆಗೂ ವೆಚ್ಚ ತಗುಲುತ್ತದ... ಪರಿಣಾಮಕಾರಿಯಾದ ಮತ್ತು ಅತಿ ಕಮ್ಮಿ ಬೆಲೆ... ಫೋಟೋ ವೋಲ್ಟಾಯಿಕ್ ಕೋಶಗಳನ್ನು ಆವಿಷ್ಕರಿಸುವುದು ಇಂದು ತುರ್ತು ಅಗತ್ಯವಿ... ಏಕೆಂದರೆ, ಕಲ್ಲಿದ್ದಲು ಕೆಲವೇ ವರ್ಷಗಳ... ಮುಗಿದುಹೋಗುತ್ತದೆ. ಜಲ ವಿದ್ಯುತ್ ತಯಾರಿ... ಮಿತಿಯಿದೆ. ಈ ಹಿನ್ನೆಲೆಯಲ್ಲಿ ಸೋಲಾರ್ ಶ... ವಾಯುಶಕ್ತಿಯಂತಹ ನವೀಕರಿಸಬಹುದಾ... ವಿದ್ಯುತ್ ಮೂಲಗಳನ್ನು ವ್ಯಾಪಕವಾ... ಬಳಸಿಕೊಳ್ಳುವುದೊಂದೇ ದಾರಿ.

2020ರ ಹೊತ್ತಿಗೆ, ಚೀನಾ ಸರ್ಕಾ... ಈಗ ಕಲ್ಲಿದ್ದಲು ಆಧಾರಿತ ವಿದ್ಯುತ್‌ಗೆ ಅ... ಬಂಡವಾಳ ಹೂಡುತ್ತಿರುವುದಕ್ಕಿಂತ ಹೆಚ್ಚ... ಪ್ರಮಾಣದ ಬಂಡವಾಳವನ್ನು ಸೋಲಾ... ವಿದ್ಯುತ್ತಿನಂತಹ ನವೀಕರಿಸಬಹುದಾ... ಯೋಜನೆಗಳ ಮೇಲೆ ಹೂಡಲು ಇದಕ್ಕಾ... ಚೀನಾ ಕಾಯಿದೆಯನ್ನೇ ಜಾರಿಗೆ ತಂದಿ... ಸೋಲಾರ್ ಫೋಟೋವೋಲ್ಟಾಯಿ... ಕೋಶಗಳ ತಯಾರಿಕೆ ಮತ್ತು ಸೋಲಾರ್ ವಿದ್ಯುತ... ಉತ್ಪಾದನೆಯಲ್ಲಿ ಚೀನಾ ವಿಶ್ವದಲ್ಲಿಯೆ... ಮುಂಚೂಣಿಯಲ್ಲಿದೆ. ಭಾರತದಲ್ಲೂ ಕೂ... ರಾಜಸ್ತಾನದ ಥಾರ್ ಮರುಭೂಮಿಯಂತ...



ಪ್ರದೇಶದಲ್ಲಿ ಬೃಹತ್ ಪ್ರಮಾಣದ ಸೋಲಾ... ವಿದ್ಯುತ್ ಸ್ಥಾವರ ಸ್ಥಾಪಿಸ... ಯೋಜಿಸಲಾಗಿತ್ತಾದರೂ ದುಬಾರಿ ವೆಚ್ಚದಿಂದಾ... ಅದು ನೆನೆಗುದಿಗೆ ಬಿದ್ದಿದೆ.


ಆದರೆ ಫೋಟೋವೋಲ್ಟಾಯಿಕ... ಕೋಶಗಳನ್ನು ಖರೀದಿಸಲು ಒಮ್ಮೆ ಹಣ... ತೊಡಗಿಸಿದರೆ ಸಾಕು, ಅವು ಏನಿಲ್ಲವೆಂದರೂ 4... ವರ್ಷ ಬಾಳಿಕೆ ಬರುತ್ತವೆ. ಹಾಗೂ ಕಲ್ಲಿದ್ದಲ... ಅಥವಾ ಇತರೆ ಮೂಲಗಳಿಂದ ತಯಾರಿಸಲಾಗು... ವಿದ್ಯುತ್‌ಗೆ ಹೋಲಿಸಿ ದಲ... ಮಾಲಿನ್ಯವುಂಟಾಗುವುದಿಲ್ಲ. ಹಾಗೂ ಕಲ್ಲಿದ್ದಲಿನಂ... ಬಹುಬೇಗನೆ ಮುಗಿದು ಹೋಗುವ ಸಂಪನ್ಮೂಲವ... ಅಲ್ಲ. ಸೂರ್ಯ ಶಕ್ತಿಯು ಸದ್ಯಕ್ಕೆ ಮೊಗೆದಷ್ಟು ದೊರೆಯುತ್ತಾ ಹೋಗುವಷ್ಟು ಅಗಾಧ ಪ್ರಮಾಣದಲ್ಲಿದೆ.

ಜುಲೈ 22 ರಂದು ಸಂಭವಿಸಿದ ಸೂರ್ಯಗ್ರಹಣದ ದೃಶ್ಯಗಳು

ವಾರಣಾಸಿಯಲ್ಲಿ ಕಂಡ ದೃಶ್ಯ



ಗ್ರಹಣದ ವಿವಿಧ ದೃಶ್ಯಗಳು



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH